ಸೋಮವಾರ, ಜುಲೈ 21, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾರತ ತಂಡಕ್ಕೆ ಅನ್ಷುಲ್

ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ತಂಡದ ಎಡಗೈ ಬೌಲರ್ ಅರ್ಷದೀಪ್ ಸಿಂಗ್ ಗಾಯಗೊಂಡಿದ್ದು, ಅವರ ಸ್ಥಾನಕ್ಕೆ ಹರಿಯಾಣದ ವೇಗಿ ಅನ್ಷುಲ್ ಕಾಂಭೋಜ್ ಅವರನ್ನು ಆಯ್ಕೆ ಮಾಡಲಾಗಿದೆ

ಎನ್‌ಡಿಆರ್‌ಎಫ್‌ಗೆ ಶ್ವಾನ

ಕಾರ್ಯಾಚರಣೆ ಸಂದರ್ಭದಲ್ಲಿ ಮೃತದೇಹಗಳ ಪತ್ತೆಗೆ ಸಹಾಯಕವಾಗಲಿ ಎಂಬ ಉದ್ದೇಶದಿಂದ ಶ್ವಾನಗಳನ್ನು ಸೇವೆಗೆ ಸೇರಿಸಿಕೊಳ್ಳಲು ಎನ್‌ಡಿಆರ್‌ಎಫ್ ನಿರ್ಧರಿಸಿದೆ

83 ಸಾರ್ಥಕ ವಸಂತಗಳನ್ನು ಪೂರೈಸಿ
84ನೇ ವಸಂತಕ್ಕೆ ಕಾಲಿಡುತ್ತಿರುವ
ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು,
ರಾಜ್ಯಸಭೆ ವಿರೋಧ ಪಕ್ಷದ ನಾಯಕರು,
ಕರ್ನಾಟಕದ ಹೆಮ್ಮೆಯ ಸುಪುತ್ರರಾದ,
ಜನಪ್ರಿಯ ನಾಯಕರು,
ಕಾಂಗ್ರೆಸ್ ಪಕ್ಷದ ಕಟ್ಟಾಳು
ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಅವರಿಗೆ
ಸಮಸ್ತ ಕನ್ನಡಿಗರ ಪರವಾಗಿ
ಹುಟ್ಟುಹಬ್ಬದ
ಶುಭಾಶಯಗಳು.
-: ಶುಭಕೋರುವವರು :-
ಅಧ್ಯಕ್ಷರು,
ಪದಾಧಿಕಾರಿಗಳು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

ಸೋಮವಾರ, ಜುಲೈ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 201 | ಪುಟ 14

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಚ್ಚಾ ಬಾಂಬ್ ಪತ್ತೆ

ಜಾರ್ಖಂಡ್‌ನ ಪಶ್ಚಿಮ ಸಿಂಹಭೂಮಿ ಮತ್ತು ಸರಾಯ್‌ಕೆಲಾ ಜಿಲ್ಲೆಗಳ ಅರಣ್ಯದ ವಿವಿಧೆಡೆ ನಕ್ಸಲರು ಹುದುಗಿಸಿಟ್ಟಿದ್ದ 14 ಕಚ್ಚಾ ಬಾಂಬ್‌ಗಳನ್ನು ಭದ್ರತಾ ಪಡೆಗಳು ಭಾನುವಾರ ಪತ್ತೆಹಚ್ಚಿ ನಿಷ್ಕ್ರಿಯಗೊಳಿಸಿವೆ

ಶ್ರೀಹರಿ ದಾಖಲೆ

ಜರ್ಮನಿಯಲ್ಲಿ ನಡೆಯುತ್ತಿರುವ ಜಾಗತಿಕ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಈಜು ವಿಭಾಗದ 100 ಮೀ ಫ್ರೀಸ್ಟೈಲ್‌ನಲ್ಲಿ ಬೆಂಗಳೂರಿನ ಶ್ರೀಹರಿ ನಟರಾಜ್, 49.46 ಸೆಕೆಂಡುಗಳಲ್ಲಿ ಗುರಿ ಮುಟ್ಟಿ 'ಬೆಸ್ಟ್ ಇಂಡಿಯನ್ ಟೈಮ್' ದಾಖಲಿಸಿದರು

ಅನಿಲ: ಏಕರೂಪಿ ಶುಲ್ಕಕ್ಕೆ ಆದೇಶ 8

'ಒಂಗೆ' ಬುಡಕಟ್ಟಿನ 'ನವ'ತಾರೆಗಳು 9

'ಧರ್ಮಸ್ಥಳ' ಪ್ರಕರಣಕ್ಕೆ ಎಸ್‌ಐಟಿ

ನೂರಾರು ಅತ್ಯಾಚಾರ, ಕೊಲೆ ನಡೆದಿರುವ ಆರೋಪ

ಯಾರಿದ್ದಾರೆ?

ಮುಖ್ಯಸ್ಥ: ಪ್ರಣವ ಮೊಹಾಂತಿ, ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ, **ಸದಸ್ಯರು: ಎಂ.ಎನ್.ಅನುಚೇತ್,** ನೇಮಕಾತಿ ವಿಭಾಗದ ಡಿಐಜಿ, **ಸೌಮ್ಯಲತಾ,** ಸಿಎಆರ್ ಕೇಂದ್ರ ಸ್ಥಾನದ ಡಿಸಿಪಿ, **ಜಿತೇಂದ್ರ ಕುಮಾರ್ ದಯಾಮ,** ಆಂತರಿಕ ಭದ್ರತಾ ವಿಭಾಗದ ಎಸ್‌ಪಿ

ಪ್ರಣವ ಮೊಹಾಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ಸಮಗ್ರ ತನಿಖೆಗೆ ರಾಜ್ಯ ಸರ್ಕಾರವು ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾ ನಿರ್ದೇಶಕ ಪ್ರಣವ ಮೊಹಾಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

ಧರ್ಮಸ್ಥಳ ಗ್ರಾಮದಲ್ಲಿ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ರಾಜ್ಯ ಮಹಿಳಾ ಆಯೋಗವು ಜುಲೈ 14ರಂದು ಸರ್ಕಾರಕ್ಕೆ ಪತ್ರ ಬರೆದಿತ್ತು. ಅಲ್ಲದೆ, ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ದಾಖಲಿಸಿದ್ದ ಹೇಳಿಕೆಯಲ್ಲಿನ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ವಕೀಲರು, ಸಾಮಾಜಿಕ ಕಾರ್ಯಕರ್ತರು ಒತ್ತಾಯಿಸಿದ್ದರು.

ಈ ಸಂಗತಿಗಳು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಯಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಜಿ. ಪರಮೇಶ್ವರ ಜೊತೆ ಸಮಾಲೋಚನೆ ನಡೆಸಿ, ಆರೋಪಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ವಿಶೇಷ ತಂಡ ರಚಿಸುವ ಬಗ್ಗೆಯೂ ಯೋಚಿಸಿದ್ದರು.

ಇದೀಗ ಎಸ್‌ಐಟಿ ರಚಿಸಿ ಗೃಹ ಇಲಾಖೆಯು ಆದೇಶ ಹೊರಡಿಸಿದೆ. ಆರೋಪ ಕೇಳಿಬಂದ ಪ್ರಕರಣಗಳೂ ಸೇರಿದಂತೆ, ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ಈ ಸಂಬಂಧ ದಾಖಲಾಗಿರುವ ಮತ್ತು ದಾಖಲಾಗಬಹುದಾದ ಎಲ್ಲ ಅಪರಾಧ ಪ್ರಕರಣಗಳ ತನಿಖೆ ನಡೆಸುವಂತೆ ತಂಡಕ್ಕೆ ನಿರ್ದೇಶನ ನೀಡಲಾಗಿದೆ. ಆರೋಪಗಳ ಕುರಿತಂತೆ ಈಗಾಗಲೇ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ಪೊಲೀಸ್ ಮಹಾನಿರ್ದೇಶಕರು ತನಿಖಾ ತಂಡಕ್ಕೆ ವರ್ಗಾಯಿಸಿ, ಅಗತ್ಯ ಇರುವ ಅಧಿಕಾರಿ, ಸಿಬ್ಬಂದಿಯನ್ನು ಒದಗಿಸಬೇಕು. ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಲಭ್ಯ ಇರುವ ಸಂಪನ್ಮೂಲಗಳನ್ನು ತನಿಖಾ ತಂಡ ಬಳಸಿಕೊಳ್ಳಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

▶5

ಎಸ್‌ಐಟಿಗೆ ವಹಿಸಿರುವ ಪ್ರಕರಣಗಳು ಯಾವುವು?

- ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ಮೊಕದ್ದಮೆ ಸಂಖ್ಯೆ 39/2025 ಪ್ರಕರಣ
- ಕಳೆದ 20 ವರ್ಷಗಳಲ್ಲಿ ಧರ್ಮಸ್ಥಳ ವ್ಯಾಪ್ತಿಯಲ್ಲಿ ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ನಾಪತ್ತೆ, ಅಸ್ವಾಭಾವಿಕ ಸಾವು, ಕೊಲೆ, ಅತ್ಯಾಚಾರ, ದೌರ್ಜನ್ಯ ಪ್ರಕರಣ
- ಧರ್ಮಸ್ಥಳದಲ್ಲಿ ನಡದಿದೆ ಎನ್ನಲಾದ ಪ್ರಕರಣಗಳ ಸಂಬಂಧ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮತ್ತು ದಾಖಲಾಗಬಹುದಾದ ಎಲ್ಲ ಅಪರಾಧ ಪ್ರಕರಣ

'ಮುಚ್ಚಿಟ್ಟುಕೊಳ್ಳುವಂಥದ್ದು ಏನೂ ಇಲ್ಲ'

'ಧರ್ಮಸ್ಥಳದಲ್ಲಿ ಈ ಹಿಂದೆ ನಡೆದಿವೆ ಎನ್ನಲಾದ ಅಪರಾಧ ಪ್ರಕರಣಗಳಲ್ಲಿ ಸರ್ಕಾರ ಮುಚ್ಚಿಟ್ಟುಕೊಳ್ಳುವಂಥದ್ದು ಅಥವಾ ಯಾರನ್ನೂ ರಕ್ಷಿಸಬೇಕು ಎನ್ನುವಂಥದ್ದು ಏನೂ ಇಲ್ಲ. ನ್ಯಾಯ ಸಿಗಬೇಕು ಅಷ್ಟೆ. ಆ ಕಾರಣಕ್ಕೆ ಉನ್ನತ ಮಟ್ಟದ ತನಿಖೆಗೆ ಎಸ್‌ಐಟಿ ರಚಿಸಿದ್ದೇವೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಯುತವಾಗಿ ತನಿಖೆ ನಡೆಸುವಂತೆ ಸೂಚನೆ ನೀಡಿದ್ದೇವೆ' ಎಂದರು.

'ಈ ಪ್ರಕರಣಗಳ ಬಗ್ಗೆ ಒಬ್ಬ ವ್ಯಕ್ತಿ ದೂರು ಕೊಟ್ಟಿದ್ದಾರೆ. ನ್ಯಾಯಾಧೀಶರ ಮುಂದೆ ಸಿಆರ್‌ಪಿಸಿ ಸೆಕ್ಷನ್ 164ರ ಅಡಿ ಹೇಳಿಕೆಯೂ ದಾಖಲಾಗಿದ್ದು, ತನಿಖೆಗೆ ಆದೇಶ ನೀಡಲಾಗಿತ್ತು. ಉನ್ನತ ಮಟ್ಟದಲ್ಲಿ ತನಿಖೆ ಆಗಬೇಕೆಂದು ಬಹಳಷ್ಟು ಜನ ಒತ್ತಾಯಿಸಿದ್ದರು' ಎಂದರು.

▶5

'ಮಹಿಳಾ ಆಯೋಗದ ಮನವಿಯಂತೆ ಎಸ್‌ಐಟಿ'

'ಧರ್ಮಸ್ಥಳ ಪ್ರದೇಶದಲ್ಲಿ ಅಸಹಜ ಸಾವುಗಳು, ಕೊಲೆ, ಅತ್ಯಾಚಾರ ಹೀಗೆ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳು ನಡೆದಿರಬಹುದಾಗಿದ್ದು, ಈ ಎಲ್ಲ ಸಾಧ್ಯತೆಗಳನ್ನು ಪರಿಗಣಿಸಿ ಪ್ರಕರಣದ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ರಾಜ್ಯ ಮಹಿಳಾ ಆಯೋಗವು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಆಯೋಗದ ಕೋರಿಕೆ ಮೇರೆಗೆ ವಿಶೇಷ ತನಿಖಾ ತಂಡ ರಚಿಸಲಾಗಿದೆ' ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

'ಧರ್ಮಸ್ಥಳ ಭಾಗದಲ್ಲಿ ನೂರಾರು ಶವಗಳನ್ನು ಹೂತಿರುವುದಾಗಿ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ಹೇಳಿಕೆಯನ್ನು ದಾಖಲಿಸಿದ್ದಾರೆ. ವಿಶೇಷ ತನಿಖಾ ತಂಡವು ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ದೂರು ಸೇರಿದಂತೆ ಇದಕ್ಕೆ ಸಂಬಂಧಪಟ್ಟಂತೆ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಾಗೂ ದಾಖಲಾಗುವ ಎಲ್ಲ ಕ್ರಿಮಿನಲ್ ಪ್ರಕರಣಗಳನ್ನು ಸಮಗ್ರವಾಗಿ ತನಿಖೆ ನಡೆಸಿ, ವರದಿ ನೀಡಲಿದೆ' ಎಂದಿದ್ದಾರೆ.

ಶಾಸಕ ಚವಾಣ್ ಮಗನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೀದರ್: ಮದುವೆ ಆಗುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯವೆಸಗಿದ ಆರೋಪದಡಿ ಔರಾದ್ ಕ್ಷೇತ್ರದ ಶಾಸಕ ಪ್ರಭು ಚವಾಣ್ ಅವರ ಮಗ ಪ್ರತೀಕ್ ಚವಾಣ್ ವಿರುದ್ಧ ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

ಮಹಾರಾಷ್ಟ್ರದ ಉದಗೀರ್ ಬಳಿಯ ಗ್ರಾಮವೊಂದರ ಯುವತಿ ದೂರು ನೀಡಿದ್ದರು. '2023ರ ಡಿ. 25ರಂದು ಔರಾದ್ ತಾಲ್ಲೂಕಿನ ಘಮಸುಬಾಯಿ ಬೊಂತಿ ತಾಂಡಾದಲ್ಲಿ ಪ್ರತೀಕ್ ಜತೆ ನಿಶ್ಚಿತಾರ್ಥವಾಗಿದೆ' ಎಂದಿದ್ದಾರೆ.

▶8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಇಂದಿನಿಂದ ಮುಂಗಾರು ಅಧಿವೇಶನ • ವಿಪಕ್ಷ ರಣತಂತ್ರ

ಕಾವೇರಿದ ಚರ್ಚೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ/ ಪಿಟಿಐ

ರಾಜಕೀಯ ಪಕ್ಷಗಳು ಭಿನ್ನ ಸಿದ್ಧಾಂತ ಹೊಂದಿರಬಹುದು. ಆದರೆ, ಕಲಾಪ ಸುಗಮವಾಗಿ ನಡೆಯುವುದನ್ನು ಖಾತರಿಪಡಿಸುವುದು ಎಲ್ಲರ ಜವಾಬ್ದಾರಿ

ಕಿರಣ್ ರಿಜಿಜು, ಸಂಸದೀಯ ವ್ಯವಹಾರಗಳ ಸಚಿವ

ಭಾರತ–ಪಾಕ್ ಸಂಘರ್ಷದಂತಹ ಪ್ರಮುಖ ವಿಷಯದ ಬಗ್ಗೆ ಸಂಸತ್ತಿನ ಮೂಲಕ ದೇಶದ ಜನರೊಂದಿಗೆ ಮಾತನಾಡುವುದು ಪ್ರಧಾನಿಯ ಕರ್ತವ್ಯ

ಗೌರವ್ ಗೊಗೊಯ್, ಕಾಂಗ್ರೆಸ್ ಮುಖಂಡ

ನವದೆಹಲಿ: ಪಹಲ್ಗಾಮ್ ದಾಳಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ, ಆಪರೇಷನ್ ಸಿಂಧೂರ, ಭಾರತ–ಪಾಕ್ ಕದನ ವಿರಾಮ ಕುರಿತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ನೀಡುತ್ತಿರುವ ಹೇಳಿಕೆಗಳು ಮತ್ತು ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಸೇರಿದಂತೆ ಹಲವು ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲು ವಿರೋಧ ಪಕ್ಷಗಳು ಸಜ್ಜಾಗಿವೆ.

ಹೀಗಾಗಿ, ಸೋಮವಾರ ಆರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಕಾವೇರಿದ ಚರ್ಚೆ, ಕೋಲಾಹಲ ನಡೆಯುವ ಸಾಧ್ಯತೆಗಳಿವೆ.

ಸಂಸತ್ತಿನ ಕಲಾಪ ಸುಗಮವಾಗಿ ನಡೆಯಲು ಸರ್ಕಾರವು ವಿರೋಧ ಪಕ್ಷಗಳ ಸಹಕಾರ ಕೋರಿದೆ. ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ನೇತೃತ್ವದಲ್ಲಿ ಭಾನುವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ವಿರೋಧ ಪಕ್ಷಗಳು ಹಲವು ವಿಷಯಗಳನ್ನು ಪ್ರಸ್ತಾಪಿಸಿ, ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿವೆ.

ಅಹಮದಾಬಾದ್ ವಿಮಾನ ದುರಂತ, ಕೊಳೆಗೇರಿಗಳ ತೆರವು ಕಾರ್ಯಾಚರಣೆ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಬಂಗಾಳಿ ಭಾಷಿಕರನ್ನು ಗುರಿಯಾಗಿಸುವುದು ಹಾಗೂ ಒಡಿಶಾದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ವಿಷಯಗಳ ಕುರಿತೂ ಚರ್ಚೆಗೆ ಅವಕಾಶ ನೀಡುವಂತೆ ವಿಪಕ್ಷಗಳು ಒತ್ತಾಯಿಸಿವೆ.

ಸರ್ವ ಪಕ್ಷಗಳ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಸಭೆ ಅತ್ಯಂತ ರಚನಾತ್ಮಕವಾಗಿ ನಡೆಯಿತು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಸಮನ್ವಯದೊಂದಿಗೆ ಒಟ್ಟಾಗಿ ಕೆಲಸ ಮಾಡಬೇಕಿದೆ' ಎಂದು ಹೇಳಿದರು.

'ವಿವಿಧ ಪಕ್ಷಗಳು ಸಭೆಯಲ್ಲಿ ಹಲವು ವಿಷಯಗಳನ್ನು ಎತ್ತಿವೆ. ಆಪರೇಷನ್ ಸಿಂಧೂರದಂತಹ ವಿಷಯಗಳ ಕುರಿತು ಸರ್ಕಾರ ಮುಕ್ತ ಮನಸ್ಸಿನೊಂದಿಗೆ ಚರ್ಚೆಗೆ ಸಿದ್ದವಾಗಿದೆ' ಎಂದರು.

ಸರ್ವಪಕ್ಷಗಳ ಸಭೆಯಲ್ಲಿ 51 ಪಕ್ಷಗಳ 54 ಪ್ರತಿನಿಧಿಗಳು ಭಾಗವಹಿಸಿದ್ದು, ಅವರಲ್ಲಿ 40 ಮಂದಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

'ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ವಿಸ್ತರಿಸುವ ನಿರ್ಣಯದ ಜತೆ, ಸರ್ಕಾರವು ಎಂಟು ಹೊಸ ಮಸೂದೆಗಳನ್ನು ಮಂಡಿಸುವ ಉದ್ದೇಶವನ್ನು ಹೊಂದಿದೆ. ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಮಂಡಿಸುವ ಯೋಚನೆಯೂ ಇದೆ' ಎಂದರು.

'ಪ್ರಧಾನಿ ಪ್ರತಿಕ್ರಿಯೆ: ಸಾಧ್ಯತೆ ಕಡಿಮೆ'

ವಿರೋಧ ಪಕ್ಷಗಳು ಎತ್ತಿರುವ ವಿಷಯಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ಪ್ರತಿಕ್ರಿಯಿಸುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿವೆ.

ಆದರೂ, ಭಾರತ–ಪಾಕಿಸ್ತಾನ ಕದನ ವಿರಾಮದ ಕುರಿತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಹೇಳಿಕೆಗಳ ಬಗ್ಗೆ ಚರ್ಚೆ ನಡೆದಾಗಲೆಲ್ಲಾ ಸರ್ಕಾರ ಸೂಕ್ತವಾಗಿ ಪ್ರತಿಕ್ರಿಯಿಸಲಿದೆ ಎಂದು ಕಿರಣ್ ರಿಜಿಜು ಪ್ರತಿಪಾದಿಸಿದ್ದಾರೆ.

ಅನುದಾನಿತ ಪದವಿ ಕಾಲೇಜುಗಳಿಂದ ವಿಭಜನೆಯಾಗಿರುವ ಪಿಯು ಕಾಲೇಜುಗಳು

25 ವರ್ಷವಾದರೂ ಸೃಷ್ಟಿಯಾಗಿಲ್ಲ ಹುದ್ದೆ!

• ಎ.ಎಂ.ಸುರೇಶ

ಬೆಂಗಳೂರು: ರಾಜ್ಯದಲ್ಲಿನ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಿಂದ, ಪದವಿ ಪೂರ್ವ ಕಾಲೇಜುಗಳು ವಿಭಜನೆಯಾಗಿ 25 ವರ್ಷಗಳಾಗಿವೆ. ಆದರೆ, ಇದುವರೆಗೂ ವಿಷಯವಾರು ಹುದ್ದೆಗಳು ಸೃಷ್ಟಿಯಾಗಿಲ್ಲ ಹಾಗೂ ಖಾಲಿ ಇರುವ ಹುದ್ದೆಗಳನ್ನೂ ತುಂಬಿಲ್ಲ. ಇದರಿಂದಾಗಿ ಸಾವಿರಾರು ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿರ್ದೇಶನದಂತೆ 2001ರಲ್ಲಿ ರಾಜ್ಯದಲ್ಲಿನ 164 ಅನುದಾನಿತ ಪದವಿ ಕಾಲೇಜುಗಳಿಂದ, ಪದವಿ ಪೂರ್ವ ಕಾಲೇಜುಗಳನ್ನು ಪ್ರತ್ಯೇಕಗೊಳಿಸಲಾಯಿತು. ಯುಜಿಸಿ ವೇತನ ಸೇರಿದಂತೆ ವಿವಿಧ ಸೌಲಭ್ಯಗಳು ಸಿಗಲಿವೆ ಎಂಬ ಕಾರಣಕ್ಕೆ ಆಗ ಬಹುತೇಕ ಉಪನ್ಯಾಸಕರು ಪದವಿ ಕಾಲೇಜುಗಳಲ್ಲೇ ಉಳಿದುಕೊಂಡರು. ಇದಾದ ಬಳಿಕ ವಿಭಜಿತ ಪಿಯು ಕಾಲೇಜುಗಳಲ್ಲಿ ಹುದ್ದೆಗಳ ಸೃಷ್ಟಿ, ನೇಮಕಾತಿ ಆಗಿಲ್ಲ ಎಂದು ಉಪನ್ಯಾಸಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಯುಜಿಸಿ ವೇತನ ಶ್ರೇಣಿಯನ್ನು ಎಲ್ಲರಿಗೂ ನೀಡಲು ಸಾಧ್ಯವಿಲ್ಲ. ಪದವಿ ಕಾಲೇಜುಗಳಿಂದ ಪದವಿ ಪೂರ್ವ ಕಾಲೇಜುಗಳನ್ನು ಪ್ರತ್ಯೇಕಗೊಳಿಸಬೇಕು. ಆ ರೀತಿ ಮಾಡಿದರೆ ಮಾತ್ರ ಅನುದಾನ, ಯುಜಿಸಿ ವೇತನ ಶ್ರೇಣಿ ಸಿಗಲಿದೆ ಎಂದು ಅನುದಾನ ಆಯೋಗ ಷರತ್ತು ವಿಧಿಸಿದ ಕಾರಣ ಪಿಯು ವಿಭಾಗವನ್ನು ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಿಂದ ವಿಭಜಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆ ವ್ಯಾಪ್ತಿಗೆ ತರಲಾಗಿದೆ.

▶8

ಮುಖ್ಯಾಂಶಗಳು

- ಪಿಯು ಕಾಲೇಜು ಆಯ್ಕೆ ಮಾಡಿಕೊಂಡಿದ್ದ 544 ಉಪನ್ಯಾಸಕರು
- ಯುಜಿಸಿ ನಿರ್ದೇಶನದಂತೆ ವಿಭಜನೆ
- ಅನಾಥವಾಗಿರುವ ಪ್ರತ್ಯೇಕ ಪಿಯು ಕಾಲೇಜುಗಳು

'ಒಮ್ಮೆ ಅನುದಾನಕ್ಕೆ ಒಳಪಡಿಸಿ'

ಸದ್ಯ ಅಸ್ತಿತ್ವದಲ್ಲಿ ಇರುವ 156 ಅನುದಾನಿತ ಪ್ರತ್ಯೇಕ ಪಿಯು ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಕಡಿಮೆ ವೇತನಕ್ಕೆ ದುಡಿಯುತ್ತಿರುವ ಉಪನ್ಯಾಸಕರ ಪೈಕಿ ಹಲವರು ನಿವೃತ್ತಿಯ ಅಂಚಿನಲ್ಲಿದ್ದಾರೆ. ವಿಷಯವಾರು ಹುದ್ದೆಗಳನ್ನು ಸೃಷ್ಟಿಸಿ ವೇತನ ಅನುದಾನಕ್ಕೆ ಒಳಪಡಿಸುವ ಮೂಲಕ ನ್ಯಾಯ ದೊರಕಿಸಿಕೊಡಬೇಕು ಎಂಬುದು ಉಪನ್ಯಾಸಕರ ಬೇಡಿಕೆ.

ಅನುದಾನಕ್ಕೆ ಒಳಪಡಬಹುದು ಎಂಬ ಭರವಸೆಯಿಂದ 15–20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇವೆ. ಈ ಹಂತದಲ್ಲಿ ಬೇರೆ ಕಡೆ ಹೋಗುವಂತೆಯೂ ಇಲ್ಲ. ಈಗ ಇರುವ ಸಿಬ್ಬಂದಿಯನ್ನಾದರೂ ಕಾಯಂ ಮಾಡಿದರೆ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ಉಪನ್ಯಾಸಕರೊಬ್ಬರು ತಿಳಿಸಿದರು.

ಇದು ಹಳೇ ವಿಷಯ. ಪಿಯು ಕಾಲೇಜುಗಳು ಪ್ರತ್ಯೇಕವಾದಾಗಲೇ ಇದನ್ನು ಬಗೆಹರಿಸಿಕೊಳ್ಳಬೇಕಿತ್ತು. ಈಗ ಏನೂ ಮಾಡಲು ಸಾಧ್ಯವಿಲ್ಲ.

ಹಿರಿಯ ಅಧಿಕಾರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಭಾರಿ ಪ್ರಮಾಣದ ಮಳೆ ಸುರಿಯಲಿದೆ.

ಬಿಕ್ಲು ಶಿವ ಹತ್ಯೆ ಪ್ರಕರಣ: ಮತ್ತಿಬ್ಬರು ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರು ಆರೋಪಿಗಳನ್ನು ಭಾರತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 7ಕ್ಕೆ ಏರಿಕೆಯಾಗಿದೆ.

ಅರುಣ್ ಮತ್ತು ನವೀನ್ ಬಂಧಿತರು. ಆರೋಪಿಗಳನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಪೊಲೀಸ್ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಿರಣ್, ವಿಮಲ್, ಪ್ರದೀಪ್, ಮದನ್ ಹಾಗೂ ಸ್ಯಾಮ್ಯುವೆಲ್‌ನನ್ನು ಈ ಹಿಂದೆ ಬಂಧಿಸಲಾಗಿತ್ತು.

ಪ್ರಕರಣದ 5ನೇ ಆರೋಪಿಯಾಗಿರುವ ಕೆ.ಆರ್.ಪುರ ವಿಧಾನ ಸಭಾ ಕ್ಷೇತ್ರದ ಶಾಸಕ ಬೈರತಿ ಬಸವರಾಜು ಅವರನ್ನು ಶನಿವಾರ ವಿಚಾರಣೆ ನಡೆಸಲಾಗಿತ್ತು. ತಲೆಮರೆಸಿಕೊಂಡಿರುವ ಪ್ರಮುಖ ಆರೋಪಿ ಜಗದೀಶ ಅಲಿಯಾಸ್ ಜಗ್ಗನಿಗಾಗಿ ತೀವ್ರ ಶೋಧ ನಡೆಸಿದ್ದಾರೆ.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಶಿವಪ್ರಕಾಶ್‌ನನ್ನು ಹಲಸೂರು ಮನೆ ಎದುರು ಕಳೆದ ಮಂಗಳವಾರ ರಾತ್ರಿ ಕಾರಿನಲ್ಲಿ ಬಂದಿದ್ದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಶಿವಪ್ರಕಾಶ್ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ದೂರು ದಾಖಲಾಗಿತ್ತು. ಭಾರತಿನಗರ ಠಾಣೆಯಲ್ಲಿ ಶಿವಪ್ರಕಾಶ್ ವಿರುದ್ಧ 2023ರಲ್ಲಿ ರೌಡಿ ಪಟ್ಟಿ ತೆರೆಯಲಾಗಿತ್ತು.

ಬುದ್ಧಿವಾದ ಹೇಳಿದ್ದಕ್ಕೆ ಕೊಲೆಗೆ ಯತ್ನ

ಮದುವೆ ಆಗುವಂತೆ ವಿವಾಹಿತೆಗೆ ಒತ್ತಾಯ ಮಾಡುತ್ತಿದ್ದ ಯುವಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಾಹಿತ ಮಹಿಳೆಗೆ ಮದುವೆಯಾಗುವಂತೆ ಕಿರುಕುಳ ನೀಡುತ್ತಿದ್ದ ಯುವಕನಿಗೆ ಬುದ್ಧಿ ಹೇಳಿದವನ ಕುತ್ತಿಗೆ ಕೊಯ್ದು ಕೊಲೆಗೆ ಯತ್ನಿಸಿರುವ ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಚಾಕು ಇರಿತದಿಂದ ಗಾಯಗೊಂಡಿರುವ, ಖಾಸಗಿ ಕಂಪನಿಯ ಮಾರಾಟ ಪ್ರತಿನಿಧಿ ಪ್ರಶಾಂತ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಕೃತ್ಯವೆಸಗಿ ಪರಾರಿಯಾಗಲು ಯತ್ನಿಸಿದ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ನಿವಾಸಿ ಕಾರ್ತಿಕ್ (24) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಕಾರ್ತಿಕ್

'ಎಚ್‌ಎಎಲ್ ನಿವಾಸಿಯಾಗಿರುವ ಮಹಿಳೆಗೆ ಇನ್‌ಸ್ಟಾಗ್ರಾಮ್ ಮೂಲಕ ಕಾರ್ತಿಕ್ ಪರಿಚಯವಾಗಿತ್ತು. ಪರಸ್ಪರ ಸಂದೇಶ ರವಾನೆ ಮಾಡಿಕೊಂಡು ಸ್ನೇಹ ಬೆಳೆಸಿಕೊಂಡಿದ್ದರು. ಈ ನಡುವೆ ಕಾರ್ತಿಕ್ ತನ್ನನ್ನು ಮದುವೆಯಾಗುವಂತೆ ಮಹಿಳೆಗೆ ಪೀಡಿಸುತ್ತಿದ್ದ.

ಇದರಿಂದ ಮಾನಸಿಕ ಒತ್ತಡಕ್ಕೆ ಒಳಗಾದ ಮಹಿಳೆ, ಯುವಕನಿಗೆ ಹಲವು ಬಾರಿ ಬುದ್ಧಿ ಹೇಳಿದ್ದಾಳೆ. ಆದರೂ ಆತ ವಿವಾಹ ಆಗುವಂತೆ ಕಿರುಕುಳ ನೀಡುತ್ತಿದ್ದ. ಈ ವಿಷಯವನ್ನು ಮಹಿಳೆ ತನ್ನ ತಂದೆ ಶೇಖರ್ ಗಮನಕ್ಕೆ ತಂದಿದ್ದರು' ಎಂದು ಪೊಲೀಸರು ತಿಳಿಸಿದರು.

'ಜುಲೈ 17ರಂದು ಆರೋಪಿಯು ಶೇಖರ್ ಅವರಿಗೆ ಕರೆ ಮಾಡಿ ಕರೆಸಿಕೊಂಡಿದ್ದಾನೆ. ಅವರು ತನ್ನ ಅಣ್ಣನ ಮಗ ಪ್ರಶಾಂತ್ ಅವರನ್ನು ಕರೆದುಕೊಂಡು ಜತೆಯಲ್ಲಿ ಹೋಗಿದ್ದಾರೆ. ಕಾರ್ತಿಕ್‌ಗೆ ಬುದ್ಧಿ ಹೇಳಲು ದ್ವಿಚಕ್ರ ವಾಹನದಲ್ಲಿ ಮಲ್ಲೇಶ್ ಪಾಳ್ಯ ಬಸ್ ನಿಲ್ದಾಣ ಕಡೆಯಿಂದ ಹೋಗುತ್ತಿದ್ದರು.

ಶೇಖರ್ ಅವರು ವಾಹನ ಚಾಲನೆ ಮಾಡುತ್ತಿದ್ದರೆ, ಪ್ರಶಾಂತ್ ಮಧ್ಯ ಕುಳಿತಿದ್ದರು. ಹಿಂದೆ ಕುಳಿತಿದ್ದ ಆರೋಪಿ, ಮಾರ್ಗ ಮಧ್ಯೆ ಪ್ರಶಾಂತ್ ಅವರ ಕುತ್ತಿಗೆ ಕೊಯ್ದಿದ್ದಾನೆ. ತಕ್ಷಣ ವಾಹನ ನಿಲ್ಲಿಸಿದ ಶೇಖರ್ ಅವರ ಮೇಲೂ ಚಾಕುವಿನಿಂದ ಹಲ್ಲೆ ನಡೆಸಲು ಯತ್ನಿಸಿದ್ದಾನೆ' ಎಂದು ಹೇಳಿದರು.

'ತಕ್ಷಣ ಅವರು ತಪ್ಪಿಸಿಕೊಂಡರು. ಕಿರುಚಾಟ ಕೇಳಿ ಜನರು ಸೇರುತ್ತಿದ್ದಂತೆ ಆರೋಪಿ ಪರಾರಿಯಾದ. ಗಾಯಗೊಂಡಿದ್ದ ಪ್ರಶಾಂತ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚೇತರಿಸಿಕೊಳ್ಳುತ್ತಿದ್ದಾರೆ' ಎಂದರು.

ಶೇಖರ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಪೊಲೀಸರು, ಆರೋಪಿಯನ್ನು ಬಂಧಿಸಿದ್ದರು. ಅನಂತರ ಆರೋಪಿಯನ್ನು ಸಂಪೂರ್ಣ ವಿಚಾರಣೆ ನಡೆಸುತ್ತಿದ್ದಾರೆ.

ಶೆಡ್‌ಗೆ ಕರೆಸಿಕೊಂಡು ಹಲ್ಲೆ: ಹಣ ದೋಚಿದ್ದವರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಖಾಸಗಿ ಕಂಪನಿ ಉದ್ಯೋಗಿಗೆ ಸಲಿಂಗ ಕಾಮದ ಆಮಿಷವೊಡ್ಡಿ ಶೆಡ್‌ಗೆ ಕರೆಸಿಕೊಂಡು ಹಲ್ಲೆ ನಡೆಸಿ ಹಣ ಹಾಗೂ ಮೊಬೈಲ್ ದೋಚಿದ ಆರೋಪಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಸೂಫಿ ಮತ್ತು ಆತನ ಸಹಚರ ಮತೀನ್ ಬಂಧಿತರು. ಆರೋಪಿಗಳು ಖಾಸಗಿ ಕಂಪನಿಯ 31 ವರ್ಷದ ಉದ್ಯೋಗಿಯ ಹಣ ದೋಚಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಸಂತ್ರಸ್ತ ವ್ಯಕ್ತಿಯು ಡೇಟಿಂಗ್ ಆ್ಯಪ್‌ನ ಚಂದಾದಾರರಾಗಿದ್ದರು. ಈ ಆ್ಯಪ್ ಮೂಲಕ ಅವರನ್ನು ಸಂಪರ್ಕಿಸಿದ್ದ ಸೂಫಿ, ಸಲಿಂಗ ಕಾಮದ ಆಮಿಷವೊಡ್ಡಿದ್ದ. ಅಲ್ಲದೆ, ಅವರ ಮೊಬೈಲ್ ಸಂಖ್ಯೆಯನ್ನು ಪಡೆದು ಹಲವು ಬಾರಿ ವಿಡಿಯೊ ಕರೆ ಮಾಡಿ ಮಾತನಾಡಿದ್ದ. ಜುಲೈ 5ರಂದು ವೈಯಾಲಿಕಾವಲ್‌ನ ನಿರ್ಜನ ಪ್ರದೇಶದ ಶೆಡ್‌ಗೆ ಕರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದ್ದಾರೆ.

'ಸಂತ್ರಸ್ತ ಶೆಡ್‌ಗೆ ಬಂದು ಸೂಫಿಯನ್ನು ಭೇಟಿಯಾಗಿದ್ದರು. ಅದೇ ವೇಳೆಗೆ ಶೆಡ್‌ನ ಮಾಲೀಕನ ಸೋಗಿನಲ್ಲಿ ಅಲ್ಲಿಗೆ ಬಂದಿದ್ದ ಮತೀನ್, `ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದೀರಾ' ಎಂದು ಬೆದರಿಸಿದ್ದ. ನಂತರ ಆರೋಪಿಗಳು ಒಟ್ಟಾಗಿ ಸಂತ್ರಸ್ತನ ಮೊಬೈಲ್ ಕಿತ್ತುಕೊಂಡಿದ್ದರು. ಆತ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಹಲ್ಲೆ ನಡೆಸಿ, ಗೂಗಲ್ ಪೇ ಮೂಲಕ ₹3 ಸಾವಿರ ಪಡೆದು ಶೆಡ್‌ನಿಂದ ಬಿಟ್ಟು ಕಳುಹಿಸಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂತ್ರಸ್ತ ಮರ್ಯಾದೆಗೆ ಅಂಜಿ ದೂರು ಕೊಟ್ಟಿರಲಿಲ್ಲ. ಬಳಿಕ ಜುಲೈ 9ರಂದು ಠಾಣೆಗೆ ದೂರು ಕೊಟ್ಟರು. ಈ ದೂರು ಆಧರಿಸಿ ಸೂಫಿ ಮತ್ತು ಮತೀನ್‌ನನ್ನು ಬಂಧಿಸಲಾಗಿದೆ.

ಅಪರಾಧ ಹಿನ್ನೆಲೆಯುಳ್ಳ ಸೂಫಿ ವಿರುದ್ಧ ಕೊಲೆ ಯತ್ನ, ಸುಲಿಗೆ ಸೇರಿದಂತೆ ಹಲವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ನಗದು, ಮೊಬೈಲ್ ದೋಚಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿ ನಿಂತು ಆಹಾರ ಸೇವಿಸುತ್ತಿದ್ದ ಗೂಡ್ಸ್ ವಾಹನದ ಚಾಲಕನ ಮೇಲೆ ಹಲ್ಲೆ ನಡೆಸಿ, ₹15 ಸಾವಿರ ನಗದು ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಕಲಾಸಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ

ಕೆಂಪೇಗೌಡ ನಗರ ನಿವಾಸಿ, ಟೆಂಪೊ ಚಾಲಕ ರಮೇಶ್ ಅವರು ರಾತ್ರಿ 11ರ ಸುಮಾರಿಗೆ ತಮ್ಮ ಗೂಡ್ಸ್ ಟೆಂಪೊವನ್ನು ಎನ್.ಆರ್.ರಸ್ತೆಯಲ್ಲಿ ನಿಲ್ಲಿಸಿ, ರಸ್ತೆಬದಿ ಸಮೋಸ ತಿನ್ನುತ್ತಿದ್ದರು. ಆಗ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು, ಅವರನ್ನು ಬೆದರಿಸಿ, ಹಲ್ಲೆ ಮಾಡಿ ಹಣ ಹಾಗೂ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ . ಈ ಸಂಬಂಧ ಪೊಲೀಸರಿಗೆ ಅವರು ದೂರು ನೀಡಿದ್ದಾರೆ. ದರೋಡೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಕೈಗೊಂಡಿದ್ದು, ರಸ್ತೆಯಲ್ಲಿನ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ನಡೆಸುತ್ತಿದ್ದಾರೆ.

ಬಂಟ್ವಾಳ: ಪಿಎಸ್‌ಐ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣೆ ಪಿಎಸ್‌ಐ, ಉತ್ತರ ಕನ್ನಡ ಜಿಲ್ಲೆ ನಿವಾಸಿ ಕೀರಪ್ಪ (54) ಅವರು ಬಾಡಿಗೆ ಮನೆಯಲ್ಲಿ ಭಾನುವಾರ ನೇಣು ಹಾಕಿ ಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೀರಪ್ಪ

ಶಿರಸಿ ಪೊಲೀಸ್ ಠಾಣೆಯಿಂದ ಐದು ತಿಂಗಳ ಹಿಂದೆ ಬಡ್ತಿ ಹೊಂದಿ ಇಲ್ಲಿಗೆ ವರ್ಗಾವಣೆಗೊಂಡಿದ್ದರು. ಅವರ ಕುಟುಂಬದ ಸದಸ್ಯರು ಊರಲ್ಲೇ ಇದ್ದು, ಕೀರಪ್ಪ ಅವರು ಬಂಟ್ವಾಳದ ಬಾಡಿಗೆ ಮನೆಯಲ್ಲಿದ್ದರು.

ಭಾನುವಾರ ಬೆಳಿಗ್ಗೆ ಕರ್ತವ್ಯಕ್ಕೆ ಹಾಜರಾಗದೆ, ಫೋನ್ ಕರೆ ಸ್ವೀಕರಿಸದ ಕಾರಣ ಸಂಶಯಗೊಂಡ ಪೊಲೀಸರು ಮನೆಗೆ ಹೋಗಿ ನೋಡಿದಾಗ ಕೋಣೆಯಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಅವರ ಶವ ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೃಷಿ ಹೊಂಡದಲ್ಲಿ ಮುಳುಗಿ ಸಾವು

ಸವದತ್ತಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮಳಗಲಿ ಗ್ರಾಮದ ಕಾಲುವೆ ಬಳಿ ಇರುವ ಕೃಷಿ ಹೊಂಡದಲ್ಲಿ ಭಾನುವಾರ ಆಯತಪ್ಪಿ ಬಿದ್ದು ತಂದೆ, ಮಗ ಮೃತಪಟ್ಟಿದ್ದಾರೆ.

ಬಸವರಾಜ ನೀಲಪ್ಪ ಕೆಂಗೇರಿ (40), ಅವರ ಪುತ್ರ ಧರೆಪ್ಪ (14) ಮೃತಪಟ್ಟವರು.

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಸಹಾಯಕ ಆಯುಕ್ತರ ಕಛೇರಿ, ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ, 4ನೇ ಮಹಡಿ, ಪೊಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು-560001.

ದೂರವಾಣಿ ಸಂಖ್ಯೆ: 080-22869850 Email.ld.endowmentacurban@gmail.com

E-1479806 HRICE-ACU0ADMM/42/2024 ದಿನಾಂಕ: 17.07.2025

ಇ-ಪ್ರೊಕ್ಯೂರ್‌ಮೆಂಟ್ (E-procurement) ಪ್ರಕಟಣೆ-1

ಸರ್ಕಾರದ ಆದೇಶ ಸಂಖ್ಯೆ: ಕಂಇ 26 ಮುಲಿಬಿ 2019 ಬೆಂಗಳೂರು ದಿನಾಂಕ:**01/10/2020**ರನ್ವಯ ಬೆಂಗಳೂರು ನಗರ ಸಭಾವಲಯದ ವ್ಯಾಪ್ತಿಯಲ್ಲಿನ ಮುಜರಾಯಿ ದೇವಸ್ಥಾನಗಳಿಗೆ ಸೇರಿದ 216 ಅಂಗಡಿ ಮಳಿಗೆಗಳನ್ನು ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಪ್ರಸಕ್ತ ಮಾರುಕಟ್ಟೆಯ ದರಕ್ಕನುಗುಣವಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮಗಳ ಅನ್ವಯ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಷರತ್ತುಗಳ ಮೇರೆಗೆ ಅನುಮೋದನೆ ನೀಡಿ ಆದೇಶಿಸಿದೆ. ಅದರಂತೆ ಬೆಂಗಳೂರು ನಗರ, ಬಳ್ಳಾಪುರಪೇಟೆಯಲ್ಲಿರುವ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ಸೇರಿದ 04 ಅಂಗಡಿ / ಮಳಿಗೆಗಳನ್ನು 03-ಸಾಮಾನ್ಯ ವರ್ಗದವರಿಗೆ ಮತ್ತು 01 ಅಂಗಡಿ/ ಮಳಿಗೆಯ ಪರಿಶಿಷ್ಟ ಜಾತಿಯವರಿಗೆ ಮೀಸಲಿರಿಸಿ ಸರ್ಕಾರದ ಆದೇಶದಂತೆ ನಿಗಧಿಪಡಿಸಿರುವ ಮೀಸಲಾತಿ ಅನ್ವಯ ಅರ್ಹರಿರುವ ಆಸಕ್ತರು ಈ ಕೆಳಕಂಡ ಷರತ್ತಿಗೊಳಪಟ್ಟು ಇ-ಟೆಂಡರ್ ಹರಾಜಿನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಗೆ ಹಾಗೂ ಕೆಳಗೆ ಸಹಿ ಮಾಡಿರುವ ಕಛೇರಿ ದೂರವಾಣಿಯನ್ನು ಸಂಪರ್ಕಿಸಬಹುದಾಗಿದೆ.

1.	ಟೆಂಡರ್ ಮಾಡುವ ವಿಧಾನ	ಇ-ಟೆಂಡರ್ ಹರಾಜು ಮೂಲಕ
2.	ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಟೆಂಡರ್ ವಿವರಗಳನ್ನು ಪ್ರಕಟಿಸುವ ದಿನಾಂಕ : ಆನ್‌ಲೈನ್‌ನಲ್ಲಿ	ದಿನಾಂಕ: 21.07.2025
3.	ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:	ದಿನಾಂಕ: 05.08.2025 ಸಂಜೆ 05.00 ಗಂಟೆಯವರೆಗೆ
4.	ಸ್ವೀಕೃತಗೊಂಡ ಟೆಂಡರ್‌ಗಳನ್ನು ತೆರೆಯುವ ದಿನಾಂಕ:	ದಿನಾಂಕ: 07.08.2025 ಬೆಳಗ್ಗೆ 11.00 ಗಂಟೆಯವರೆಗೆ
5.	ಪ್ರತಿ ಮಳಿಗೆಗೆ ಇ.ಎಂ.ಡಿ ಮೊತ್ತ	ರೂ.50,000.00/-
6.	ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ	080-22869850/080-26601616 ಇ-ಪ್ರೊಕ್ಯೂರ್‌ಮೆಂಟ್ (E-procurement) ಸೆಂಟರ್ 080-25501216 & 25501227/23010900/23010901.

ಸಹಿ/- ಸಹಾಯಕ ಆಯುಕ್ತರು
ಮುಜರಾಯಿ ಕಾಮಗಾರಿಗಳು, ನಗರಸಭಾ ವಲಯ,
ಬೆಂಗಳೂರು-01

ವಾಸಸಂಇ/ವಾ.ಪ್ರ/1905/ಎಸ್‌ಎಸ್‌ಸಿ/2025-26

PUBLIC NOTICE

Public at Large is hereby informed that, M/s. Exide Energy Solutions Limited, Plot No. 28-P, 29-46, 47-P, 50-P, 51-66, 67-P, Road No. 21, part of road No. 21A, part of road No.19, in the Hitech Defence & Aerospace Park, Phase-2, Bengaluru have been granted Environmental Clearance for proposed Expansion in Area Development Project with Built-up area from 1,90,108 sqm to 2,13,730 sqm; Plot Area: 323760 sqm (No change) as per clause 7(ii) of the EIA Notification, 2006 & amendments thereof under Project Activity 8(b) for housing facility of Li-ion Cells, Modules & Pack Manufacturing unit at Bengaluru, Karnataka by State Level Environment Impact Assessment Authority (SEIAA), Karnataka vide letter No. SEIAA 73 CON 2025 Dated 15th May, 2025. Copy of the Environmental Clearance is available in the office of 'State Pollution Control Board' for information of general public and can also be seen on the link **https://parivesh.nic.in/certificates/EXIDE ENERGY SOLUTIONS LIMITED/2/120402077/VO SIA KA INFRA2 524682 2025 120402078 -signed:pdf**

Registered Office.
M/s. Exide Energy Solutions Limited
Exide House, No. 59 E,
Chowringhee Road, Kolkata,
West Bengal - 700020

13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ

216 ರೌಡಿಗಳ ಮನೆಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉತ್ತರ ವಿಭಾಗದ 13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ರೌಡಿಗಳ ಮನೆಗಳ ಮೇಲೆ ಭಾನುವಾರ ಮುಂಜಾನೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ದಾಳಿ ನಡೆಸಿ, ತಪಾಸಣೆ ನಡೆಸಿದರು.

ಡಿಸಿಪಿ ಬಿ.ಎಸ್.ನೇಮಗೌಡ ಅವರ ಮಾರ್ಗದರ್ಶನದಲ್ಲಿ ಮುಂಜಾನೆ 4 ರಿಂದ 6ರ ವರೆಗೆ ದಾಳಿ ನಡೆದಿದೆ.

ಎಸಿಪಿ ನೇತೃತ್ವದಲ್ಲಿ 13 ಠಾಣೆಯ ಇನ್‌ಸ್ಪೆಕ್ಟರ್‌ಗಳು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಮತ್ತು ಸಿಬ್ಬಂದಿ ವಿಶೇಷ ಕಾರ್ಯಾಚರಣೆ ನಡೆಸಿ, ರೌಡಿಗಳ ಚಲನವಲನ, ಪ್ರಸ್ತುತ ನಿರ್ವಹಿಸುತ್ತಿರುವ ಕೆಲಸದ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ರೌಡಿಗಳ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ ಪೊಲೀಸರು.

ಯಾವುದೇ ರೀತಿಯ ಅಹಿತಕರ ಘಟನೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಲಾಯಿತು.

ಮಾರಾಮಾರಿ ನಡೆದಿಲ್ಲ: ಆರ್.ಟಿ.ನಗರದ 1ನೇ ಬ್ಲಾಕ್ 18ನೇ ಕ್ರಾಸ್ ರಸ್ತೆಯಲ್ಲಿ ರಾತ್ರಿ ನಡೆದ ಹುಟ್ಟುಹಬ್ಬದ ವೇಳೆ ಮಾರಕಾಸ್ತ್ರಗಳನ್ನು ಬಳಕೆ ಮಾಡಿಲ್ಲ. ಪುಡಿ ರೌಡಿಗಳ ನಡುವೆ ಮಾರಾಮಾರಿ ನಡೆದಿಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಸುಮಾರು 10 ರಿಂದ 15 ಬಾಲಕರು ತಮ್ಮ ಸ್ನೇಹಿತನ ಹುಟ್ಟುಹಬ್ಬ ಆಚರಿಸಿಕೊಳ್ಳಲು ಕೇಕ್ ಕತ್ತರಿಸುವಾಗ ಅವರಲ್ಲಿ ಒಬ್ಬರ ತಲೆಗೆ ಮೊಟ್ಟೆ ಹೊಡೆದ ವಿಚಾರಕ್ಕೆ ಪರಸ್ಪರ ಗಲಾಟೆ ಮಾಡಿಕೊಂಡಿದ್ದರು. ಎಲ್ಲರೂ ಶಾಲಾ ಬಾಲಕರು ಎಂಬುದು ಪರಿಶೀಲನೆ ಸಂದರ್ಭದಲ್ಲಿ ತಿಳಿದುಬಂದಿದೆ ಎಂದು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಸಿ.ನಾಗಣ್ಣಗೆ 'ಕಸಾಪ ದತ್ತಿ ಪ್ರಶಸ್ತಿ'

ಸಿ.ನಾಗಣ್ಣ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ.ಮಳಲಿ ವಸಂತ ಕುಮಾರ್ ಪ್ರಶಸ್ತಿ'ಗೆ ವಿಮರ್ಶಕ ಸಿ.ನಾಗಣ್ಣ ಅವರು ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಬರಹಗಾರ ಮಳಲಿ ವಸಂತ ಕುಮಾರ್ ಅವರು 'ಮನುಕುಲದ ವಾಗ್ಮಿ' ಎಂದು ಹೆಸರು ಪಡೆದಿದ್ದರು. ಕನ್ನಡ ಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಬರಹಗಾರರಿಗೆ ಪ್ರೋತ್ಸಾಹ ನೀಡಿದ ಅವರು, 46 ಕೃತಿಗಳನ್ನು ರಚಿಸಿದ್ದರು. ಅವರ ನೆನಪಿನಲ್ಲಿ ಕುಟುಂಬದವರು ದತ್ತಿ ನಿಧಿಯನ್ನು ಸ್ಥಾಪಿಸಿದ್ದು, ಕನ್ನಡಕ್ಕೆ ಮಹತ್ವದ ಕೊಡುಗೆ ನೀಡಿದ ಬರಹಗಾರರಿಗೆ ಮತ್ತು ಕನ್ನಡ ಪರ ಹೋರಾಟಗಾರರಿಗೆ ಈ ಪುರಸ್ಕಾರ ನೀಡುವುದು ದತ್ತಿ ದಾನಿಗಳ ಆಶಯವಾಗಿದೆ.

ಸಿ.ನಾಗಣ್ಣ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಭಾಷಾಂತರ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ ಎಂದು ಕಸಾಪ ಮಾಧ್ಯಮ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವೆಂಬರ್ 13ರಿಂದ ಕೃಷಿ ಮೇಳ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 13ರಿಂದ 16ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಸಮೃದ್ಧ ಕೃಷಿ ವಿಕಸಿತ ಭಾರತ– ನೆಲ, ಜಲ, ಬೆಳೆ' ಎಂಬ ಘೋಷವಾಕ್ಯದಡಿ ಕೃಷಿ ಮೇಳ ನಡೆಯಲಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದ್ದಾರೆ.

'ಅತ್ಯಮೂಲ್ಯ ನೈಸರ್ಗಿಕ ಸಂಪನ್ಮೂಲಗಳಾದ ನೆಲ, ಜಲ ಹಾಗೂ ಜೀವ ವೈವಿಧ್ಯದ ಮೇಲೆ ನಮ್ಮ ದೇಶ ಅವಲಂಬಿತವಾಗಿದೆ. ಇವುಗಳನ್ನು ವೈಜ್ಞಾನಿಕವಾಗಿ ಜವಾಬ್ದಾರಿಯುತವಾಗಿ ಬಳಸಿ, ಸಂರಕ್ಷಿಸುವ ಮೂಲಕ ಸುಸ್ಥಿರ ಕೃಷಿ ಹಾಗೂ ಕೃಷಿಕರ ಆದಾಯವೃದ್ಧಿ ಮಾಡುವುದು ಈ ಮೇಳದ ಉದ್ದೇಶವಾಗಿದೆ. ವಿಕಸಿತ ಭಾರತದ ಪರಿಕಲ್ಪನೆಗೆ ಕೃಷಿ ಕ್ಷೇತ್ರದ ಕೊಡುಗೆಯನ್ನು ಪ್ರತಿಪಾದಿಸುವ ವಿಶೇಷ ವೇದಿಕೆಯನ್ನು ಈ ಮೇಳ ಕಲ್ಪಿಸಲಿದೆ' ಎಂದು ಅವರು ಹೇಳಿದ್ದಾರೆ.

'ಭವಿಷ್ಯದ ಸಮೃದ್ಧ ಕೃಷಿಯಿಂದ ಮಾತ್ರ ವಿಕಸಿತ ಭಾರತ ನಿರ್ಮಾಣ ಸಾಧ್ಯ. ಇದಕ್ಕೆ ಪೂರಕವಾಗಿ ಅಗತ್ಯ ತಂತ್ರಜ್ಞಾನಗಳ ಮಾಹಿತಿ ಪೂರೈಕೆಗೆ ಕೃಷಿಮೇಳ ವೇದಿಕೆ ಒದಗಿಸಲಿದೆ' ಎಂದರು.

ಅಂತರರಾಷ್ಟ್ರೀಯ ಅಗರಬತ್ತಿ ಎಕ್ಸ್‌ಪೊ

ಬೆಂಗಳೂರು: ಭಾರತವನ್ನು ಅಗರಬತ್ತಿ ಉತ್ಪಾದನೆಯ ಕೇಂದ್ರವನ್ನಾಗಿ ರೂಪಿಸಲು ನಗರದಲ್ಲಿ 'ಅಂತರರಾಷ್ಟ್ರೀಯ ಅಗರಬತ್ತಿ ಎಕ್ಸ್‌ಪೊ ಮತ್ತು ಸಮ್ಮೇಳನ' ಆಯೋಜಿಸಲಾಗಿದೆ ಎಂದು ಅಖಿಲ ಭಾರತ ಅಗರಬತ್ತಿ ತಯಾರಕರ ಅಸೋಸಿಯೇಷನ್ (ಎಐಎಎಂಎ) ಎಕ್ಸ್‌ಪೊ 25ರ ಅಧ್ಯಕ್ಷ ಅರ್ಜುನ್ ರಂಗಾ ತಿಳಿಸಿದರು.

ನವೆಂಬರ್ 6 ರಿಂದ 8ರವರೆಗೆ ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಎಕ್ಸ್‌ಪೊದಲ್ಲಿ ವಿಯೆಟ್ನಾಂ, ಇಂಡೋನೇಷ್ಯಾ, ಯುರೋಪ್ ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಉದ್ಯೋಗ ಸೃಷ್ಟಿ, ಕಚ್ಚಾ ವಸ್ತುಗಳ ಸಂಗ್ರಹ, ಹೊಸ ಸುಗಂಧಗಳ ಸಂಶೋಧನೆ, ಪ್ಯಾಕೇಜಿಂಗ್ ಅಭಿವೃದ್ಧಿ, ಮಹಿಳಾ ಸಬಲೀಕರಣ, ರಫ್ತು ಅವಕಾಶ ಮತ್ತು ಆಧುನಿಕ ಮಾರುಕಟ್ಟೆ ಕುರಿತ ವಿಚಾರ ಸಂಕಿರಣಗಳು ನಡೆಯಲಿವೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ'

ದೊಡ್ಡಬಳ್ಳಾಪುರ: ದೇಶದಲ್ಲಿ ಈಗ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಇಂದಿರಾ ಗಾಂಧಿ ಕಾಲದ ತುರ್ತು ಪರಿಸ್ಥಿತಿಗೂ ಈಗಿನ ಅಘೋಷಿತ ತುರ್ತು ಪರಿಸ್ಥಿತಿಗೂ ಸಾಕಷ್ಟು ವ್ಯತ್ಯಾಸಗಳಿವೆ ಎಂದು ಎಂದು ಲೇಖಕ ಬಿ.ಶ್ರೀಪಾದ ಭಟ್ ಅಭಿಪ್ರಾಯಪಟ್ಟರು.

ಅಂದಿನ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಡವರು, ದಲಿತರು, ಅಲ್ಪಸಂಖ್ಯಾತರು ಖುಷಿಯಾಗಿದ್ದರು. ಆದರೆ, ಈಗಿನ ಅಘೋಷಿತ ತುರ್ತು ಪರಿಸ್ಥಿತಿಯಲ್ಲಿ ಯಾರು ಹೆಚ್ಚು ಖುಷಿಯಾಗಿದ್ದಾರೆ ಎನ್ನುವುದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದರು.

ಭಾನುವಾರ ನಗರದಲ್ಲಿ ಡಾ.ಡಿ.ಆರ್. ನಾಗರಾಜ್ ಬಳಗದಿಂದ ನಡೆದ 'ಡಿ.ಆರ್.ಎನ್.ತಿಂಗಳ ಮಾತುಕತೆ' ಕಾರ್ಯಕ್ರಮದಲ್ಲಿ 'ಒಕ್ಕೂಟವೋ-ತಿಕ್ಕಾಟವೋ' ಪುಸ್ತಕ ಕುರಿತು ಸಂವಾದದಲ್ಲಿ ಅವರು ಮಾತನಾಡಿದರು.

ಜವಾಹರಲಾಲ್ ನೆಹರೂ ಕಾಲದಿಂದಲೂ ಕೇಂದ್ರ, ರಾಜ್ಯ ಸರ್ಕಾರಗಳ ನಡುವೆ ಒಕ್ಕೂಟದ ತಿಕ್ಕಾಟ ಇವೆ. ಆದರೆ, ದಶಕದಿಂದ ಈಚೆಗೆ 2014ರ ನಂತರ ಒಕ್ಕೂಟ ವ್ಯವಸ್ಥೆಯ ಚರ್ಚೆಗಳ ದಿಕ್ಕು ಬದಲಾಗಿದೆ ಎಂದರು.

ನಾಮಫಲಕ: 'ಕನ್ನಡ'ಕ್ಕೆ ಸಿಗದ ಪ್ರಾಧಾನ್ಯ

ಕಾನೂನು ರಚನೆ, ಗಡುವು ನಂತರವೂ ನಾಮಫಲಕಗಳಲ್ಲಿ ಇಂಗ್ಲಿಷ್‌ಗೆ ಆದ್ಯತೆ

• ವೀರೇಶಕುಮಾರ್ ಸಾಲಿಮಠ

ಬೆಂಗಳೂರು: ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸುವಂತೆ ರಾಜ್ಯ ಸರ್ಕಾರ ಕಾನೂನು ಜಾರಿಗೊಳಿಸಿದ್ದರೂ, ನಗರದ ವಿವಿಧ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಈಗಲೂ ಇಂಗ್ಲಿಷ್ ರಾರಾಜಿಸುತ್ತಿದೆ. ನಾಮಫಲಕದಲ್ಲಿ ಕನ್ನಡ ಕಡೆಗಣನೆಗೆ ಸಂಬಂಧಿಸಿದಂತೆ ಬಿಬಿಎಂಪಿ ಈವರೆಗೆ ಕೇವಲ ಆರು ಮಳಿಗೆಗಳ ಪರವಾನಗಿ ರದ್ದುಪಡಿಸಿದೆ.

ಚರ್ಚ್‌ಸ್ಟ್ರೀಟ್, ಅವಿನ್ಯೂ ರಸ್ತೆ, ಎನ್‌ಆರ್ ರಸ್ತೆ, ಎಸ್‌ಜೆಪಿ ರಸ್ತೆ ಸೇರಿದಂತೆ ಹಲವೆಡೆ ವಾಣಿಜ್ಯ ಮಳಿಗೆಗಳ ನಾಮ ಫಲಕಗಳಲ್ಲಿ ನಾಮಕಾವಾಸ್ತೆಗೆ ಕನ್ನಡ ಬಳಕೆ ಮಾಡಲಾಗಿದೆ. ಲೋಹ, ಫೈಬರ್ ಜತೆಗೆ ಅಲಂಕಾರಿಕ ವಿದ್ಯುತ್ ದೀಪಗಳಿಂದ ತಯಾರಿಸಿದ ಡಿಜಿಟಲ್, ಎಲ್‌ಇಡಿ ಪರದೆಗಳ ನಾಮಫಲಕಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೇ ಮಳಿಗೆಗಳ ಹೆಸರನ್ನು ಪ್ರದರ್ಶಿಸಲಾಗುತ್ತಿದೆ. ಕನ್ನಡದ ಅಕ್ಷರಗಳನ್ನು ಮೂಲೆಗುಂಪು ಮಾಡಿ, ರೇಡಿಯಂನಲ್ಲಿ ಅಳವಡಿಸಲಾಗಿದೆ.

ನಾಮಫಲಕಗಳಲ್ಲಿ ಕನ್ನಡ ಕಡೆಗಣನೆಗೆ ಸಂಬಂಧಿಸಿದಂತೆ ಕನ್ನಡಪರ ಸಂಘಟನೆಗಳು 2023ರ ಡಿಸೆಂಬರ್ ತಿಂಗಳಲ್ಲಿ ಪ್ರತಿಭಟನೆ ನಡೆಸಿದ್ದವು.

ಬಳಿಕ, ಸರ್ಕಾರವು 2024ರ ಫೆ.28ರ ಒಳಗಾಗಿ ನಾಮಫಲಕಗಳಲ್ಲಿ ಕಡ್ಡಾಯವಾಗಿ ಶೇ 60ರಷ್ಟು ಕನ್ನಡ ಅಳವಡಿಸಿಕೊಳ್ಳುವಂತೆ ಗಡವು ನೀಡಿತ್ತು.

> ನಾಮಫಲಕಗಳಲ್ಲಿ ಕನ್ನಡ ಅಳವಡಿಕೆಗೆ ಎಲ್ಲ ರೀತಿಯ ಪ್ರಯತ್ನ ಮಾಡಲಾಗುತ್ತಿದೆ. ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾನೂನು ಪೂರ್ಣಪ್ರಮಾಣದಲ್ಲಿ ಜಾರಿಯಾಗುತ್ತಿಲ್ಲ.
> **ಪುರುಷೋತ್ತಮ ಬಿಳಿಮಲೆ**
> ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಇದಾಗಿ ಒಂದೂವರೆ ವರ್ಷ ಕಳೆದರೂ ಈ ನಿಯಮ ಜಾರಿಗೆ ಬಂದಿಲ್ಲ.

ಕಾನೂನಿನಡಿ ದಂಡ ಪಾವತಿಯಿಂದ ತಪ್ಪಿಸಿಕೊಳ್ಳಲು ಮಳಿಗೆಗಳು ಕೇವಲ ತೋರಿಕೆಗಾಗಿ ನಾಮಫಲಕಗಳಲ್ಲಿ ಕನ್ನಡ ಅಳವಡಿಸಿಕೊಂಡಿವೆ. ಕನ್ನಡ ಮತ್ತು ಇಂಗ್ಲಿಷ್ ಅಕ್ಷರಗಳನ್ನು ನಾಮ ಫಲಕಗಳಲ್ಲಿ ಏಕರೂಪ ವಿನ್ಯಾಸದಲ್ಲಿ ಅಳವಡಿಸಿಕೊಂಡಿಲ್ಲ. ಕೆಲವೆಡೆ ಮೊದಲಿದ್ದ ನಾಮಫಲಕಗಳ ಮೇಲೆ, ಕೆಳಗೆ, ಪಕ್ಕದಲ್ಲಿ ಚಿಕ್ಕದಾಗಿ ಅಥವಾ ಸಮಾನವಾಗಿ ಮತ್ತೊಂದು ಕನ್ನಡ ನಾಮಫಲಕವನ್ನು ಅಳವಡಿಸಲಾಗಿದೆ.

'ಕನ್ನಡ ನಾಮಫಲಕವನ್ನು ಕಡ್ಡಾಯವಾಗಿ ಪ್ರದರ್ಶಿಸುವಂತೆ ಹಲವು ಬಾರಿ ಮನವಿ ಮಾಡಿದ್ದೇವೆ. ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ಇಷ್ಟಾಗಿಯೂ ವಾಣಿಜ್ಯ ಮಳಿಗೆಗಳು ಕನ್ನಡಕ್ಕೆ ಆದ್ಯತೆ ನೀಡುತ್ತಿಲ್ಲ. ನಮ್ಮ ಜನಪ್ರತಿನಿಧಿಗಳು ಅವರಿಗೆ ಬೆಂಬಲವಾಗಿ ನಿಂತಿರುವುದೇ ಮಳಿಗೆಗಳ ಮುಖ್ಯಸ್ಥರ ದುರಂಹಂಕಾರಕ್ಕೆ ಕಾರಣ' ಎನ್ನುತ್ತಾರೆ ಕನ್ನಡ ಪರ ಹೋರಾಟಗಾರರು.

ಕನ್ನಡ ಭಾಷೆ ಬಳಕೆ ಉತ್ತೇಜಿಸಲು ರಾಜ್ಯ ಸರ್ಕಾರವು 2024ರಲ್ಲಿ 'ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ತಿದ್ದುಪಡಿ ಕಾಯ್ದೆ' ಜಾರಿಗೆ ತಂದಿದೆ.

ಕಾಯ್ದೆಯ ನಿಯಮಗಳ ಪ್ರಕಾರ ನಾಮಫಲಕಗಳ ಒಟ್ಟಾರೆ ವಿಸ್ತೀರ್ಣದಲ್ಲಿ ಶೇ 60ರಷ್ಟು ಭಾಗದಲ್ಲಿ ಕನ್ನಡ ಭಾಷೆಯನ್ನು ಮೇಲ್ಭಾಗದಲ್ಲೇ ಪ್ರದರ್ಶಿಸುವುದು ಕಡ್ಡಾಯವಾಗಿದೆ.

ಅವೆನ್ಯೂ ರಸ್ತೆಯಲ್ಲಿನ ಮಳಿಗೆಗಳಲ್ಲಿ ಕನ್ನಡಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಭಾಷೆಯ ನಾಮಫಲಕಗಳು ರಾರಾಜಿಸುತ್ತಿವೆ ಪ್ರಜಾವಾಣಿ ಚಿತ್ರ

ನೋಟಿಸ್ ಪಡೆದ ಮಳಿಗೆಗಳ ವಿವರ

ವಲಯ	ನೋಟಿಸ್	ನಾಮಫಲಕ ಸರಿಪಡಿಸಿಕೊಂಡ ಮಳಿಗೆಗಳು	ಸರಿಪಡಿಸಿಕೊಳ್ಳದ ಮಳಿಗೆಗಳು	ಪರವಾನಗಿ ರದ್ದು
ಬೊಮ್ಮನಹಳ್ಳಿ	8411	8341	70	0
ದಾಸರಹಳ್ಳಿ	1548	1522	26	0
ಪೂರ್ವ	8659	8548	111	0
ಮಹದೇವಪುರ	5967	5893	74	0
ಆರ್‌ಆರ್ ನಗರ	6537	6492	45	0
ದಕ್ಷಿಣ	5982	5941	41	6
ಪಶ್ಚಿಮ	7113	7093	20	0
ಯಲಹಂಕ	6165	6165	0	0

50 ಸಾವಿರ ಮಳಿಗೆಗಳಿಗೆ ನೋಟಿಸ್

ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅಳವಡಿಸಿಕೊಳ್ಳದ ಮಳಿಗೆಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ. ಈವರೆಗೆ 50,382 ಮಳಿಗೆಗಳಿಗೆ ನೋಟಿಸ್ ಜಾರಿ ಮಾಡಿದೆ. ಇದರಲ್ಲಿ 49,995 ವಾಣಿಜ್ಯ ಮಳಿಗೆಗಳು ಸೂಚನೆಯನ್ನು ಪಾಲಿಸಿವೆ. ಉಳಿದ 387 ವಾಣಿಜ್ಯ ಉದ್ದಿಮೆಗಳು ಇನ್ನೂ ಬದಲಾವಣೆ ಮಾಡಿಕೊಂಡಿಲ್ಲ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

> ನಾಮಫಲಕದಲ್ಲಿ ಕನ್ನಡಕ್ಕೆ ಆದ್ಯತೆ ನೀಡದ ಮಳಿಗೆಗಳ ಮೇಲೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ. ಕ್ರಮ ಕೈಗೊಳ್ಳದಿದ್ದರೆ ಮತ್ತೆ ಹೋರಾಟ ಮಾಡಲಾಗುವುದು
> **ಟಿ.ಎ. ನಾರಾಯಣಗೌಡ**
> ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ

ಚಿತ್ರಾವಳಿ

ನಗರದ ಪುರಭವನದಲ್ಲಿ ಭಾನುವಾರ ನಡೆದ 'ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಷನ್' 20ನೇ ವರ್ಷದ ಸಂಭ್ರಮಾಚರಣೆಯಲ್ಲಿ ಫೆಡರೇಷನ್‌ನ ಸ್ವಾಗತ ಸಮಿತಿ ಅಧ್ಯಕ್ಷ ಕೋಟಿಗಾನಹಳ್ಳಿ ರಾಮಯ್ಯ, ಅಧ್ಯಕ್ಷ ಬಿ.ನಾಗರಾಜ್, ವಕೀಲ ಪ್ರಶಾಂತ್ ಭೂಷಣ್, ಪರಿಸರವಾದಿ ಎಸ್.ಆರ್.ಹಿರೇಮಠ ಮತ್ತು ಫೆಡರೇಷನ್‌ನ ಸಂಸ್ಥಾಪಕ ಅಧ್ಯಕ್ಷ ಎಸ್. ರೇವಣ್ಣ ಭಾಗಿಯಾಗಿದ್ದರು ಪ್ರಜಾವಾಣಿ ಚಿತ್ರ

ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರ ಜನ್ಮ ದಿನದ ಅಂಗವಾಗಿ ವಿ. ಸೋಮಣ್ಣ ಅಭಿಮಾನಿಗಳ ಬಳಗದಿಂದ ಗೋವಿಂದರಾಜನಗರದ ರೆಫರಲ್ ಆಸ್ಪತ್ರೆಯ ರೋಗಿಯೊಬ್ಬರಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಬಿಜೆಪಿ ಮುಖಂಡರಾದ ಎಚ್. ರವೀಂದ್ರ, ವಿಶ್ವನಾಥಗೌಡ, ಮೋಹನ್ ಕುಮಾರ್, ಆನಂದ್ ಹೊಸೂರು, ದಾಸೇಗೌಡ, ಚನ್ನಪ್ಪ ಆನಂದ್, ಎಚ್. ರಮೇಶ್, ಸಿ.ಎಂ. ರಾಜಪ್ಪ, ಕನಕಪುರ ರಾಜಣ್ಣ ಉಪಸ್ಥಿತರಿದ್ದರು

ಕೃತಿಕಾ ಮಹೋತ್ಸವ
ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್
ಹನುಮಂತ ನಗರದ ಕುಮಾರ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ನಡೆದ ಆಡಿ ಕೃತಿಕಾ ಮಹೋತ್ಸವಕ್ಕೆ ಭಕ್ತಾದಿಗಳು ಕಾವಡಿ ಹೊತ್ತು ಬಂದಿದ್ದರು

ಜಲಾವೃತಗೊಂಡ ರಸ್ತೆಗಳು: ಹಲವೆಡೆ ಸಂಚಾರ ದಟ್ಟಣೆ

ನಗರದ ಹಲವು ಕಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಮಧ್ಯಾಹ್ನದಿಂದ ಸಂಜೆವರೆಗೆ ಜಿಟಿ ಜಿಟಿ ಮಳೆ ಸುರಿಯಿತು, ಕೆಲವು ಬಡಾವಣೆಗಳಲ್ಲಿ ಬಿಟ್ಟು ಬಿಟ್ಟು ಮಳೆಯಾಯಿತು.

ಮಧ್ಯಾಹ್ನ 2 ಗಂಟೆಗೆ ತುಂತುರು ಹನಿಗಳೊಂದಿಗೆ ಆರಂಭವಾದ ಮಳೆ ಬಳಿಕ ಬಿರುಸಾಯಿತು. ರಾಜರಾಜೇಶ್ವರಿ ನಗರ, ಕೋಣನಕುಂಟೆ, ವಿಜಯನಗರ, ಮಲ್ಲೇಶ್ವರ, ಶೇಷಾದ್ರಿಪುರ ಸುತ್ತಮುತ್ತಲಿನ ಪ್ರದೇಶದಲ್ಲಿ ಮಳೆಯಾಗಿದೆ.

ನಗರದ ದಕ್ಷಿಣ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬಿದ್ದಿದೆ. ನಾಯಂಡಹಳ್ಳಿ, ಆರ್.ಆರ್. ನಗರ, ಜ್ಞಾನಭಾರತಿ, ವಿದ್ಯಾಪೀಠ ಭಾಗದಲ್ಲಿ ಮಧ್ಯಾಹ್ನದಿಂದ ಸಂಜೆಯವರೆಗೆ ತುಂತುರು ಮಳೆ ಆಗಿದೆ.

ಸಿಟಿ ಮಾರುಕಟ್ಟೆ, ಶಾಂತಿನಗರ, ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ರೆಸಿಡೆನ್ಸಿ ರಸ್ತೆ ಸುತ್ತಮುತ್ತ ಬಿರುಸಿನ ಮಳೆಯಾಯಿತು. ಭಾನುವಾರ ರಜಾ ದಿನವಾದ ಕಾರಣ ಈ ರಸ್ತೆಗಳಲ್ಲಿ ಜನಸಂಚಾರ ಹೆಚ್ಚಿತ್ತು. ಕೆಲವರು ಮಳೆಯಲ್ಲಿ ನೆನೆಯುತ್ತಾ ಸಾಗಿದರು. ಇನ್ನೂ ಕೆಲವರು ರೈನ್ ಕೋಟ್, ಕೊಡೆಗಳ ಮೊರೆ ಹೋದರು.

ಬನಶಂಕರಿ, ವರ್ತುಲ ರಸ್ತೆ, ಪುಟ್ಟೇನಹಳ್ಳಿಯಲ್ಲಿ ಸಂಜೆ ಬಿರುಸಾಗಿ ಮಳೆ ಸುರಿದಿದೆ. ಗೊಟ್ಟಿಗೆರೆಯ ರಸ್ತೆಗಳಲ್ಲಿ ಗುಂಡಿಗಳಾಗಿದ್ದು, ಮಳೆ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಎಲ್ಲೆಲ್ಲಿ ಎಷ್ಟೆಷ್ಟು ಮಳೆ

ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ 2.4 ಸೆಂ.ಮೀ ಮಳೆಯಾಯಿತು. ಕೆಂಗೇರಿಯಲ್ಲಿ 2.2 ಸೆಂ.ಮೀ, ಅಂಜನಾಪುರ, ಕೋಣನಕುಂಟೆ ಭಾಗದಲ್ಲಿ 1.9 ಸೆಂ.ಮೀ, ಎಚ್. ಗೊಲ್ಲಹಳ್ಳಿಯಲ್ಲಿ 1.6 ಸೆಂ.ಮೀ, ಅಂಜನಾಪುರ, ಆರ್.ಆರ್. ನಗರ, ಗೊಟ್ಟಿಗೆರೆಯಲ್ಲಿ ತಲಾ 1.5 ಸೆಂ.ಮೀನಷ್ಟು ಮಳೆಯಾದ ವರದಿಯಾಗಿದೆ.

ಮಧ್ಯಾಹ್ನ ಸುರಿದ ಮಳೆಯಿಂದ ಗೊಟ್ಟಿಗೆರೆಯ ರಸ್ತೆಯಲ್ಲಿರುವ ಗುಂಡಿಗಳಲ್ಲಿ ಮಳೆ ನೀರು ತುಂಬಿಕೊಂಡಿದ್ದ ದೃಶ್ಯ ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಅಕ್ರಮ ವಲಸಿಗರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಮಾನಿಕೆರೆ ಗ್ರಾಮದಲ್ಲಿ ಅಕ್ರಮವಾಗಿ ಶೆಡ್‌ಗಳನ್ನು ಹಾಕಿಕೊಂಡು ವಾಸಮಾಡುತ್ತಿರುವ ಬಾಂಗ್ಲಾದೇಶದ ಸಾವಿರಾರು ವಲಸಿಗರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿರುವ ಅವರು, 'ಹೆಬ್ಬಾಳದಲ್ಲಿ ಬಿಎಂಆರ್‌ಸಿಎಲ್ ಕಾಮಗಾರಿ ಪರಿಶೀಲನೆ ವೇಳೆ ಅಮಾನಿಕೆರೆ ಗ್ರಾಮದಲ್ಲಿ ಅಕ್ರಮ ವಲಸಿಗರು ವಾಸಿಸುತ್ತಿರುವುದು ಗಮನಕ್ಕೆ ಬಂತು. ಬಾಂಗ್ಲಾದೇಶದ ಅಂದಾಜು 3,500 ಪ್ರಜೆಗಳನ್ನು ಗುತ್ತಿಗೆದಾರರು ನಗರಕ್ಕೆ ಕರೆತಂದಿದ್ದಾರೆ. ಅವರ ಬಳಿ ನಕಲಿ ಆಧಾರ್ ಕಾರ್ಡ್, ಗುರುತಿನ ಚೀಟಿ ಇದೆ. ಅಕ್ರಮವಾಗಿ ಶೆಡ್ ಹಾಕಿಕೊಂಡು, ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ರಾಷ್ಟ್ರೀಯ ಭದ್ರತಾ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಳ್ಳಬೇಕು. ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದಿದ್ದಾರೆ.

ನಗರದ ಸಂಚಾರ ದಟ್ಟಣೆಯ ಅನುಭವದ ಬಗ್ಗೆ ಜಾಲತಾಣದಲ್ಲಿ ಪೋಸ್ಟ್

'ವಿಮಾನ ದುಬೈ ತಲುಪಿದರೂ ನಾನು ಮನೆ ಸೇರಲಿಲ್ಲ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಟ್ರಾಫಿಕ್ ಸಮಸ್ಯೆ ವಿಡಿಯೊ ವೀಕ್ಷಿಸಿದ 1.90 ಕೋಟಿ ಮಂದಿ
- ಜಾಲತಾಣಗಳಲ್ಲಿ ಹರಿದಾಡಿದ ಮೀಮ್ಸ್, ಜೋಕ್‌ಗಳು

ಬೆಂಗಳೂರು: ನಗರದಲ್ಲಿ ಟ್ರಾಫಿಕ್ ಸಮಸ್ಯೆಯಿಂದಾಗಿ ವಾಹನ ಸಂಚಾರ ದುಸ್ತರವಾಗಿದೆ. ವಿಮಾನ ನಿಲ್ದಾಣ ರಸ್ತೆಯ ಸಂಚಾರ ದಟ್ಟಣೆಯ ಕಹಿ ಅನುಭವವನ್ನು ಯುವತಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಈ ವಿಡಿಯೊವನ್ನು 1.90 ಕೋಟಿ ಮಂದಿ ವೀಕ್ಷಿಸಿದ್ದಾರೆ.

'ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಕೆಐಎಎಲ್) ಹೊರಟ ವಿಮಾನ ದುಬೈ ತಲುಪಿದರೂ ನಾನು ವಿಮಾನ ನಿಲ್ದಾಣದಿಂದ ಮನೆ ಸೇರಲು ಆಗಿಲ್ಲ. ವಾಹನ ದಟ್ಟಣೆಯಲ್ಲಿ ಸಿಲುಕಿದ್ದೇನೆ. ಇದು ಸುಖಕರ ಪ್ರಯಾಣವಲ್ಲ, ಆಘಾತ' ಎಂದು ಯುವತಿಯು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಾಕಿದ್ದಾರೆ.ಇದನ್ನು ನೋಡಿದ ಹಲವರು, ಸರ್ಕಾರ ಹಾಗೂ ವ್ಯವಸ್ಥೆಗೆ ಹಿಡಿಶಾಪ ಹಾಕಿದ್ದಾರೆ. ಇನ್ನೂ ಹಲವರು ಬೆಂಗಳೂರಿನ ಟ್ರಾಫಿಕ್ ಬಗ್ಗೆ ವ್ಯಂಗ್ಯವಾಡಿ, ಮೀಮ್ಸ್ ಮತ್ತು ಜೋಕ್‌ಗಳನ್ನು ಮಾಡಿದ್ದಾರೆ.

ಇನ್‌ಸ್ಟಾಗ್ರಾಮ್‌ನ ಟ್ರಾವೆಲ್ ಪುಡ್ಡಿಗಲ್ಸ್ ಎಂಬ ಟ್ಯಾಗ್‌ನಡಿ ಯುವತಿಯರು ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯ ವಿಡಿಯೊ ಹಂಚಿಕೊಂಡಿದ್ದಾರೆ. 'ನನ್ನ ಸ್ನೇಹಿತೆ ದುಬೈಗೆ ಹೊರಟಿದ್ದು, ಆಕೆಯನ್ನು ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಬಿಟ್ಟು ಬಂದೆ. ಅವಳು ದುಬೈ ತಲುಪಿದಳು. ಆದರೆ, ನಾನು ಇನ್ನೂ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಂಡಿದ್ದೇನೆ. ಇದು ನಿಜವಾದ ಘಟನೆಯನ್ನು ಆಧರಿಸಿದೆ. ಬೆಂಗಳೂರಿನ ಜನರಿಗೆ ಟ್ಯಾಗ್ ಮಾಡಿ' ಎಂದು ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ.

'ಬೆಂಗಳೂರಿನ ಟ್ರಾಫಿಕ್ ಹೇಗಿದೆ ಎಂದರೆ ವಿಮಾನದಲ್ಲಿ ದುಬೈಗೆ ಹೋಗಿ ಬರೋದಕ್ಕೆ ಎಷ್ಟು ಸಮಯ ಬೇಕಾಗುತ್ತೋ ಅಷ್ಟೇ ಸಮಯ ಇಲ್ಲಿ ಟ್ರಾಫಿಕ್ ಜಂಜಾಟದಲ್ಲಿ ಕಳೆದು ಹೋಗುತ್ತೆ. ಇನ್‌ಸ್ಟಾಗ್ರಾಮ್‌ನಲ್ಲಿ ಒಬ್ಬರು ಹಾಕಿರುವ ಪೋಸ್ಟ್‌ನಿಂದ ಇದು ಗೊತ್ತಾಗಿದೆ. ಅವರ ಸ್ನೇಹಿತೆ ದುಬೈಗೆ ಹೋಗಿ ತಲುಪಿದರು. ಆದರೆ, ಅವರು ಮಾತ್ರ ಬೆಂಗಳೂರಿನ ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದರು' ಎಂದು ಹಲವರು ಪ್ರತಿಕ್ರಿಯಿಸಿದ್ದಾರೆ.

ಯುವತಿಯ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ನೆಟ್ಟಿಗ, 'ಈ ಸಮಯದಲ್ಲಿ ನಾನು ನಡೆದು ಹೋಗಲು ಇಷ್ಟ ಪಡುತ್ತೇನೆ' ಎಂದು ಕಾಮೆಂಟ್ ಮಾಡಿದ್ದಾರೆ. ಮತ್ತೊಬ್ಬರು, 'ಇದು ನಿಜವಾಗಿಯೂ ನನ್ನ ಅನುಭವಕ್ಕೆ ಬಂದಿದೆ. ಪೋಷಕರು ನನ್ನನ್ನು ವಿಮಾನ ನಿಲ್ದಾಣದಲ್ಲಿ ಬಿಟ್ಟು ಹೋದರು. ನಾನು ದಿಲ್ಲಿಗೆ ಬಂದಿಳಿದಾಗ ಅವರು ಮನೆ ತಲುಪಿದರು' ಎಂದು ತಿಳಿಸಿದ್ದಾರೆ.

'ಬೆಂಗಳೂರಿನ ಟ್ರಾಫಿಕ್ ತುಂಬಾ ಕೆಟ್ಟದಾಗಿದೆ. ವಿದೇಶಕ್ಕೆ ಹೋಗಿ ಬರುವುದಕ್ಕಿಂತ ಇಲ್ಲಿನ ಟ್ರಾಫಿಕ್‌ನಲ್ಲಿ ಹೆಚ್ಚು ಸಮಯ ಕಳೆದು ಹೋಗುತ್ತದೆ' ಎಂದು ಹಲವರು ಪೋಸ್ಟ್‌ನಲ್ಲಿ ತಮಾಷೆ ಮಾಡಿದ್ದಾರೆ.

ಪ್ರತಿದಿನವೂ ಶಾಸಕರಿಗೆ ಮೀಸಲು: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿದಿನವನ್ನೂ ಶಾಸಕರಿಗೆ ಮೀಸಲಿಟ್ಟಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ನನ್ನನ್ನು ಭೇಟಿ ಮಾಡಲು ಪ್ರತಿದಿನ ಶಾಸಕರು ಬರುತ್ತಿರುತ್ತಾರೆ' ಎಂದರು.

'ಬೆಂಗಳೂರನ್ನು ಐದು ಹೋಳು ಮಾಡಿ ಒಳು ಬಿಡುತ್ತಿದ್ದಾರೆ' ಎನ್ನುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಈ ವಿಷಯದ ಬಗ್ಗೆ ಈಗಾಗಲೇ ಸದನದಲ್ಲಿ ಮಾತನಾಡಿದ್ದೇವೆ. ಎಲ್ಲರ ಬಳಿಯೂ ಮಾತನಾಡಿಯೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೂ, ಅವರು ರಾಜಕೀಯ ಮಾಡಲು ಮಾತನಾಡುತ್ತಿದ್ದಾರೆ' ಎಂದರು.

'ಬಿಬಿಎಂಪಿ, ವಿದ್ಯುತ್ ಸಂಪರ್ಕ, 'ಬಿ' ಖಾತಾ ವಿಚಾರಗಳ ಬಗ್ಗೆ ಒಂದಷ್ಟು ದಾಖಲೆ ಇಟ್ಟುಕೊಂಡು ಮಾತನಾಡುತ್ತೇನೆ. ನಾನು ಯಾವುದಕ್ಕೂ ಉತ್ತರ ನೀಡದೆ ಓಡಿ ಹೋಗುವುದಿಲ್ಲ.ಸಂಪುಟ ಸಭೆಯಲ್ಲಿ ಕೆಲವು ತೀರ್ಮಾನ ತೆಗೆದುಕೊಳ್ಳಲಿದ್ದೇವೆ. ಎಲ್ಲದಕ್ಕೂ ಉತ್ತರ ನೀಡುತ್ತೇನೆ' ಎಂದರು.

ಮುಖ್ಯಮಂತ್ರಿ ಸ್ಪಷ್ಟನೆ ನೀಡಿದ್ದಾರಲ್ಲ: 'ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ನಿಮಗೆ ಅಪಮಾನ ಮಾಡಿದರು' ಎಂದು ಸುದ್ದಿಗಾರರು ಪ್ರಸ್ತಾಪಿಸಿದಾಗ, 'ಈ ವಿಷಯದ ಬಗ್ಗೆ ಮುಖ್ಯಮಂತ್ರಿಯವರೇ ಸ್ಪಷ್ಟನೆ ನೀಡಿದ್ದಾರೆ. ನಾನು ಮಾತನಾಡಲು ಹೋಗುವುದಿಲ್ಲ' ಎಂದರು. ಜತೆಗೆ 'ಕ್ಷೇತ್ರದ ಜನರಿಗೆ ಸಮಯ ನೀಡಲು ಆಗುತ್ತಿಲ್ಲ. ಆ ಕಾರಣಕ್ಕೆ ಎರಡು ದಿನ ಅಲ್ಲಿಯೇ ಇದ್ದು ಜನರ ಸಮಸ್ಯೆಗಳಿಗೆ ಸ್ಪಂದನೆ ನೀಡುತ್ತೇನೆ' ಎಂದರು.

'ಹೊಸಕೋಟೆಗೂ ಮೆಟ್ರೊ'

ಹೊಸಕೋಟೆ: ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಹೊಸಕೋಟೆಯ ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಶೀಘ್ರ ಮೆಟ್ರೊ ಸಂಪರ್ಕ ಕಲ್ಪಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ಘೋಷಿಸಿದರು.

ನಗರದ ಚನ್ನಬೈರೇಗೌಡ ಕ್ರೀಡಾಂಗಣದಲ್ಲಿ ಭಾನುವಾರ ಫಲಾನುಭವಿಗಳಿಗೆ ಇ-ಸ್ವತ್ತು ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ವೇಗವಾಗಿ ಅಭಿವೃದ್ಧಿ ಕಾಣುತ್ತಿರುವ ಹೊಸಕೋಟೆಗೆ ಮೆಟ್ರೊ ಸಂಪರ್ಕ ಕಲ್ಪಿಸಲು ಶೀಘ್ರ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸುವುದಾಗಿ ಅವರು ಹೇಳಿದರು.

ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ತಾಲ್ಲೂಕುಗಳ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

'ಜಿಎಸ್‌ಟಿ: ಲಂಚ ಕೇಳಿದರೆ ದೂರು ನೀಡಿ'

ಬೆಂಗಳೂರು: 'ಯುಪಿಐ ಮೂಲಕ ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚು ವಹಿವಾಟು ನಡೆಸಿರುವ ಪ್ರಕರಣಗಳಲ್ಲಿ ಜಿಎಸ್‌ಟಿ ಪಾವತಿಸುವಲ್ಲಿ ನೆರವು ನಿಡುತ್ತೇವೆ ಎಂದು ಕೆಲ ಖಾಸಗಿ ವ್ಯಕ್ತಿಗಳು, ವರ್ತಕರಿಂದ ಹಣ ಕೇಳಿದರೆ ತಕ್ಷಣವೇ ನಮ್ಮ ಗಮನಕ್ಕೆ ತನ್ನಿ' ಎಂದು ವಾಣಿಜ್ಯ ತೆರಿಗೆ ಇಲಾಖೆ ಕೋರಿದೆ.

ಜಿಎಸ್‌ಟಿ ಕಡಿಮೆ ಮಾಡಿಸುತ್ತೇವೆ, ನೋಟಿಸ್ ರದ್ದು ಮಾಡಿಸುತ್ತೇವೆ ಎಂದು ವರ್ತಕರಿಂದ ಕೆಲ ಖಾಸಗಿ ವ್ಯಕ್ತಿಗಳು ಹಣ ವಸೂಲಿ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಈ ಬಗ್ಗೆ ಸುದ್ದಿ ವಾಹಿನಿಗಳಲ್ಲಿ ವರದಿ ಪ್ರಸಾರವಾಗಿದೆ. ಅಂತಹ ವ್ಯಕ್ತಿಗಳ ಬಗ್ಗೆ ಇಲಾಖೆಗೆ ಮಾಹಿತಿ ನೀಡಿ ಎಂದು ಕೋರಿದೆ. ಖಾಸಗಿ ವ್ಯಕ್ತಿಗಳಿರಲಿ ಅಥವಾ ಇಲಾಖೆಯ ಸಿಬ್ಬಂದಿ/ಅಧಿಕಾರಿಗಳು ಹೀಗೆ ಹಣ ಕೇಳಿದರೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ. 1800 425 6300 ಸಂಖ್ಯೆಗೆ ಕರೆ ಮಾಡಿ, ದೂರು ನೀಡಿ ಎಂದು ಸೂಚಿಸಿದೆ.

ನಗರದಲ್ಲಿ ಇಂದು

ಉಚಿತ ಆರೋಗ್ಯ, ನೇತ್ರ ತಪಾಸಣೆ: ಉದ್ಘಾಟನೆ: ಶಿವಯೋಗಿ ಸಿ. ಕಳಸದ, ಆಯೋಜನೆ : ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ಸ್ಥಳ: ಸರ್ಕಾರಿ ನೌಕರರ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

'ಸೌಂದರ್ಯಸುಧೆ' ಕನ್ನಡ ಸಾಹಿತ್ಯ ವೇದಿಕೆ: ಅತಿಥಿ: ಚ.ಹ. ರಘುನಾಥ, ಆಯೋಜನೆ ಮತ್ತು ಸ್ಥಳ: ಸೌಂದರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳಿಗ್ಗೆ 11

ಪ್ರಥಮ ಪದವಿ ತರಗತಿಗಳ ಉದ್ಘಾಟನೆ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರತಿಭಾ ಪುರಸ್ಕಾರ, ಶೈಕ್ಷಣಿಕ ಪುರಸ್ಕಾರ ದಿನ: ಅತಿಥಿ: ಕೆ.ಎನ್. ಪುಷ್ಪಲತಾ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 5.30

'ಸೀತಾ ಪರಿತ್ಯಾಗ' ಅಮೋಘ ತಾಳ ಮದ್ದಳೆ ಪ್ರದರ್ಶನ: ಭಾಗವಹಿಸುವ ಕಲಾವಿದರು: ಕೇಶವ ಹೆಗಡೆ ಕೊಳಗಿ, ಶಂಕರ ಭಾಗವತ, ಗ.ನಾ. ಭಟ್ಟ, ಗಣರಾಜ ಕುಂಬ್ಳೆ, ಕಬ್ಬಿನಾಲೆ ವಸಂತ ಭಾರದ್ವಾಜ, ರವಿ ಮಡೋಡಿ, ಆಯೋಜನೆ: ಶ್ರೀಜಯರಾಮ ಸೇವಾ ಮಂಡಳಿ, ಸ್ಥಳ: ಪ್ರೊ.ಜಿ. ವೆಂಕಟಸುಬ್ಬಯ್ಯ ಜನ್ಮ ಶತಾಬ್ದಿ ಭವನ, ಎರಡನೇ ಮಹಡಿ, ಶ್ರೀಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಸಂಸ್ಥಾಪಕರ ದಿನಾಚರಣೆ: ಅತಿಥಿಗಳು: ಹಂ.ಪ. ನಾಗರಾಜಯ್ಯ, ಜಯಕರ ಎಸ್.ಎಂ., ಎನ್. ರಾಜು, ಅಧ್ಯಕ್ಷತೆ: ರಾಧಾಕೃಷ್ಣ, ಉಪಸ್ಥಿತಿ: ಶಾಂತಪ್ಪ ಸೂರನ್, ಆಯೋಜನೆ ಮತ್ತು ಸ್ಥಳ: ಡಾ. ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ನಳಂದ ನ್ಯಾಷನಲ್ ಪದವಿ ಪೂರ್ವ ಕಾಲೇಜು, ಜೆ.ಸಿ. ನಗರ ಕುರುಬರಹಳ್ಳಿ, ಪಶ್ಚಿಮ ಕಾರ್ಡ್‌ರಸ್ತೆ, ಬೆಳಿಗ್ಗೆ 11


ಹಂ.ಪ.ನಾಗರಾಜಯ್ಯ

ಒಂದು ತಿಂಗಳಿಗೆ ₹42 ಸಾವಿರ ಕನಿಷ್ಠ ವೇತನ ನಿಗದಿಪಡಿಸಲು ಆಗ್ರಹ

'ಗಾರ್ಮೆಂಟ್ಸ್ ಕಾರ್ಮಿಕರಿಗೆ ತಾರತಮ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾರ್ಮೆಂಟ್ಸ್‌ನಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸುವಲ್ಲಿ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ' ಎಂದು ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷೆ ಆರ್. ಪ್ರತಿಭಾ ಆರೋಪಿಸಿದರು.

ಭಾನುವಾರ ನಡೆದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಮಾವೇಶದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಮಹಿಳೆಯರು ಗಾರ್ಮೆಂಟ್ಸ್ ಉದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಸರ್ಕಾರ ಇವರಿಗೆ ತಿಂಗಳಿಗೆ ಕನಿಷ್ಠ ₹12,800 ವೇತನ ನಿಗದಿಪಡಿಸಿದೆ. 45 ವರ್ಷಗಳಿಂದ ಪರಿಷ್ಕರಣೆಯೇ ಆಗಿಲ್ಲ. ಇದರಲ್ಲಿ ಜೀವನ ನಿರ್ವಹಣೆಯೇ ಕಷ್ಟವಾಗಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಒಂದು ತಿಂಗಳಿಗೆ ₹42 ಸಾವಿರ ಕನಿಷ್ಠ ವೇತನ ನಿಗದಿಪಡಿಸಬೇಕು' ಎಂದು ಆಗ್ರಹಿಸಿದರು.

ಗಾರ್ಮೆಂಟ್ಸ್ ಕಾರ್ಮಿಕರ ಸಮಾವೇಶದಲ್ಲಿ ಆರ್. ಪ್ರತಿಭಾ ಅವರು ಕಾರ್ಮಿಕ ಮುಖಂಡರಾದ ಚಿಕ್ಕಮ್ಮ, ರೇಣುಕಮ್ಮ ಅವರೊಂದಿಗೆ ಕುಶುಲೋಪರಿಯಲ್ಲಿ ತೊಡಗಿದ್ದರು. ದು. ಸರಸ್ವತಿ, ಎಐಸಿಸಿಟಿಯುನ ರಾಜ್ಯ ಉಪಾಧ್ಯಕ್ಷೆ ನಿರ್ಮಲಾ, ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಮಹಿಳೆಯರ ದುಡಿಮೆಗೆ ಸರ್ಕಾರ ಹಾಗೂ ಬಂಡವಾಳಶಾಹಿ ವ್ಯವಸ್ಥೆ ಬೆಲೆ ಕೊಡುತ್ತಿಲ್ಲ. ಮಹಿಳೆಯರ ಆದಾಯ ಪೂರಕ ಆದಾಯವೆಂದು ಪರಿಗಣಿಸಿ, ಗಾರ್ಮೆಂಟ್ಸ್ ಮಾಲೀಕರ ಒತ್ತಡಕ್ಕೆ ಮಣಿದು, ರಾಜ್ಯ ಸರ್ಕಾರ ವೇತನ ಪರಿಷ್ಕರಣೆ ಮಾಡುತ್ತಿಲ್ಲ. 2025ರ ಏಪ್ರಿಲ್‌ನಲ್ಲಿ ಇತರೆ ಅನುಸೂಚಿತ ಉದ್ಯಮ ಕಾರ್ಮಿಕರಿಗೆ ತಿಂಗಳಿಗೆ ₹23 ಸಾವಿರ ಕನಿಷ್ಠವೇತನ ನಿಗದಿಪಡಿಸಿದೆ. ಆದರೆ, ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಇದು ಅನ್ವಯವಾಗುತ್ತಿಲ್ಲ' ಎಂದು ದೂರಿದರು.

'ರಾಜ್ಯ ಸರ್ಕಾರ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರಲು ಹೊರಟಿರುವುದು ಮಹಿಳಾ ಕಾರ್ಮಿಕರಿಗೆ ಮಾರಕವಾಗಿದೆ. ರಾತ್ರಿ ಪಾಳಿಯಲ್ಲಿ ದುಡಿಸಲು ಮಾಲೀಕರಿಗೆ ಷರತ್ತುರಹಿತವಾಗಿ ಅವಕಾಶ ನೀಡಿರುವುದು ಖಂಡನೀಯ. ಕೆಲಸದ ಅವಧಿಯನ್ನು 8ರಿಂದ 10 ಗಂಟೆಗೆ ವಿಸ್ತರಿಸುವುದು ಅಪಾಯಕಾರಿಯಾಗಿದೆ. ಇದರಿಂದ ಮಹಿಳೆಯರ ಮೇಲೆ ದೌರ್ಜನ್ಯವೆಸಗಲು ಹಾಗೂ ಕಿರುಕುಳ ನೀಡಲು ದಾರಿ ಮಾಡಿಕೊಡುತ್ತದೆ' ಎಂದು ಗಾರ್ಮೆಂಟ್ಸ್‌ನಲ್ಲಿ ಕಾರ್ಯನಿರ್ವಹಿಸುವ ರಂಗಮ್ಮ, ಚಿಕ್ಕಮ್ಮ, ರೇಣುಕಾ ತಿಳಿಸಿದರು.

'ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ರದ್ದುಪಡಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಲೇಖಕಿ ದು.ಸರಸ್ವತಿ, ಕಾರ್ಮಿಕ ಮುಖಂಡರಾದ ಕ್ಲಿಫ್ಟನ್ ಡಿ. ರೋಜಾರಿಯೊ, ಮೈತ್ರೇಯಿ ಕೃಷ್ಣನ್ನಾಗೂ ನಿರ್ಮಲಾ ಅವರು ಉಪಸ್ಥಿತರಿದ್ದರು.

ಜಿಬಿಎ: 5 ನಗರ ಪಾಲಿಕೆಗಷ್ಟೇ ಸೀಮಿತವಲ್ಲ

‘ಗ್ರೇಟರ್ ಬೆಂಗಳೂರು ಪ್ರದೇಶ’ ವ್ಯಾಪ್ತಿಗೆ ಬರುವ ಗ್ರಾ.ಪಂ.ಗಳ ಯೋಜನೆಗಳ ನಿರ್ವಹಣೆ ಜವಾಬ್ದಾರಿ

• ಆರ್.ಮಂಜುನಾಥ್

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ- 2024’ರ (ಜಿಬಿಜಿಎ) ಪ್ರಕಾರ ರಚನೆಯಾಗಲಿರುವ ಮುಖ್ಯಮಂತ್ರಿ ನೇತೃತ್ವದ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ದ (ಜಿಬಿಎ) ವ್ಯಾಪ್ತಿ ನಗರ ಪಾಲಿಕೆಗಳಿಷ್ಟೇ ಸೀಮಿತವಾಗುವುದಿಲ್ಲ. ಸರ್ಕಾರ ‘ಗ್ರೇಟರ್ ಬೆಂಗಳೂರು ಪ್ರದೇಶ’ವನ್ನು ಎಷ್ಟು ವಿಸ್ತರಿಸುತ್ತದೆಯೋ ಅಲ್ಲಿಯವರೆಗೂ ಜಿಬಿಎ ಅಧಿಕಾರ ವ್ಯಾಪ್ತಿಯನ್ನು ಹೊಂದಲಿದೆ.

ಬಿಬಿಎಂಪಿ ವ್ಯಾಪ್ತಿಗಷ್ಟೇ ‘ಗ್ರೇಟರ್ ಬೆಂಗಳೂರು ಪ್ರದೇಶ’ವನ್ನು ಮೇ 15ರಂದು ಅಧಿಸೂಚಿಸಿರುವ ರಾಜ್ಯ ಸರ್ಕಾರ, ಸದ್ಯದಲ್ಲಿಯೇ ಇನ್ನೂ ಹಲವು ಪ್ರದೇಶಗಳನ್ನು ಸೇರಿಸಲಿದೆ. ಹೀಗಾಗಿ, ಮುಖ್ಯಮಂತ್ರಿ ನೇತೃತ್ವದಲ್ಲಿ 15ಕ್ಕೂ ಹೆಚ್ಚು ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡು ಶೀಘ್ರವೇ ರಚನೆಯಾಗುವ ‘ಜಿಬಿಎ’, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯನ್ನೂ ಮೀರಲಿದೆ. ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಲವು ಪ್ರದೇಶಗಳೂ ‘ಗ್ರೇಟರ್ ಬೆಂಗಳೂರು’ ವ್ಯಾಪ್ತಿಗೆ ಬರಲಿವೆ.

ಹೊಸ ನಗರ ಪಾಲಿಕೆಗಳೂ ಸೇರಿದಂತೆ ತನ್ನ ವ್ಯಾಪ್ತಿಯ ಎಲ್ಲ ಪ್ರದೇಶಗಳ ಅಭಿವೃದ್ಧಿಯ ನೇತೃತ್ವವನ್ನು ಜಿಬಿಎ ವಹಿಸಲಿದೆ. ಮೂಲಸೌಕರ್ಯಗಳು ಸೇರಿದಂತೆ ಬೃಹತ್ ಯೋಜನೆಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆಯೂ ಜಿಬಿಎ ಅಧಿಕಾರ ವ್ಯಾಪ್ತಿಗೆ ಬರಲಿದೆ.

ಮುಖ್ಯಾಂಶಗಳು
- 1000 ಚದರ ಕಿ.ಮೀಗೆ ಹಿಗ್ಗಲಿರುವ ಜಿಬಿಎ ವ್ಯಾಪ್ತಿ
- ನಗರ ಜಿಲ್ಲೆಯಲ್ಲಿವೆ 86 ಗ್ರಾಮ ಪಂಚಾಯಿತಿಗಳು
- ಆರು ಉಪ ನಗರಗಳ ನಡುವಿನ ಪ್ರದೇಶ ‘ಗ್ರೇಟರ್ ಬೆಂಗಳೂರು’

ಉದ್ದೇಶಿತ ಜಿಬಿಎ ನಕ್ಷೆ

ಬಿಬಿಎಂಪಿ ವ್ಯಾಪ್ತಿಯನ್ನೇ ‘ಗ್ರೇಟರ್ ಬೆಂಗಳೂರು ಪ್ರದೇಶ’ವನ್ನಾಗಿ ಗುರುತಿಸಿ, ಅದರಲ್ಲೇ ಐದು ಹೊಸ ನಗರ ಪಾಲಿಕೆಗಳನ್ನು ರಚಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ. ‘ಗ್ರೇಟರ್ ಬೆಂಗಳೂರಿಗೆ’ ಸುತ್ತಮುತ್ತಲಿನ ಪ್ರದೇಶಗಳೂ ಸೇರಿಕೊಂಡು ನಗರ ಪಾಲಿಕೆಗಳು ರಚನೆಯಾಗುತ್ತವೆ ಎಂಬ ಅನಿಸಿಕೆ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರಲ್ಲಿತ್ತು. ಹೀಗಾಗಿ, ಬಿಬಿಎಂಪಿ ವ್ಯಾಪ್ತಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಕೂಡ ಗರಿಗೆದರಿಕೊಂಡಿತ್ತು.

ಯಶವಂತಪುರ, ಬೆಂಗಳೂರು ದಕ್ಷಿಣ, ಮಹದೇವಪುರ, ಬೊಮ್ಮನಹಳ್ಳಿ, ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳು ‘ಗ್ರೇಟರ್ ಬೆಂಗಳೂರು’ ಅಡಿ ರಚನೆಯಾಗಲಿರುವ ನಗರ ಪಾಲಿಕೆಗಳಿಗೆ ಸೇರುತ್ತವೆ ಎಂದು ಜನಪ್ರತಿನಿಧಿಗಳು ಆಗಾಗ್ಗೆ ಹೇಳುತ್ತಿದ್ದರು. ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕಾ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಯ ಸ್ಥಳೀಯರೂ ಇದೇ ನಿರೀಕ್ಷೆಯಲ್ಲಿದ್ದರು.

‘ನಮ್ಮ ಪ್ರದೇಶವೆಲ್ಲ ‘ಗ್ರೇಟರ್ ಬೆಂಗಳೂರು’ ಆಗುತ್ತದೆ. ಮೂಲಸೌಕರ್ಯದಲ್ಲಿ ಹಿಂದಿರುವ ನಮಗೆ ಹೆಚ್ಚು ಅನುಕೂಲವಾಗಲಿದೆ ಎಂದು ಭಾವಿಸಿದ್ದೆವು. ಆದರೆ, ಬಿಬಿಎಂಪಿ ವ್ಯಾಪ್ತಿಗಷ್ಟೇ ಐದು ನಗರ ಪಾಲಿಕೆಗಳಾಗಿರುವುದು ಹಲವರಲ್ಲಿ ನಿರಾಸೆ ತರಿಸಿದೆ’ ಎಂದು ಬಿಬಿಎಂಪಿ ಗಡಿಯಲ್ಲಿರುವ ಕಣ್ಣೂರು ನಿವಾಸಿ ನಾಗರಾಜು ಹೇಳಿದರು.

‘ಬಿಬಿಎಂಪಿ ವ್ಯಾಪ್ತಿಯಲ್ಲೇ ಐದು ನಗರ ಪಾಲಿಕೆ ರಚನೆಯಾಗಿರುವುದರಿಂದ ಹೊಸ ಪ್ರದೇಶಗಳು ಜಿಬಿಎಗೆ ಸೇರಿಕೊಳ್ಳುವುದಿಲ್ಲ ಎಂದೇನೂ ಇಲ್ಲ. 712 ಚದರ ಕಿ.ಮೀ. ವ್ಯಾಪ್ತಿಗೆ ಮಾತ್ರ ನಗರ ಪಾಲಿಕೆಗಳು ರಚನೆಯಾಗಿವೆ. ಜಿಬಿಎ 1000 ಚದರ ಕಿ.ಮೀಗೂ ಹೆಚ್ಚು ಪ್ರದೇಶಕ್ಕೆ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಲಿದೆ. ಈಗಿರುವ ಬಿಬಿಎಂಪಿ ವ್ಯಾಪ್ತಿಯ ಸುತ್ತಮುತ್ತಲಿರುವ ಪ್ರದೇಶಗಳು ‘ಗ್ರೇಟರ್ ಬೆಂಗಳೂರು’ ಆಗಲಿವೆ’ ಎಂದು ‘ಬ್ರ್ಯಾಂಡ್ ಬೆಂಗಳೂರು’ ಸಮಿತಿ ಸದಸ್ಯ ವಿ. ರವಿಚಂದರ್ ತಿಳಿಸಿದರು.

‘ಮಾಸ್ಟರ್ ಪ್ಲಾನ್’ ಇಲ್ಲದೆ ಏನು ಪ್ರಯೋಜನ?

‘ಮಾಸ್ಟರ್ ಪ್ಲಾನ್ ಇಲ್ಲದೆ ಸರ್ಕಾರವೇ ನಿಯಂತ್ರಿಸುವ ತ್ತಷ್ಟು ಸ್ಥಳೀಯ ಸಂಸ್ಥೆಗಳನ್ನು ರಚಿಸುವುದರಿಂದ ಆಗುವ ಪ್ರಯೋಜನವಾದರೂ ಏನು? ಏಷ್ಯಾದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಬೆಂಗಳೂರು ಒಂದಾಗಿದ್ದರೂ, 2015ರಿಂದ ನಿರ್ಲಿಪ್ತವಾಗಿರುವ ‘ಮಾಸ್ಟರ್ ಪ್ಲಾನ್’ನಿಂದ ಪ್ರಗತಿ ಕಾಣಲು ಸಾಧ್ಯವಾಗುತ್ತಿಲ್ಲ.

ವಿನೋದ್

ನೀರು, ವಿದ್ಯುತ್, ಪರಿಸರ, ಸಾರ್ವಜನಿಕ ಸಾರಿಗೆ, ನಾಗರಿಕ ಮೂಲಸೌಕರ್ಯ ಒದಗಿಸುವ ಜೊತೆಗೆ ಬೆಂಗಳೂರಿನ ಅನನ್ಯ ವಾತಾವರಣವನ್ನು ರಕ್ಷಿಸುವ, ನಗರದ ಸಮಗ್ರ ಅಭಿವೃದ್ಧಿಗೆ ಪೂರಕವಾದ ‘ಮಾಸ್ಟರ್ ಪ್ಲಾನ್’ ತುರ್ತು ಅಗತ್ಯವಿದೆ. ಬೆಂಗಳೂರು ‘ಐಟಿ ರಾಜಧಾನಿ’ ಮಾತ್ರವಲ್ಲ, ವಿಜ್ಞಾನ ಮತ್ತು ಉತ್ಪಾದನೆ ವಲಯದಲ್ಲೂ ಭಾರತದ ರಾಜಧಾನಿಯಾಗಿದೆ.

ಜಿಬಿಎನಂತಹ ಹೊಸ ಪ್ರಾಧಿಕಾರಗಳು ರಚನೆಯಾಗುವ ಮುನ್ನ ನಮ್ಮ ನಗರಕ್ಕೆ ದೂರದೃಷ್ಟಿ ಹೊಂದಿರುವ ‘ನೀಲನಕ್ಷೆ’ಯ ಅಗತ್ಯವಿದೆ’ ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನದ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಜಾಕಬ್ ಅಭಿಪ್ರಾಯಪಟ್ಟರು.

‘ಅಧಿಕಾರ ವ್ಯಾಪ್ತಿ ದೊಡ್ಡದು’

‘ಜಿಬಿಜಿಎ ಕಾಯ್ದೆಯಂತೆ ರಚನೆಯಾಗುವ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು ನಿರ್ವಹಿಸುವ, ನಿಗಾ ವಹಿಸುವ ಅಧಿಕಾರವನ್ನು ಹೊಂದಿದೆ.


ರವಿಚಂದರ್

ರಾಜ್ಯ ಸರ್ಕಾರ ಒದಗಿಸುವ ಹಣಕಾಸಿನಲ್ಲಿ ಜಿಬಿಎ ಬೃಹತ್ ಯೋಜನೆಗಳನ್ನು ನಿರ್ವಹಿಸಬಹುದು’ ಎಂದು ‘ಜಿಬಿಎ ಕಾಯ್ದೆ’ ರಚನೆಯ ‘ಬ್ರ್ಯಾಂಡ್ ಬೆಂಗಳೂರು’ ಸಮಿತಿ ಸದಸ್ಯ ವಿ. ರವಿಚಂದರ್ ತಿಳಿಸಿದರು.

‘5 ಶಾಸಕರಿಗೆ 2 ಪಾಲಿಕೆಯಲ್ಲಿ ಹಕ್ಕು’

ರಾಜರಾಜೇಶ್ವರಿನಗರ, ಯಶವಂತಪುರ, ಮಹದೇವಪುರ, ಪದ್ಮನಾಭನಗರ, ದಾಸರಹಳ್ಳಿ ವಿಧಾನಸಭೆ ಕ್ಷೇತ್ರಗಳ ವಾರ್ಡ್‌ಗಳು ಎರಡು ನಗರ ಪಾಲಿಕೆಗಳ ವ್ಯಾಪ್ತಿಗೆ ಬರುವುದರಿಂದ, ಐದು ಶಾಸಕರಿಗೆ ಎರಡು ನಗರ ಪಾಲಿಕೆಗಳಲ್ಲಿ ‘ಹಕ್ಕು’ ಸಿಗಲಿದೆ. ಕರಡು ಅಧಿಸೂಚನೆಯಂತೆಯೇ ಕಾರ್ಯಾನುಷ್ಠಾನವಾದರೆ, ಮೇಯರ್- ಉಪ ಮೇಯರ್ ಚುನಾವಣೆಯಲ್ಲಿ ಮತದಾನದ ಹಕ್ಕು ಸೇರಿದಂತೆ, ಶಾಸಕರಿಗೆ ಅನುದಾನ ಹಾಗೂ ಪಾಲಿಕೆಯ ಕಾರ್ಯನಿರ್ವಹಣೆ ಬಗ್ಗೆ ಕೌನ್ಸಿಲ್‌ನಲ್ಲಿ ಮಾತನಾಡುವ ಅಧಿಕಾರವೂ ಲಭ್ಯವಾಗಲಿದೆ.

ಸುದ್ದಿ 2 ನಿಮಿಷ

ಅವಧಿ ಮೀರಿದ ಆಹಾರೋತ್ಪನ್ನಗಳ ಮಾರಾಟ: ಪರಿಶೀಲನೆ

ಬೆಂಗಳೂರು: ಅವಧಿ ಮೀರಿದ ಆಹಾರೋತ್ಪನ್ನಗಳ ಮಾರಾಟ ಪತ್ತೆಗೆ ಸಂಬಂಧಿಸಿದಂತೆ ಆಹಾರ ಸುರಕ್ಷತೆ ಇಲಾಖೆ ಅಧಿಕಾರಿಗಳು ರಾಜ್ಯದಾದ್ಯಂತ 168 ಮಾಲ್ ಹಾಗೂ ಸೂಪರ್ ಮಾರುಕಟ್ಟೆಗಳಲ್ಲಿ ಪರಿಶೀಲನೆ ನಡೆಸಿದ್ದು, ಮೂರು ಮಾಲ್‌ಗಳಿಗೆ ನೋಟಿಸ್ ನೀಡಿದ್ದಾರೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅನ್ವಯ ಇಲಾಖೆ ಅಧಿಕಾರಿಗಳು ಮಾಲ್‌ಗಳು ಹಾಗೂ ಸೂಪರ್ ಮಾರುಕಟ್ಟೆಯಲ್ಲಿರುವ ವಿವಿಧ ಆಹಾರೋತ್ಪನ್ನಗಳನ್ನು ಪರಿಶೀಲಿಸಿದ್ದಾರೆ. ಬೆಳಗಾವಿಯ ಮೂರು ಮಾಲ್‌ಗಳಲ್ಲಿ ಅವಧಿ ಮೀರಿದ ತಂಪು ಪಾನೀಯ, ಬಾದಾಮಿ ಹಾಲು ಮಾರಾಟ ಮಾಡು ತ್ತಿರುವುದು ಪತ್ತೆಯಾಗಿದೆ. ‘ಅವಧಿ ಮೀರಿದ ಆಹಾರೋತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿ ಮಾಲ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಧರ್ಮಸ್ಥಳ ಪ್ರಕರಣ: ಸಮಗ್ರ ತನಿಖೆಗೆ ಒತ್ತಾಯ

ಕೆ.ಆರ್.ಪುರ: ಶ್ರೀಕ್ಷೇತ್ರ ಧರ್ಮಸ್ಥಳ ಸುತ್ತಮುತ್ತ ನೂರಾರು ಅತ್ಯಾಚಾರ ಮತ್ತು ಕೊಲೆ ನಡೆದಿದೆ ಎಂಬ ಆರೋಪ ಸಂಬಂಧ ಪಾರದರ್ಶಕವಾದ ತನಿಖೆ ನಡೆಸುವಂತೆ ಒತ್ತಾಯಿಸಿ ಮಾರಗೊಂಡನಹಳ್ಳಿ ಗ್ರಾಮಸ್ಥರು ಭಾನುವಾರ ಪ್ರತಿಭಟನೆ ನಡೆಸಿದರು.

ಮಾರಗೊಂಡನಹಳ್ಳಿಯ ಆಂಜನೇಯ ದೇವಸ್ಥಾನದ ಮುಂಭಾಗದಿಂದ ಅಂಬೇಡ್ಕರ್ ಪುತ್ಥಳಿವರೆಗೆ ಮೇಣದ ಬತ್ತಿ ಹಿಡಿದು ಕೈ ತೋಳಿಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟನಾಕಾರರು ಮೆರವಣಿಗೆ ನಡೆಸಿದರು.

‘ಧರ್ಮಸ್ಥಳದ ಸುತ್ತಮುತ್ತಲಿನ ಪ್ರದೇಶದಲ್ಲಿ ಶವಗಳನ್ನು ಹೂತು ಹಾಕಿದ್ದೇನೆ ಎಂದು ಅನಾಮಧೇಯ ವ್ಯಕ್ತಿಯೊಬ್ಬರು ಸಾಕ್ಷಿ ಸಮೇತ ಪೊಲೀಸರಿಗೆ ದೂರು ನೀಡಿದ್ದಾರೆ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಮಗ್ರ ತನಿಖೆ ನಡೆಸಬೇಕು ’ ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಚುಟುಕೆ ಸುದ್ದಿ

ವಿಚಾರ ಸಂಕಿರಣ ಪುಸ್ತಕ ಬಿಡುಗಡೆ 24ಕ್ಕೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷಾ ಕೇಂದ್ರದ 40ನೇ ವಾರ್ಷಿಕೋತ್ಸವದ ಅಂಗವಾಗಿ ‘ವಿದೇಶಿ ಭಾಷಾ ಕಲಿಕೆಯಲ್ಲಿ ನವೀನ ಬೋಧನಾ ವಿಧಾನಗಳು’ ಕುರಿತು ಜುಲೈ 24ರಂದು ವಿಶ್ವವಿದ್ಯಾಲಯದ ಹೊಸ ಅಕಾಡೆಮಿಕ್ ಬ್ಲಾಕ್‌ನಲ್ಲಿ ವಿಚಾರ ಸಂಕಿರಣ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಎಸ್.ಆರ್. ನಿರಂಜನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಕುಲಪತಿ ಲಿಂಗರಾಜ ಗಾಂಧಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ಜಲಜಾ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ

38 ತಿಂಗಳ ಹಿಂಬಾಕಿ ವೇತನ ಬಿಡುಗಡೆಗೆ ಆಗ್ರಹ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ನಾಲ್ಕು ನಿಗಮಗಳಲ್ಲಿ ಕಾರ್ಯನಿರ್ಹಿಸು ತ್ತಿರುವ ನೌಕರರ 38 ತಿಂಗಳ ಬಾಕಿ ವೇತನ ನೀಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಆಗ್ರಹಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಮಿತಿಯ ಅಧ್ಯಕ್ಷ ಮನು ಬಳಿಗಾರ್, ‘ಸಾರಿಗೆ ನೌಕರರ ವೇತನ ಪರಿಷ್ಕರಣೆಯಾದ 2020ರ ಜನವರಿ 1ಕ್ಕೆ ಅನ್ವಯ ವಾಗುವಂತೆ 38 ತಿಂಗಳ ಬಾಕಿ ವೇತನ ಪಾವತಿಸಬೇಕು. 2024ರ ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆಯನ್ನು ತಕ್ಷಣ ಜಾರಿಗೊಳಿಸಬೇಕು. ಇತರೆ ಇಲಾಖೆಗಳಿಗೆ ಹೋಲಿಸಿದರೆ ಸಾರಿಗೆ ಸಂಸ್ಥೆ ನೌಕರರ ವೇತನ ಕಡಿಮೆ ಇದೆ. ದಿನಬಳಕೆ ವಸ್ತುಗಳ ದರ ಹೆಚ್ಚಳವಾಗಿದ್ದು, ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಆದ್ದರಿಂದ ಕೂಡಲೇ 38 ತಿಂಗಳ ಹಿಂಬಾಕಿ ನೀಡಬೇಕು ಹಾಗೂ ವೇತನ ಪರಿಷ್ಕರಣೆ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಬಿ.ಸಿ. ರಾಯ್ ಟ್ರೋಫಿ: ಕರ್ನಾಟಕ ತಂಡಕ್ಕೆ ಜಯ

ಬೆಂಗಳೂರು: ಪಂಜಾಬ್‌ನ ಅಮೃತಸರದಲ್ಲಿ ನಡೆಯುತ್ತಿರುವ ಬಿ.ಸಿ. ರಾಯ್ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಕರ್ನಾಟಕ ತಂಡವು 3–1ರಿಂದ ಒಡಿಶಾ ವಿರುದ್ಧ ಜಯಸಾಧಿಸಿತು.

ಜಿಎನ್‌ಡಿಯು ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕರ್ನಾಟಕದ ಹೃಷಿಕೇಶ್ ಚರಣ್ ಅವರು ಎರಡು ಗೋಲು (7ನೇ ನಿ. ಹಾಗೂ 45 + 3ನೇ ನಿ.) ಗಳಿಸಿದರು. ಪವೀಶ್ ಕುಮಾರ್ ಒಂದು ಗೋಲು (17ನೇ ನಿ.) ಹೊಡೆದರು. ಒಡಿಶಾ ಪರ ಇಶಾಂತ್ ಕೌರ್ ಏಕೈಕ ಗೋಲು (6ನೇ ನಿ.) ದಾಖಲಿಸಿದರು.

ಕರ್ನಾಟಕ ತಂಡವು, ಬೀಬಿ ರತ್ನಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಮುಂದಿನ ತನ್ನ ಪಂದ್ಯದಲ್ಲಿ ಜಾರ್ಖಂಡ್ ಎದುರು ಸೆಣಸಲಿದೆ.

‘ಪ್ರತಿಭಾ ಪುರಸ್ಕಾರ ಸದುಪಯೋಗ ಆಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಸಮುದಾಯದ ಮುಖಂಡರು ₹1 ಕೋಟಿಗೂ ಹೆಚ್ಚು ಹಣವನ್ನು ವಿನಿಯೋಗಿ ಸುತ್ತಿದ್ದಾರೆ. ಮಕ್ಕಳು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ದೇಶಕ್ಕೆ, ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಲಹೆ ನೀಡಿದರು.

ನಗರದಲ್ಲಿ ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ‘ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಇಂಥದ್ದೊಂದು ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಎಲ್ಲರ ಬಳಿಯೂ ಹಣವಿರುತ್ತದೆ. ಅದನ್ನು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿನಿಯೋಗಿಸುವ ಟ್ರಸ್ಟ್‌ನ ಕೆಲಸ ಮೆಚ್ಚುವಂಥದ್ದು’ ಎಂದರು.

ಆರ್.ಎಂ.ಆರ್ ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಟ್ರಸ್ಟ್ ನಿರ್ದೇಶಕರಾದ ಲಕ್ಷ್ಮಿಕಾಂತ್, ಜೈ ರಾಮ್, ಎಂ. ಮಾರುತಿ ಮತ್ತು ಅಧ್ಯಕ್ಷ ಕೆ.ಎಂ. ನಾಗರಾಜ್ ಮತ್ತು ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಉಪಸ್ಥಿತರಿದ್ದರು

ಗ್ಯಾರಂಟಿ ಅನುಷ್ಠಾನಗಳ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು.

ಟ್ರಸ್ಟ್ ಅಧ್ಯಕ್ಷ ಕೆ.ಎಂ.ನಾಗರಾಜ್ ಮಾತನಾಡಿ, ‘ತಂದೆ–ತಾಯಿಯವರು ಕೂಡಿಟ್ಟಿರುವ ಹಣದಲ್ಲಿ ಸಮಾಜಕ್ಕೆ ಕಿರುಕಾಣಿಕೆ ನೀಡಲಾಗುತ್ತಿದೆ. ಬಡತನದಿಂದಾಗಿ ಹಳ್ಳಿಕಾರ ಸಮುದಾಯದ ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣವನ್ನು ಮೊಟಕುಗೊಳಿ ಸುತ್ತಿದ್ದಾರೆ. ಅಂಥ ಮಕ್ಕಳು ಶೈಕ್ಷಣಿಕವಾಗಿ ಬೆಳೆಯಲು ಟ್ರಸ್ಟ್ ನೆರವಾಗುತ್ತಿದೆ. ಐಎಎಸ್, ಕೆಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಾಗಿ ತರಬೇತಿ ನೀಡಲಾಗುತ್ತಿದೆ’ ಎಂದು ವಿವರಿಸಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಹಳ್ಳಿಕಾರ ಸಮುದಾಯದ 100 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, 200 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು.

ಮುಖ್ಯಾಂಶಗಳು
- ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ
- ಹಳ್ಳಿಕಾರ ಸಮುದಾಯದ ಕಾರ್ಯಕ್ರಮ

ಇಬ್ಬರ ವಿರುದ್ಧ ಎಫ್‌ಐಆರ್

ಹಾರೋಹಳ್ಳಿ: ತಾಲ್ಲೂಕಿನ ದೊಡ್ಡಮುದುವಾಡಿ ಹಾಲು ಉತ್ಪಾದಕರ ಸಹಕಾರ ಸಂಘದ ಇಬ್ಬರು ಕಾರ್ಯನಿರ್ವಾಹಕ ಅಧಿಕಾರಿಗಳ (ಸಿಇಒ) ವಿರುದ್ಧ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹವ್ಯಕ ಪ್ರತಿಷ್ಠಾನದ ವಾರ್ಷಿಕೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಮುದಾಯದವರು ಪಾಲ್ಗೊಂಡಿದ್ದರು

ಹವ್ಯಕ ಪ್ರತಿಷ್ಠಾನದ ‘ಸಂಭ್ರಮ’ದ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದ ಹವ್ಯಕ ಪ್ರತಿಷ್ಠಾನವು ಭಾನುವಾರ ಆಯೋಜಿಸಿದ್ದ ‘ಸಂಭ್ರಮ 2025’ ವಾರ್ಷಿಕೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.

ಕಾರ್ಯಕ್ರಮದಲ್ಲಿ ಕರಾವಳಿ ಮತ್ತು ಮಲೆನಾಡಿನ ಸಂಸ್ಕೃತಿ ಬಿಂಬಿಸುವ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು.

ಸಮಾಜಮುಖಿ ಸಂಸ್ಕೃತಿ ಬಿಂಬಿಸುವ ಯಕ್ಷಗಾನ, ತಬಲಾ ಸೋಲೊ, ಸಿತಾರ್ ಹಾಗೂ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಮಕ್ಕಳು ಪ್ರದರ್ಶಿಸಿದರು. ‘ಜೀವಜಲ ಕಾವೇರಿ’ ರೂಪಕ ಪ್ರೇಕ್ಷಕರ ಮನ ಸೆಳೆಯಿತು.

ಕೊಳಗಿ ಕೇಶವ ಹೆಗಡೆಯವರ ಮಧುರ ಕಂಠದ ಭಾಗವತಿಕೆಯಲ್ಲಿ ದಕ್ಷ ಯಜ್ಞ ತಾಳಮದ್ದಳೆಯು ಯಶಸ್ವಿಯಾಗಿ ನೆರವೇರಿತು. ಮೃದಂಗ– ಯಲ್ಲಾಪುರದ ಶಂಕರ ಭಾಗವತ, ಅರ್ಥಧಾರಿಗಳಾಗಿ ಮೈಸೂರಿನ ಗ.ನಾ.ಭಟ್ಟ, ರಾಮಕುಂಜದ ಗಣರಾಜ ಕುಂಬ್ಳೆ, ಮೈಸೂರಿನ ಕಬ್ಬಿನಾಲೆ ವಸಂತ ಭಾರದ್ವಾಜ, ಬೆಂಗಳೂರಿನ ಶೀಗೇಹಳ್ಳಿ ಆನಂದ ಹೆಗಡೆ ಅವರು ಪಾಲ್ಗೊಂಡಿದ್ದರು.

ಮುಖ್ಯ ಅತಿಥಿಯಾಗಿದ್ದ ಪತ್ರಕರ್ತ ರವಿ ಹೆಗಡೆ ಮಾತನಾಡಿ, ‘ಹವ್ಯಕ ಸಂಸ್ಕೃತಿ ಉಳಿಸಿ, ಮುಂದಿನ ಪೀಳಿಗೆಗೆ ತಲುಪಿಸಲು ತಂತ್ರಜ್ಞಾನ , ಕೃತಕ ಬುದ್ಧಿಮತ್ತೆ ಹಾಗೂ ಸಾಮಾಜಿಕ ಜಾಲತಾಣವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು’ ಎಂದರು.

ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಎಂ.ಕೆ.ಸತೀಶ್, ರಾಜರಾಜೇಶ್ವರಿ ನಗರದ ಮಾಜಿ ನಗರಸಭಾ ಸದಸ್ಯ ಮಂಜು, ಪ್ರತಿಷ್ಠಾನದ ಕೋಶಾಧ್ಯಕ್ಷ ರಾಮಕೃಷ್ಣ ಹೆಗಡೆ, ಗೋಪಾಲಕೃಷ್ಣ ಹೆಗಡೆ, ಗಣಪತಿ ಹೆಗಡೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ‘ಹವಿಗನ್ನಡ’ ಕುರಿತ ಆಶುಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಚಿತ್ರಕಲೆ ಹಾಗೂ ಚುಕ್ಕಿ ರಂಗೋಲಿ ಸ್ಪರ್ಧೆಯಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಿಸಲಾಯಿತು.

ಪ್ರಶಸ್ತಿ ಪ್ರದಾನ

ಪ್ರಜಾವಾಣಿ ಚಿತ್ರ

ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಪಂಡಿತ್ ಶೇಷಾದ್ರಿ ಗವಾಯಿ ಸಂಗೀತೋತ್ಸವ’ದಲ್ಲಿ ಹಿಂದೂಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ ಅವರಿಗೆ ‘ಪಂಚಾಕ್ಷರ ಕೃಪಾಭೂಷಣ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ತಬಲಾ ವಾದಕ ಸತೀಶ್ ಹಂಪಿಹೊಳಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ವೇದಿಕೆ ಅಧ್ಯಕ್ಷ ನಾಗೇಂದ್ರ ಟಿ. ರಾಣಾಪೂರ್, ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದೇವರು ಹಾಗೂ ಕಲಾವಿದ ನವಲಿಂಗ ಪಾಟೀಲ್ ಉಪಸ್ಥಿತರಿದ್ದರು

ಸುಗಮ ಸಂಗೀತ ಪರಿಷತ್ತಿಗೆ ಮುದ್ದುಕೃಷ್ಣ ಪುನರಾಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷರಾಗಿ ಗಾಯಕ ವೈ.ಕೆ. ಮುದ್ದುಕೃಷ್ಣ ಅವರು ಪುನರಾಯ್ಕೆಯಾಗಿದ್ದಾರೆ.

ಭಾನುವಾರ ಇಲ್ಲಿ ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಪರಿಷತ್ತಿನ ನೂತನ ಕಾರ್ಯಕಾರಿ ಸಮಿತಿ ರಚನೆಯಾಯಿತು. ಅಧ್ಯಕ್ಷರಾಗಿ ಮುದ್ದುಕೃಷ್ಣ, ಕಾರ್ಯಾಧ್ಯಕ್ಷರಾಗಿ ಕಿಕ್ಕೇರಿ ಕೃಷ್ಣಮೂರ್ತಿ ಅವಿರೋಧವಾಗಿ ಆಯ್ಕೆಯಾದರು.

ಪ್ರಧಾನ ಕಾರ್ಯದರ್ಶಿಯಾಗಿ ನಗರ ಶ್ರೀನಿವಾಸ ಉಡುಪ, ಜಂಟಿ ಕಾರ್ಯದರ್ಶಿಯಾಗಿ ನಾಗಚಂದ್ರಿಕಾ ಭಟ್, ಖಜಾಂಚಿಯಾಗಿ ಪ್ರಶಾಂತ್ ಉಡುಪ, ಪ್ರಧಾನ ಸಂಚಾಲಕರಾಗಿ ಜೋಸೆಫ್ ಹಿರೋನಿಮಸ್ ಮತ್ತು ಸುನೀತಾ ಮುರಳಿ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಪ್ರವೀಣ್ ಬಿ.ವಿ., ಡೇವಿಡ್ ಮಂಡ್ಯ, ನಾಗರಾಜ್ ವಿ. ಬೈರಿ, ಅಮಿತ್ ಶೇಖರ್, ನಾಗೇಂದ್ರ ಕುಮಾರ್, ಜಾವಗಲ್ ಪ್ರಸನ್ನಕುಮಾರ್ ಹಾಗೂ ನಾಮ ನಿರ್ದೇಶಿತ ಸದಸ್ಯರಾಗಿ ಅಪ್ಪಗೆರೆ ತಿಮ್ಮರಾಜು ಮತ್ತು ಸಿ.ಎಂ. ನರಸಿಂಹ ಮೂರ್ತಿ ಅವರು ಆಯ್ಕೆಯಾದರು.

ಸಲಹಾ ಸಮಿತಿಯ ಅಧ್ಯಕ್ಷರಾಗಿ ಬಿ.ಆರ್. ಲಕ್ಷ್ಮಣರಾವ್ ಮತ್ತು ಸದಸ್ಯರಾಗಿ ನಾ. ದಾಮೋದರ ಶೆಟ್ಟಿ, ಪುತ್ತೂರು ನರಸಿಂಹ ನಾಯಕ್, ಇಂದು ವಿಶ್ವನಾಥ್, ರೋಹಿಣಿ ಮೋಹನ್, ಮಾಲತಿ ಶರ್ಮ, ಶ್ರೀನಿವಾಸ ಜಿ. ಕಪ್ಪಣ್ಣ, ಬಿ.ವಿ. ಶ್ರೀನಿವಾಸ್ ಅವರನ್ನು ಮುಂದುವರಿಸಲು ನಿರ್ಧರಿಸಲಾಯಿತು.

ನೂತನ ಸಮಿತಿಯು ಆಗಸ್ಟ್ 4ರಿಂದ ಮೂರು ವರ್ಷಗಳ ಅವಧಿಗೆ ಕಾರ್ಯನಿರ್ವಹಿಸಲಿದೆ ಎಂದು ಪರಿಷತ್ತಿನ ಪ್ರಕಟಣೆ ತಿಳಿಸಿದೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ರಸ್ತೆ ಗುಂಡಿ ಮುಚ್ಚಿ’



ನಾಗರಬಾವಿಯ ಎರಡನೇ ಹಂತದ ಜಯಲಕ್ಷ್ಮಮ್ಮ ಬಡಾವಣೆಯ ಆಲದಮರದಿಂದ ಅನ್ನಪೂರ್ಣೇಶ್ವರಿನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಗುಂಡಿಗಳು ಬಿದ್ದಿರುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತವೆ. ಬಿಬಿಎಂಪಿ ಕೂಡಲೇ ಈ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚುವ ಮೂಲಕ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ದೀಪಕ್ ಕೆ., ಜಯಲಕ್ಷ್ಮಮ್ಮ ಬಡಾವಣೆ

‘ಮರ ತೆರವುಗೊಳಿಸಿ’

ಶ್ರೀನಿವಾಸನಗರ ಬ್ಯಾಂಕ್ ಕಾಲೊನಿಗೆ ಸಂಪರ್ಕ ಕಲ್ಪಿಸುವ 11ನೇ ಮುಖ್ಯರಸ್ತೆಯ, ಆರನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ಮರವನ್ನು ತೆರವುಗೊಳಿಸಬೇಕು. ಈ ಮರ ಬೀಳುವ ಹಂತಕ್ಕೆ ತಲುಪಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ಜನ ಓಡಾಡುತ್ತಾರೆ. ಮರ ಬಿದ್ದು ಏನಾದರೂ ಅನಾಹುತ ಸಂಭವಿಸುವ ಮುನ್ನ ಇದನ್ನು ತೆರವುಗೊಳಿಸಬೇಕು. ಮರ ತೆರವುಗೊಳಿಸುವಂತೆ ಬಿಬಿಎಂಪಿಗೆ ಹತ್ತು ವರ್ಷಗಳಿಂದ ಮನವಿ ಸಲ್ಲಿಸುತ್ತಾ ಬಂದಿದ್ದೇವೆ. ಇದುವರೆಗೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ.

ಶ್ರೀನಿವಾಸನಗರ ಬ್ಯಾಂಕ್ ಕಾಲೊನಿ ನಿವಾಸಿಗಳು

‘ಕಸ ವಿಲೇವಾರಿ ಮಾಡಿ’

ನಾಗಸಂದ್ರ, ದೊಡ್ಡಬಿದರಕಲ್ಲು ಗುರು ಶ್ರೀ ಶಾಲೆಯ ಹತ್ತಿರ ಇರುವ ಸುವರ್ಣ ನಗರ ಮುಖ್ಯರಸ್ತೆಯಲ್ಲಿ ಕಸ ಹಾಕಲಾಗಿದೆ. ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಈ ಭಾಗದಲ್ಲಿರುವ ಸ್ಥಳೀಯ ನಿವಾಸಿಗಳು, ಶಾಲೆಗೆ ಬರುವ ಮಕ್ಕಳು ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಮಳೆಯಾದರೆ ಗಬ್ಬು ವಾಸನೆ ಬರುತ್ತದೆ. ಈ ಭಾಗದ ಕೆಲವರು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಇಲ್ಲಿ ಕಸ ಹಾಕದಂತೆ ಎಚ್ಚರಿಕೆ ನೀಡಬೇಕು. ಇಲ್ಲಿರುವ ತ್ಯಾಜ್ಯವನ್ನು ಕೂಡಲೇ ವಿಲೇವಾರಿ ಮಾಡಬೇಕು.

ರಾಮಚಂದ್ರ ಜಿ.ಜಿ., ನಾಗಸಂದ್ರ

‘ಪಾದಚಾರಿ ಮಾರ್ಗ: ಕೊಳವೆಗಳನ್ನು ತೆರವುಗೊಳಿಸಿ’

ಮಹಾಲಕ್ಷ್ಮಿ ಬಡಾವಣೆಯ ಆಂಜನೇಯ ಸ್ವಾಮಿ ಮತ್ತು ಗೋವಿಂದ ದೇವಸ್ಥಾನಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ನೂರಾರು ಕೊಳವೆಗಳನ್ನು ಇಡಲಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗವು ಚಿಕ್ಕದಾಗಿದ್ದು, ಇದರಲ್ಲಿಯೇ ನೂರಾರು ಕೊಳವೆಗಳನ್ನು ಜೋಡಿಸಿ ಇಡಲಾಗಿದೆ. ಇದರಿಂದ ಮಹಿಳೆಯರು, ಮಕ್ಕಳು ಸೇರಿದಂತೆ ವೃದ್ಧರ ಓಡಾಟಕ್ಕೆ ತೊಂದರೆಯಾಗಿದೆ. ಇಲ್ಲಿ ಇಟ್ಟಿರುವ ಕೊಳವೆಗಳನ್ನು ಕೂಡಲೇ ಬೇರೆ ಕಡೆಗೆ ಸ್ಥಳಾಂತರಿಸಬೇಕು.

ಗೌರಾಚಾರಿ ಜೆ.ಎಸ್., ಮಹಾಲಕ್ಷ್ಮಿ ಬಡಾವಣೆ

ವರದಿ ಪರಿಣಾಮ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಕಮ್ಮನಹಳ್ಳಿ ವಾರ್ಡ್ ಸಂಖ್ಯೆ 28ರ ರಾಮಸ್ವಾಮಿ ಪಾಳ್ಯದ ಜೋಡಿ ಉದ್ಯಾನ ಹಾಗೂ ಡಾ. ರಾಜ್‌ಕುಮಾರ್ ಆಟದ ಮೈದಾನ ಪಕ್ಕದಲ್ಲಿರುವ ರಾಜಕಾಲುವೆಯಲ್ಲಿನ ಹೂಳನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದ್ದಾರೆ.

‘ಪ್ರಜಾವಾಣಿ’ಯ ಕುಂದು ಕೊರತೆ ವಿಭಾಗದಲ್ಲಿ ಜುಲೈ 14ರಂದು ‘ರಾಜಕಾಲುವೆ: ಹೂಳು ತೆರವುಗೊಳಿಸಿ’ ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ಹೂಳು ತೆರವುಗೊಳಿಸಿದ್ದಾರೆ.

‘ಮೊಸರಲ್ಲಿ ಕಲ್ಲು ಹುಡುಕುವ ಬಿಜೆಪಿ’

ಡಿಸಿಎಂ ಅವರನ್ನು ಅವಮಾನಿಸುವ ಪ್ರಶ್ನೆಯೇ ಇಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ‘ಸಾಧನಾ ಸಮಾವೇಶ ಸಮಾರಂಭದಲ್ಲಿ ನಾನು ಮಾತನಾಡುವಾಗ ಡಿ.ಕೆ. ಶಿವಕುಮಾರ್ ವೇದಿಕೆಯಲ್ಲಿ ಇರಲಿಲ್ಲ. ಹೀಗಾಗಿ, ಅವರ ಹೆಸರು ತೆಗೆದುಕೊಳ್ಳಲಿಲ್ಲ. ಬಿಜೆಪಿಯವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ಬೀಚನಹಳ್ಳಿಯಲ್ಲಿ ಕಬಿನಿ ಜಲಾಶಯಕ್ಕೆ ಭಾನುವಾರ ಬಾಗಿನ ಅರ್ಪಿಸುವುದಕ್ಕೆ ಮುನ್ನ ಸುದ್ದಿಗಾರರೊಂದಿಗೆ ಅವರು, ‘ಡಿ.ಕೆ.ಶಿವಕುಮಾರ್ ಅವರನ್ನು ಅವಮಾನಿಸುವ ಪ್ರಶ್ನೆಯೇ ಇಲ್ಲ’ ಎಂದು ಹೇಳಿದರು.

‘ನನ್ನ ಹಾಗೂ ಶಿವಕುಮಾರ್ ನಡುವೆ ಒಡಕು ಮೂಡಿಸಲು ಬಿಜೆಪಿಯವರು ಇಂಥ ಹೇಳಿಕೆ ನೀಡುತ್ತಾರೆ. ಅವರು ರಾಜಕೀಯ ಲಾಭ ಪಡೆಯುವ ಭ್ರಮೆಯಲ್ಲೇ ಇರುತ್ತಾರೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ವಕೀಲರನ್ನು ಭೇಟಿಯಾಗಲು ಸಮಯ ತೆಗೆದುಕೊಂಡಿದ್ದ ತುರ್ತು ಕಾರ್ಯ ನಿಮಿತ್ತ ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರಿಗೆ ತಿಳಿಸಿ ದೆಹಲಿಗೆ ಹೋಗಿದ್ದೆ. ಯಾವುದೇ ರಾಜಕೀಯದ ಕಾರಣದಿಂದ ಹೋಗಿರಲಿಲ್ಲ’ ಎಂದು ಹೇಳಿದರು. ಸಿಎಂ–ಡಿಸಿಎಂ ಜೊತೆಯಲ್ಲೇ ನಿಂತು ಮಾಧ್ಯಮದವರೊಂದಿಗೆ ಮಾತನಾಡಿದರು.

ಕಾಪಿ ಮಾಡುತ್ತಾರೆ: ‘ಸರ್ಕಾರದ ಸಾಧನೆಗಳ ಬಗ್ಗೆ ಸುಳ್ಳು ಹೇಳುವ ಬಿಜೆಪಿಯವರು ಎಂದಿಗೂ ಬಹಿರಂಗ ಚರ್ಚೆಗೆ ಬರುವುದಿಲ್ಲ. ಅಲ್ಲದೆ, ನಮ್ಮ ಗ್ಯಾರಂಟಿ ಯೋಜನೆಗಳನ್ನೇ ಅವರು ಇತರ ರಾಜ್ಯದಲ್ಲಿ ಅನುಕರಿಸುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಆರೋಪಿಸಿದರು.

‘ರಾಜ್ಯ ಸರ್ಕಾರ ಹೊಣೆಯಲ್ಲ’

‘ಜಿಎಸ್‌ಟಿ ವಿಧಿಸುವುದು ಕೇಂದ್ರ ಸರ್ಕಾರ. ಕೌನ್ಸಿಲ್ ಕೂಡ ಆ ಸರ್ಕಾರದ ಅಧೀನದಲ್ಲಿಯೇ ಬರುತ್ತದೆ. ನೋಟಿಸ್‌ಗಳಿಗೆ ರಾಜ್ಯ ಸರ್ಕಾರ ಜವಾಬ್ದಾರಿಯಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಎಸ್‌ಟಿ ವಿಚಾರದಲ್ಲಿ ಸಣ್ಣ ವ್ಯಾಪಾರಿಗಳಿಗೆ ನೋಟಿಸ್ ನೀಡುತ್ತಿರುವ ಕುರಿತ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದರು.

ಆದರೂ, ಈ ಕುರಿತು ಕೇಂದ್ರದ ಜೊತೆಗೆ ಚರ್ಚಿಸಲಾಗುವುದು. ನಮ್ಮ ವ್ಯಾಪ್ತಿಯಲ್ಲೇ ಆಗಿದ್ದರೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಪ್ರತಿಕ್ರಿಯಿಸಿದರು.

ಮೈಸೂರು ಜಿಲ್ಲೆ ಎಚ್‌ಡಿ.ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಬಾಗಿನ ಅರ್ಪಿಸಿದರು

ಚಿತ್ರ: ರವಿಕುಮಾರ್ ಆರಾಧ್ಯ

> ಮಹದಾಯಿ, ಮೇಕೆದಾಟು ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಬದ್ಧ. ಗೋವಾ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದೆ. ಅನುಮತಿ ಕೊಡಿಸಲಿ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಎಲ್ಲ ಅಣೆಕಟ್ಟೆಗಳ ಸುರಕ್ಷತೆ ಬಗ್ಗೆ ವರದಿ ನೀಡಲು ತಜ್ಞರ ತಂಡ ನಿಯೋಜಿಸಲಾಗಿದೆ. ವರದಿ ಆಧರಿಸಿ ಆದ್ಯತೆಯನುಸಾರ ಸಂರಕ್ಷಣಾ ಕ್ರಮ ವಹಿಸಲಾಗುವುದು
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಡಿಕೆಶಿ ಮುಗಿಸಲು ಸಿ.ಎಂ ಸಮಾವೇಶ: ಆರ್.ಅಶೋಕ

ಬೆಂಗಳೂರು: ‘ಕಾಂಗ್ರೆಸ್ ನಾಯಕರು ಬೀದಿಯಲ್ಲಿ ಬಡಿದಾಡಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದ ಸಮಾವೇಶ ಸರ್ಕಾರಿ ಕಾರ್ಯಕ್ರಮವಲ್ಲ. ಬದಲಿಗೆ ಅದು ಡಿ.ಕೆ.ಶಿವಕುಮಾರ್ ಅವರನ್ನು ಮುಗಿಸಲು ಮಾಡಿದ ಕಾರ್ಯಕ್ರಮ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನಲ್ಲಿನ ಒಡಕು ಈ ಕಾರ್ಯಕ್ರಮದಲ್ಲಿ ನಿಚ್ಚಳವಾಗಿ ಕಾಣಿಸಿದೆ. ಡಿ.ಕೆ.ಶಿವಕುಮಾರ್ ಪರವಾಗಿ, ಅಲ್ಲಿದ್ದ ಒಬ್ಬರೂ ಮಾತನಾಡಲಿಲ್ಲ. ಶಿವಕುಮಾರ್‌ಗೆ ಪಾಠ ಕಲಿಸಲು ಮತ್ತು ಅಪಮಾನ ಮಾಡಲೆಂದೇ ಈ ಸಮಾವೇಶ ನಡೆಸಲಾಗಿದೆ’ ಎಂದರು. ‘ಸುರ್ಜೇವಾಲಾ ರಾಜ್ಯಕ್ಕೆ ಬಂದು ಶಾಸಕರ ಅಹವಾಲುಗಳನ್ನು ಆಲಿಸಿದ್ದಾರೆ. ಇವರ ಜಗಳ ಜನರ ಮುಂದೆ ಬಯಲಾಗಿದೆ. ಈ ಸರ್ಕಾರವನ್ನು ಬೀಳಿಸುವ ಅಗತ್ಯ ಬಿಜೆಪಿಗೆ ಇಲ್ಲ. ಕಾಂಗ್ರೆಸ್‌ನ ಆಂತರಿಕ ಕಲಹದಿಂದಲೇ ಈ ಸರ್ಕಾರ ಬಿದ್ದುಹೋಗಲಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರು ಮೈಸೂರಿನ ಸಮಾವೇಶದಲ್ಲಿ ಕೀಳಾಗಿ ಮಾತಾಡಿದ್ದಾರೆ. ಪ್ರಧಾನಿ ಬೊಗಳುತ್ತಾರೆಂದು ಹೇಳುವುದು ಕಾಂಗ್ರೆಸ್ ನಾಯಕರ ಮನಸ್ಥಿತಿಯನ್ನು ತೋರಿಸುತ್ತದೆ. ಇನ್ನು ಅಧಿಕಾರಕ್ಕೆ ಬರುವುದಿಲ್ಲ ಎಂಬ ಕಾರಣಕ್ಕೆ ಇವರು ಹಾಗೆ ಮಾತಾಡುತ್ತಿದ್ದಾರೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು. ‘ಬೆಂಗಳೂರನ್ನು ಅಭಿವೃದ್ಧಿ ಮಾಡದೆ, ಹೋಳು ಮಾಡಲಾಗಿದೆ. ಟ್ರಾಫಿಕ್, ಪ್ರವಾಹ, ಕಸದ ಸಮಸ್ಯೆ ಯಾವುದು ಈ ಕ್ರಮದಿಂದ ನಿವಾರಣೆಯಾಗುವುದಿಲ್ಲ. ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ಒಡೆದರೆ ಪ್ರಗತಿಯಾಗಲ್ಲ. ಬದಲಿಗೆ ಆದಾಯ ಹಂಚಿಕೆಯಲ್ಲಿ ತಾರತಮ್ಯ ಉಂಟಾಗಿ ಇನ್ನಷ್ಟು ಕಲಹ ಉಂಟಾಗಲಿದೆ’ ಎಂದರು.

ಗಂಗಾವತಿ ತಾಲ್ಲೂಕಿನ ಮರಳಿ ಗ್ರಾಮದ ಸಮೀಪ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಜನಾರ್ದನ ರೆಡ್ಡಿ, ಬಿ.ಶ್ರೀರಾಮುಲು ಅಕ್ಕಪಕ್ಕದಲ್ಲಿ ಕುಳಿತಿರುವುದು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದ್ದಾರೆ

ಮತ್ತೆ ಒಂದಾದ ಶ್ರೀರಾಮುಲು, ರೆಡ್ಡಿ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಸಂಡೂರು ಉಪಚುನಾವಣೆಯ ಫಲಿತಾಂಶದ ಬಳಿಕ ಪರಸ್ಪರ ಟೀಕೆ, ಪ್ರತಿಟೀಕೆಗಳಲ್ಲಿ ತೊಡಗಿ ಮುನಿಸಿಕೊಂಡಿದ್ದ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಮತ್ತು ಮಾಜಿ ಸಚಿವ ಬಿ. ಶ್ರೀರಾಮುಲು ಅವರು ತಾಲ್ಲೂಕಿನ ಮರಳಿ ಗ್ರಾಮದ ಸಮೀಪದಲ್ಲಿ ಭಾನುವಾರ ನಡೆದ ಪಕ್ಷದ ಅವಲೋಕನಾ ಸಭೆಯಲ್ಲಿ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು. ‘ನಾವಿಬ್ಬರೂ ಒಂದೇ’ ಎನ್ನುವ ಸಂದೇಶ ಸಾರಿದರು.

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ 11 ವರ್ಷಗಳ ಸಾಧನೆ ತಿಳಿಸಲು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಸಭೆ ನಡೆಯಿತು. ವಿಜಯೇಂದ್ರ ಅವರಿಬ್ಬರ ಕೈಗಳನ್ನೂ ಎತ್ತಿ ಹಿಡಿದು ಮುನಿಸು ಮರೆಯುವಂತೆ ಮಾಡಿದರು. ಕಾರ್ಯಕ್ರಮದಲ್ಲಿ ರೆಡ್ಡಿ ಮತ್ತು ಶ್ರೀರಾಮುಲು ಅಕ್ಕಪಕ್ಕದಲ್ಲಿಯೇ ಕುಳಿತರು.

ಜನಾರ್ದನ ರೆಡ್ಡಿ ಮಾತನಾಡಿ ‘ನಮ್ಮ ನಡುವೆ ಮಧ್ಯಸ್ಥಿಕೆಗೆ ಯಾರಾದರೂ ಮುಂದಾದರೆ ಅವರಂಥ ಮೂರ್ಖರು ಯಾರೂ ಇಲ್ಲ. ನಮಗೆ ಸಂಧಾನದ ಅಗತ್ಯವಿಲ್ಲ. ನಮ್ಮದು ಸ್ನೇಹದ ಜಗಳ. ಇದರ ಲಾಭ ಪಡೆಯಲು ಪ್ರಯತ್ನಿಸಿದವರಿಗೆ ಏನೂ ಸಿಗುವುದಿಲ್ಲ’ ಎಂದರು.

ಶ್ರೀರಾಮುಲು, ‘ಪಕ್ಷದ ವಿಚಾರ ಬಂದಾಗ ನಾವು ಮಾದರಿಯಾಗಬೇಕು. ಕಾಂಗ್ರೆಸ್ಸಿಗರ ರೀತಿಯಲ್ಲಿ ಹರಕೆಯ ಕುರಿ ಆಗಬಾರದು. ಪಕ್ಷ ಸಂಘಟನೆಗಾಗಿ ಎಲ್ಲರೂ ಒಂದಾಗಿ ಕೆಲಸ ಮಾಡುತ್ತೇವೆ. ಜನಾರ್ದನ ರೆಡ್ಡಿ ಜೊತೆ ಯಾವುದೇ ಮುನಿಸು ಇಲ್ಲ’ ಎಂದರು.

ಚಿಟಿಕೆ ಸುದ್ದಿ

ಸಿಇಟಿ/ನೀಟ್ ಕೌನ್ಸೆಲಿಂಗ್: ಇಂದು ನೇರ ಫೋನ್-ಇನ್

ಬೆಂಗಳೂರು: ಯುಜಿಸಿಇಟಿ/ ಯುಜಿನೀಟ್-25 ಕೌನ್ಸೆಲಿಂಗ್ ಕುರಿತು ದೂರದರ್ಶನದ ಚಂದನ ವಾಹಿನಿಯಲ್ಲಿ ಸೋಮವಾರ (ಜು.21) ಸಂಜೆ 7.30ರಿಂದ 8.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಫೋನ್ ಸಂಖ್ಯೆ 080-23532599/ 080-23532699 ಗೆ ಕರೆ ಮಾಡಿ ಅನುಮಾನಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಸೂಚಿಸಲಾಗಿದೆ.

ಇಂದಿನಿಂದ ಸಮ್ಮೇಳನ

ದಾವಣಗೆರೆ: ವೀರಶೈವ ಪೀಠಾಚಾರ್ಯರು, ಶಿವಾಚಾರ್ಯರ ಎರಡು ದಿನದ ಶೃಂಗಸಭೆ ಜುಲೈ 21ರಿಂದ ಪಂಚಪೀಠಾಧ್ಯಕ್ಷರ ಸಾನ್ನಿಧ್ಯದಲ್ಲಿ ನಗರದ ಅಭಿನವ ರೇಣುಕ ಮಂದಿರದಲ್ಲಿ ಆರಂಭವಾಗಲಿದೆ. ವೀರಶೈವ ಪಂಚಪೀಠಗಳ ಒಗ್ಗೂಡಿಸುವ ಆಶಯ ಸಮ್ಮೇಳನದ್ದಾಗಿದೆ.

ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ, ಉಜ್ಜಿನಿಯ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲ ಮಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕಾಶಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಸ್ವಾಮೀಜಿ ಹಾಗೂ ಕೇದಾರ ಪೀಠದ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ 16 ವರ್ಷಗಳ ಬಳಿಕ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ನೀರಿನ ಸೆಳೆತಕ್ಕೆ ಸಿಲುಕಿ ವ್ಯಕ್ತಿ ಸಾವು

ಜಲಪಾತ ಸಮೀಪದ ಕಲ್ಲುಬಂಡೆ ಮೇಲೆ ರಮೇಶ್

ಹೊಸನಗರ (ಶಿವಮೊಗ್ಗ): ತಾಲ್ಲೂಕಿನ ಯಡೂರು ತಲಾಸಿ ಅಬ್ಬಿ ಜಲಪಾತದ ಗುಂಡಿಗೆ ಇಳಿದಿದ್ದ ವ್ಯಕ್ತಿಯೊಬ್ಬರು ನೀರಿನ ಸೆಳೆತಕ್ಕೆ ಸಿಲುಕಿ ಭಾನುವಾರ ಮೃತಪಟ್ಟಿದ್ದಾರೆ.

ಬೆಂಗಳೂರಿನ ನಾಗರಬಾವಿಯ ರಮೇಶ್ (35) ಸಾವಿಗೀಡಾದವರು. ಇವರು ಖಾಸಗಿ ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿದ್ದರು.

ನಾಲ್ವರು ಸ್ನೇಹಿತರೊಂದಿಗೆ ಜಲಪಾತ ವೀಕ್ಷಣೆಗೆ ರಮೇಶ್ ಬಂದಿದ್ದರು. ಫೋಟೊ ತೆಗೆಯಲು ಸ್ನೇಹಿತರಿಗೆ ಹೇಳಿ, ಜಲಪಾತದ ಗುಂಡಿಗೆ ಇಳಿದ ವೇಳೆ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿದ್ದಾರೆ. ಮೃತದೇಹ ಜಲಪಾತದ ಕೆಳಭಾಗದಲ್ಲಿ ಪತ್ತೆಯಾಗಿದೆ.

‘ಒಳ ಮೀಸಲಾತಿಗೆ ಒತ್ತಾಯಿಸಿ 16ರಿಂದ ಹೋರಾಟ’

ಗಂಗಾವತಿ (ಕೊಪ್ಪಳ) : ‘ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಜಾರಿಗೆ ಆಗಸ್ಟ್ 1ರ ತನಕ ಸರ್ಕಾರಕ್ಕೆ ಗಡುವು ನೀಡಲಾಗಿದೆ. ಬೇಡಿಕೆ ಈಡೇರದಿದ್ದರೆ ಆ. 16ರಿಂದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿ, ತಹಶೀಲ್ದಾರ್ ಕಚೇರಿಗಳಿಗೆ ಬೀಗ ಹಾಕಿ ಮಾದಿಗ ಸಮುದಾಯ ಹೋರಾಟ ನಡೆಸಲಿದೆ’ ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ಹೇಳಿದರು.

ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ, ‘ಅಧಿಕಾರಕ್ಕೆ ಬಂದ ತಕ್ಷಣವೇ ಒಳಮೀಸಲಾತಿ ನೀಡುವ ಭರವಸೆ ನೀಡಿದ್ದ ರಾಜ್ಯದ ಕಾಂಗ್ರೆಸ್ ಸರ್ಕಾರ ಮಾತಿನಂತೆ ನಡೆದುಕೊಂಡಿಲ್ಲ. ತೆಲಂಗಾಣ, ಆಂಧ್ರ, ಬಿಹಾರ ಸೇರಿ ಹಲವು ರಾಜ್ಯಗಳು ಜಾರಿ ಮಾಡಿವೆ. ಸಿ.ಎಂ ಹೀಗೇ ನಿರ್ಲಕ್ಷ್ಯಿಸಿದರೆ ಆಡಳಿತ ನಡೆಸಲೂ ಬಿಡುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು.

ರಾಯಚೂರು, ಕೊಪ್ಪಳದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಕೊಪ್ಪಳ/ ರಾಯಚೂರು: ಕಲ್ಯಾಣ ಕರ್ನಾಟಕದ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯಲ್ಲಿ ಭಾನುವಾರ ಮಳೆಯಾಗಿದೆ.

ಕೊಪ್ಪಳದಲ್ಲಿ ಜಿಲ್ಲೆಯಲ್ಲಿ ಒಂದು ವಾರದಿಂದ ಮಳೆ ಚುರುಕಾಗಿದ್ದು, ಕೊಪ್ಪಳ ನಗರ ಹಾಗೂ ತಾಲ್ಲೂಕಿನ ಹಲವು ಗ್ರಾಮಗಳು ಹಾಗೂ ಗಂಗಾವತಿಯಲ್ಲಿ ಮಳೆ ಸುರಿದಿದೆ.

ಮಳೆ ಕೊರತೆಯಿಂದ ಬರಗಾಲದ ಆತಂಕ ಮನೆ ಮಾಡಿತ್ತು. ಉತ್ತಮ ಮಳೆ ರೈತರಲ್ಲಿ ಖುಷಿಯ ಭಾವ ಮೂಡಿಸಿದೆ. ಈಗಾಗಲೇ ಆಗಿರುವ ಬಿತ್ತನೆಗೂ ಅನುಕೂಲವಾಗಲಿದೆ.

ತಾಲ್ಲೂಕಿನ ಅಳವಂಡಿ ಸಮೀಪದ ಬಿಕನಹಳ್ಳಿ ಗ್ರಾಮದಿಂದ ಕೊಪ್ಪಳ–ಅಳವಂಡಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಕ್ರಾಸ್ ತನಕದ ರಸ್ತೆಯಲ್ಲಿ ಮಧ್ಯದಲ್ಲಿರುವ ಹಳ್ಳ ತುಂಬಿ ಹರಿದಿದ್ದು ಹಳ್ಳದಾಟಲು ಜನ ಪರದಾಡಿದರು.

ರಾಯಚೂರು ನಗರದಲ್ಲಿ ಅರ್ಧ ಗಂಟೆ ಧಾರಾಕಾರ ಮಳೆಯಾಗಿದೆ. ಮಾನ್ವಿ, ದೇವದುರ್ಗ, ಜಾಲಹಳ್ಳಿಯಲ್ಲೂ ಮಳೆಯಾಗಿದೆ. ಮಳೆಯ ಅಬ್ಬರಕ್ಕೆ ರಸ್ತೆ ಮೇಲೆ ನೀರು ಹರಿಯಿತು.

ಜಿಲ್ಲೆಯಲ್ಲಿ ಒಂದು ವಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಗ್ರಾಮೀಣ ಹವಾಮಾನ ಘಟಕ ಮುನ್ಸೂಚನೆ ನೀಡಿದೆ.

ಮಡಿಕೇರಿಯಲ್ಲಿ ಮಳೆ: ನಗರದಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗ್ಗೆಯವರೆಗೆ ಮಳೆ ಸುರಿಯಿತು.

ಭಾಗಮಂಡಲದಲ್ಲಿ 4 ಸೆಂ.ಮೀ., ಮಡಿಕೇರಿ 3.5, ಸುಂಟಿಕೊಪ್ಪದಲ್ಲಿ 3 ಸೆಂ.ಮೀ. ಮಳೆಯಾಗಿದೆ.

ಕೊಪ್ಪಳ ತಾಲ್ಲೂಕಿನ ಅಳವಂಡಿ ಮುಖ್ಯ ರಸ್ತೆಯ ಕ್ರಾಸ್ ಬಳಿ, ರಸ್ತೆಯ ಮಧ್ಯದಲ್ಲಿರುವ ಹಳ್ಳ ತುಂಬಿದ್ದರಿಂದ ಅದನ್ನು ದಾಟಲು ಭಾನುವಾರ ಜನ ಪರದಾಡಿದರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.04	13,147	16,278
ಹಾರಂಗಿ	2,859	2,857.27	5,689	4,333
ಕಬಿನಿ	2,284.00	2,283.53	11,606	5,000
ಹೇಮಾವತಿ	2,922	2,921	6,645	6,581
ಲಿಂಗನಮಕ್ಕಿ	1,819	1,803.40	16,570	5,559
ಸೂಪಾ (ಮೀ)	564	547.07	14,387	4,693
ಮಾಣಿ	595	587.78	2,512	-
ತುಂಗಭದ್ರಾ	1,633	1,626.03	38,079	39,009
ಮಲಪ್ರಭಾ	2,079.5	2,072.80	3,153	1,794
ಘಟಪ್ರಭಾ	2,175	2,168.95	5,996	11,754
ಭದ್ರಾ *	186	179.1	10,508	5,971
ಆಲಮಟ್ಟಿ (ಮೀ)	519.6	517.99	73,317	1,01,667
ನಾರಾಯಣಪುರ (ಮೀ)	492.25	491.36	65,000	59,02

* ನೆಲಮಟ್ಟದಿಂದ

ಸಿ.ಎಂ ವಿರುದ್ಧ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ

‘ಹಣ ನೀಡಿ ಜೈಕಾರ ಹಾಕಿಸಿಕೊಳ್ಳುವ ಸ್ಥಿತಿ’

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ಮೈಸೂರಿನಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ ಸಿ.ಎಂ ಭಾಷಣ ಮಾಡುವಾಗ ಬಹುತೇಕ ಕುರ್ಚಿಗಳು ಖಾಲಿ ಇದ್ದವು. ಕಾರ್ಯಕರ್ತರಿಗೆ ಹಣ ಕೊಟ್ಟು ಜೈಕಾರ ಹಾಕಿಸಿಕೊಳ್ಳಬೇಕಾದ ದುಃಸ್ಥಿತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂದಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ತಾಲ್ಲೂಕಿನ ಮರಳಿ ಸಮೀಪದಲ್ಲಿ ಭಾನುವಾರ ನಡೆದ ಪಕ್ಷದ ಅವಲೋಕನಾ ಸಭೆ ವೇಳೆ ಮಾತನಾಡಿ, ‘ರಾಜ್ಯ ರಾಜಕಾರಣದಲ್ಲಿ ನವೆಂಬರ್ ಅಥವಾ ಅದಕ್ಕೂ ಮೊದಲು ಕ್ರಾಂತಿಯಾಗುವುದು ಖಚಿತವಾಗಿದೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಕುರಿತು ಸುಳಿವು ನೀಡಿದ್ದಾರೆ’ ಎಂದರು.

ಅಭಿವೃದ್ಧಿ ಬಗ್ಗೆ ಚರ್ಚೆಗೆ ವಿರೋಧ ಪಕ್ಷಗಳಿಗೆ ಮುಖ್ಯಮಂತ್ರಿ ಸವಾಲು ಹಾಕಿದ್ದಾರೆ. ಮೊದಲು ಪಕ್ಷದ ಶಾಸಕರನ್ನು ಕರೆದು ಅವರ ಪ್ರಶ್ನೆಗಳಿಗೆ ಸಿ.ಎಂ ಉತ್ತರಿಸಲಿ ಎಂದರು.

‘ಯಾವುದೇ ಸಂದರ್ಭದಲ್ಲಿ ಸರ್ಕಾರ ಪತನ’

ಹುಬ್ಬಳ್ಳಿ: ‘ಸಿ.ಎಂ ಸ್ಥಾನ ಉಳಿಸಿಕೊಳ್ಳಲು ಸಿದ್ದರಾಮಯ್ಯ, ಸಿ.ಎಂ ಆಗಲು ಡಿ.ಕೆ. ಶಿವಕುಮಾರ್ ಹರಸಾಹಪಡುತ್ತಿದ್ದಾರೆ. ಇಬ್ಬರ ಮಧ್ಯೆ ಗುದ್ದಾಟ ಏರ್ಪಟ್ಟಿದೆ. ಯಾವುದೇ ವೇಳೆ ಸರ್ಕಾರ ಪತನವಾಗಬಹುದು’ ಎಂದು ಸಂಸದ ಜಗದೀಶ ಶೆಟ್ಟರ್ ಅಭಿಪ್ರಾಯಪಟ್ಟರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿ.ಎಂ ಆಗಲು ಡಿ.ಕೆ.ಶಿವಕುಮಾರ್ ಪ್ರಯತ್ನಿಸುತ್ತಿದ್ದಾರೆ. ಇದನ್ನು ತಿಳಿದ ಸಿದ್ದರಾಮಯ್ಯ ಸಾಧನಾ ಸಮಾವೇಶದ ಹೆಸರಲ್ಲಿ ಶಕ್ತಿ ಪ್ರದರ್ಶನ ಮಾಡಿದ್ದಾರೆ. ಹೀಗಾಗಿ, ಸಿದ್ದರಾಮಯ್ಯ ಭಾಷಣಕ್ಕೆ ಮೊದಲೇ ಶಿವಕುಮಾರ್ ವೇದಿಕೆಯಿಂದ ನಿರ್ಗಮಿಸಿದರು’ ಎಂದರು.

ಬುಕ್ ಬ್ರಹ್ಮ ಸಾಹಿತ್ಯ ಉತ್ಸವ ಆ.8ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಆಗಸ್ಟ್ 8 ರಿಂದ 10ರವರೆಗೆ ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ ಹಮ್ಮಿಕೊಂಡಿದೆ.

ಮೂರು ದಿನಗಳ ಈ ಉತ್ಸವದಲ್ಲಿ ಸಾಹಿತ್ಯ ಗೋಷ್ಠಿಗಳ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ. ದೇಶ–ವಿದೇಶದ 350ಕ್ಕೂ ಅಧಿಕ ಸಾಹಿತಿಗಳು, ಕಲಾವಿದರು ಮತ್ತು ವಿಷಯ ತಜ್ಞರು ಭಾಗವಹಿಸುತ್ತಾರೆ. ಎಂಟು ವಿವಿಧ ಸಮಾನಾಂತರ ವೇದಿಕೆಗಳಲ್ಲಿ 180ಕ್ಕೂ ಅಧಿಕ ಗೋಷ್ಠಿಗಳು, ಎಂಟು ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆರು ಭಾಷೆಗಳ ಕೃತಿಗಳನ್ನು ಒಳಗೊಂಡ ಪುಸ್ತಕ ಮಳಿಗೆಗಳು, ಮಕ್ಕಳ ಸಾಹಿತ್ಯ ಉತ್ಸವ, ಜನಪದ ಮಾರುಕಟ್ಟೆ, ಆಹಾರ ಮಳಿಗೆ ಉತ್ಸವದಲ್ಲಿ ಇರಲಿದೆ ಎಂದು ಸಂಸ್ಥೆ ತಿಳಿಸಿದೆ.

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿಯರಾದ ಬಾನು ಮುಷ್ತಾಕ್, ದೀಪಾ ಭಾಸ್ತಿ, ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ, ದಾಮೋದರ ಮೌಜೊ, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಟಿ.ಎಂ.ಕೃಷ್ಣ ಅವರ ಜತೆಗೆ ಸಾಹಿತ್ಯ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳುತ್ತಾರೆ. ಲಕ್ಷ್ಮೀ ಚಂದ್ರಶೇಖರ, ಬಿ.ಜಯಶ್ರೀ, ಪ್ರವೀಣ್ ಗೋಡ್ಖಿಂಡಿ, ಮಾನಸಿ ಪ್ರಸಾದ್, ಟಿ.ಎಂ. ಕೃಷ್ಣ, ಗಣಪತಿ ಭಟ್ ಹಾಸಣಗಿ, ಬಿ-ಸ್ಟುಡಿಯೊ ಮತ್ತು ಬೆಂಗಳೂರು ಕ್ಲಬ್ ಆಫ್ ಕಥಕ್ಕಳಿ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

‘ದಕ್ಷಿಣ ಭಾರತದ ನಾಲ್ಕು ಭಾಷೆಗಳು ಮತ್ತು ಇಂಗ್ಲಿಷ್ ಸೇರಿ ಒಟ್ಟು ಐದು ಭಾಷೆಗಳಲ್ಲಿ ವಿವಿಧ ಗೋಷ್ಠಿಗಳು ನಡೆಯಲಿವೆ. ದಕ್ಷಿಣ ಭಾರತದ್ದಲ್ಲದ ಇನ್ನೊಂದು ಭಾಷೆಯನ್ನು ಆಹ್ವಾನಿತ ಭಾಷೆಯಾಗಿ ಪರಿಗಣಿಸುವ ಸಂಪ್ರದಾಯ ಆರಂಭಿಸುತ್ತಿದ್ದೇವೆ. ಈ ಬಾರಿ ಮರಾಠಿ ಆಹ್ವಾನಿತ ಭಾಷೆಯಾಗಿದೆ. ಸಾಹಿತ್ಯಾಸಕ್ತರಿಗೆ ಪ್ರವೇಶ ಉಚಿತ ಇರಲಿದ್ದು, ಹೆಸರು ನೋಂದಾಯಿಸಿಕೊಳ್ಳಬೇಕು’ ಎಂದು ಉತ್ಸವದ ನಿರ್ದೇಶಕ ಸತೀಶ್ ಚಪ್ಪರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಸರು ನೋಂದಣಿಗೆ: www.bookbrahmalitfest.com

‘ಸಂಕೋಚಗಳನ್ನು ಬರೆಯಲಾಗದ ಪರಿಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯು ಬರವಣಿಗೆಯ ಮೂಲಕ ತನ್ನ ಸಂಕೋಚವನ್ನು ಅಭಿವ್ಯಕ್ತಿಪಡಿಸಬೇಕೆಂದರೂ, ಅದನ್ನು ಬರೆಯಲಾಗದ ಪರಿಸ್ಥಿತಿಯಿದೆ. ಪ್ರಸ್ತುತ ಸಂದರ್ಭದಲ್ಲಿ ಇದು ಲೇಖಕಿಯರಿಗೆ ದೊಡ್ಡ ಸವಾಲಾಗಿದೆ’ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಬೇಸರ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಂತಿ ಕೆ. ಅಪ್ಪಣ್ಣ ಅವರ ‘ಚಿತ್ರಕಾರನ ಬೆರಳು’ (ಕಥಾ ಸಂಕಲನ), ದೀಪಾ ಹಿರೇಗುತ್ತಿ ಅವರ ‘ಸರಹದ್ದು’ (ಕಥಾ ಸಂಕಲನ), ಕುಸುಮಾ ಆಯರಹಳ್ಳಿ ಅವರ ‘ಕಪಿಲೆ ಕಂಡ ಕತೆಗಳು’ ಪುಸ್ತಕಗಳನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

ಕಾರ್ಯಕ್ರಮದಲ್ಲಿ (ಎಡದಿಂದ) ದೀಪಾ ಹಿರೇಗುತ್ತಿ, ವಸುಧೇಂದ್ರ, ಎಂ.ಎಸ್.ಆಶಾದೇವಿ ಕುಸುಮಾ ಆಯರಹಳ್ಳಿ ಹಾಗೂ ಶಾಂತಿ ಕೆ.ಅಪ್ಪಣ್ಣ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

‘ಲೇಖಕಿಯರು ಬರವಣಿಗೆಯ ಮೂಲಕ ಅನುಭವವನ್ನು ಕಟ್ಟಿಕೊಡುವ ಸಂದರ್ಭದಲ್ಲಿ, ಎದುರಾಗುವ ಹೊಯ್ದಾಟ ಮತ್ತು ಸಂಕೋಚಗಳನ್ನು ಮೀರಿ ವಾಸ್ತವವನ್ನು ಅನಾವರಣ ಮಾಡಬೇಕು’ ಎಂದು ಅಭಿಪ್ರಾಯಪಟ್ಟರು.

‘ಜಗತ್ತು ಅನೇಕ ತಾತ್ವಿಕತೆಗಳನ್ನು ಕಂಡಿದೆ. ಅವುಗಳು ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಿ ನಿವೃತ್ತಿ ಹೊಂದಿವೆ. ಇಂದು ಅಸಹಿಷ್ಣುತೆ, ಹಿಂಸೆ, ವಿಘಟನೆಗಳೇ ಬದುಕಿನ ಮೂಲ ಸಂಗತಿಗಳಾಗಿವೆ. ಹೀಗಿರುವಾಗ ಸರ್ವರನ್ನು ಒಳಗೊಳ್ಳುವ ಸ್ತ್ರೀವಾದ ಜಗತ್ತಿನ ಮುಂದಿರುವ ಅನಿವಾರ್ಯ ಆಯ್ಕೆಯಾಗಿದೆ. ಸ್ತ್ರೀವಾದವು ಗಂಡಿನ ಕಾರಣರಹಿತ ಅಹಂಕಾರ, ಕ್ರೌರ್ಯವನ್ನು ವಿರೋಧಿಸುತ್ತದೆ ಹೊರತು, ಗಂಡಸರನ್ನಲ್ಲ. ಗಂಡು ಮತ್ತು ಹೆಣ್ಣು ಪರಸ್ಪರ ಕೈಹಿಡಿದು ನಡೆಯಬೇಕಾದ ದಾರಿಯೇ ಸ್ತ್ರೀವಾದ’ ಎಂದು ಹೇಳಿದರು.

ಲೋಕಾರ್ಪಣೆಗೊಂಡ ಮೂರೂ ಕೃತಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಾಹಿತಿ ವಸುಧೇಂದ್ರ, ‘ಈ ಕೃತಿಗಳು ಲೋಕದ ವಿಚಾರ, ಅಂಕು–ಡೊಂಕುಗಳು ಹಾಗೂ ಸಮಸ್ಯೆಗಳನ್ನು ತಿಳಿಸುವ ಹಾದಿಯಲ್ಲಿವೆ. ಹೀಗಾಗಿ, ಈ ಮೂರು ಕೃತಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಬಹು ಮುಖ್ಯವಾಗಿ ಕಾಣುತ್ತವೆ. ವಿಭಿನ್ನವಾದ ಕಥಾ ಹಂದರದೊಂದಿಗೆ ಸ್ತ್ರೀ ಕೇಂದ್ರಿತ ಬರವಣಿಗೆಯಲ್ಲೂ ಒಂದು ಹೆಜ್ಜೆ ಮುಂದೆ ಇಟ್ಟಂತ ಕಥೆಗಳು ಇಲ್ಲಿವೆ’ ಎಂದರು.

‘ಶಿಕ್ಷಕರ ಕೆಲಸ ಕಲಿಸಲು ಸೀಮಿತವಾಗಲಿ’

ಕಲಬುರಗಿ: ‘ಶಿಕ್ಷಣದ ಗುಣಮಟ್ಟ ಕುಸಿತ ತಡೆಯಲು ಮೊದಲಿಗೆ ಶಿಕ್ಷಕರನ್ನು ಬಿಸಿಯೂಟ ಹೊಣೆಯಿಂದ ಬಿಡಿಸಿ, ಅವರನ್ನು ಬೋಧನೆಗೆ ಸೀಮಿತಗೊಳಿಸಬೇಕಿದೆ’ ಎಂದು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿದರು.

ಕಸಾಪ ಜಿಲ್ಲಾ ಘಟಕ ಇಲ್ಲಿ ಏರ್ಪಡಿಸಿದ್ದ ‘ಮುಖಾಮುಖಿ’ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಕಲಿಸುವಾಗ ಶಿಕ್ಷಕರು ಮಕ್ಕಳಿಗೆ ಶಿಕ್ಷೆ ಕೊಡದಿದ್ದರೆ, ಮುಂದೆ ಆ ಮಕ್ಕಳು ಪೊಲೀಸ್ ಠಾಣೆಯಲ್ಲಿ ಶಿಕ್ಷೆ ಎದುರಿಸುವ ಸಂದರ್ಭ ಬಂದರೂ ಬರಬಹುದು. ಎಲ್ಲಿ ಶಿಕ್ಷೆ ಇಲ್ಲವೋ ಅಲ್ಲಿ ಶಿಕ್ಷಕರು–ಶಿಕ್ಷಣವೂ ಇಲ್ಲ’ ಎಂದರು.

ಪಂಚಮಸಾಲಿ ಪೀಠದ ಸ್ವಾಮೀಜಿ ಭೇಟಿ: ಶಾಸಕ ಸಿ.ಸಿ.ಪಾಟೀಲ ಪ್ರಶ್ನೆ

ಶಾಸಕ ವಿಜಯಾನಂದ ಕೊಡುಗೆ ಏನು?

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೂಡಲಸಂಗಮದಲ್ಲಿ ಲಿಂಗಾಯತ ಪಂಚಮಸಾಲಿ ಪೀಠ ಕಟ್ಟಲು ಹಣ ಕೊಟ್ಟವರು ಮುರುಗೇಶ ನಿರಾಣಿ. ಅನುದಾನ ನೀಡಿದ್ದು ಬಿಜೆಪಿ ಸರ್ಕಾರ. ಪೀಠಕ್ಕೆ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಕೊಡುಗೆ ಏನು?’ ಎಂದು ಶಾಸಕ ಸಿ.ಸಿ.ಪಾಟೀಲ ಪ್ರಶ್ನಿಸಿದರು.

ನಗರದ ಕೆರೂಡಿ ಆಸ್ಪತ್ರೆಯಲ್ಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆರೋಗ್ಯ ವಿಚಾರಿಸಿ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಪಾದಯಾತ್ರೆಗೆ, ಪತ್ನಿಗೆ ಟಿಕೆಟ್ ಬೇಕಾದಾಗ ಸ್ವಾಮೀಜಿ ಬೇಕಾಗಿದ್ದರು. ದೆಹಲಿಗೆ ಕರೆದುಕೊಂಡು ಹೋಗಿದ್ದರು. ಎಲ್ಲವನ್ನೂ ಸಮಾಜ ನೋಡುತ್ತಿದೆ’ ಎಂದರು.

‘ಮಠಕ್ಕೆ ಕೀಲಿ ಹಾಕಿ. ಕಾವಲಿಗೆ ಬೇರೆ ಸಮಾಜದವರನ್ನು ನೇಮಿಸಿ. ಬಂದವರ ಫೋಟೊ ತೆಗೆಯುವುದು ಮಾಡುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಸ್ವಾಮೀಜಿ ಹಣಕ್ಕಾಗಿ ಆಸೆ ಪಟ್ಟವರಲ್ಲ. ಬ್ಯಾಂಕ್ ಬ್ಯಾಲೆನ್ಸ್ ಇಲ್ಲ. ಯಾವುದೇ ಊರಿಗೆ ಹೋದರೆ ಭಕ್ತರ ಮನೆಯಲ್ಲಿರುತ್ತಾರೆ. ಅವರು ನಮ್ಮ ಸರ್ಕಾರದ ವಿರುದ್ಧವೇ ಹೋರಾಟ ಮಾಡಿದ್ದರು. ಹೋರಾಟಕ್ಕೆ ನಾವೂ ಬೆಂಬಲ ಕೊಟ್ಟಿದ್ದೆವು’ ಎಂದು ನೆನಪಿಸಿಕೊಂಡರು.

‘ನಮ್ಮ ಆಸ್ತಿ ಕಾಶಪ್ಪನವರ ತೆಗೆದುಕೊಂಡಿಲ್ಲ. ನಾನು ಅವರ ಆಸ್ತಿ ತೆಗೆದುಕೊಂಡಿಲ್ಲ. ಅವರ ಅಜೆಂಡಾ ಬೇರೆ ಇದೆ. ಭಿನ್ನಾಭಿಪ್ರಾಯವಿದ್ದರೆ ಚರ್ಚಿಸಿ, ಬಗೆಹರಿಸಿಕೊಳ್ಳೋಣ’ ಎಂದರು.

ಸ್ವಾಮೀಜಿ ಡಿಸ್‌ಚಾರ್ಜ್: ಚಿಕಿತ್ಸೆ ಬಳಿಕ ಸ್ವಾಮೀಜಿ ಭಾನುವಾರ ಆಸ್ಪತ್ರೆಯಿಂದ ತೆರಳಿದರು. ‘ನೇರವಾಗಿ ಪೀಠಕ್ಕೆ ಹೋಗುತ್ತಿದ್ದೇನೆ. ಇನ್ನೂ ಎರಡು ದಿನ ಅಲ್ಲಿಯೇ ಇರುತ್ತೇನೆ. ಭಕ್ತರು ಆತಂಕಕ್ಕೆ ಒಳಗಾಗಬಾರದು’ ಎಂದು ಹೇಳಿದರು.

ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಶಾಸಕ ಸಿ.ಸಿ.ಪಾಟೀಲ ಭಾನುವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು

ಹೈದರಾಬಾದ್ ರೇಸ್

ಮಿಕಿಮೊಟೊ ಗೆಲ್ಲುವ ನಿರೀಕ್ಷೆ

ಒಸ್ಮಾನ್ ಸಾಗರ್ ಕಪ್ ಮೊದಲನೇ ಡಿವಿಜನ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಕಿಮೊಟೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡ್ಯಾಶಿಂಗ್ ಚಾರ್ಮ್ 6, ಸಿಪ್ರೆಸ್ 1, ಅಮೆರಿಕನ್ ಅಫೇರ್ 2
2ನೇ ರೇಸ್: ಕ್ಯಾಲಿಸ್ಟೋಗ 7, ಇಂಪೀರಿಯಾ 3, ಆನ್ಕೋರ್ 2
3ನೇ ರೇಸ್: ಕ್ಯಾಚ್ ದಿ ವಾರ್ಮ್ 3, ಎನ್.ಆರ್.ಐ ಹೈ ಪವರ್ 7, ನ್ಯಾಂಜ 8
4ನೇ ರೇಸ್: ಡಬಲ್ ಟಚ್ 5, ಪೆಸಿಫಿಕ್ ಹೈಟ್ಸ್ 6, ದುಬೈ ಟಚ್ 5
5ನೇ ರೇಸ್: ಡಿಯಾಬ್ಲೊ 5, ಟೈಗರ್ ರೂಬಿ 6, ಹೈ ಹೀಲ್ಸ್ 3
6ನೇ ರೇಸ್: ಮಿಕಿಮೊಟೊ 4, ಡಿ ಮಿಂಚು 2, ರಾಗ್ನರಾಕ್ 5
7ನೇ ರೇಸ್: ಗ್ಲೋರಿಯಾ 3, ಲೈಫ್ಸ್ ಜರ್ನಿ 1, ಟೋಟಲ್ ಕಂಟ್ರೋಲ್ 13
8ನೇ ರೇಸ್: ಲೆಗೊ 7, ಡೆಸರ್ಟ್ ಸುಲ್ತಾನ್ 2, ಗೋಲ್ಡನ್ ಇಂಜಿಯೊ 3

ಉತ್ತಮ ಬೆಟ್: ಡಿಯಾಬ್ಲೊ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Kengeri

30X50 NF, BDA Site Sale, KENGERI UPANAGARA Fully Developed, Close To Ring Road: 8496030007/ 8310885235

BUSINESS

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

Business to Business

Finance

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

PERSONAL

Change of Name

I, YASHODAMMA K M Alias Yashoda K M wife of a Nataraj Murthy Aged Around 62 Years, Presently Residing at door no. 5092 Ist main 4th cross Ravindranagar, Hassan 573201 have changed my name as Yashodamma K M by Virtue of Affidavit Sworn by me before Notary Smt. D S Jagadhamba at Hassan.

CHANGE OF NAME
I, SRINIVASAN K S/o Kodanda Ramaiah, residing at No. 252, Cornerstone Campan Valley, Near Varthur, Muthsandra, Hoskote Taluk, Bengaluru Rural - 560087 have changed my name to SRINIVAS. K vide affidavit dated 18-07-2025 before notary Yankoba, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಯಾವ ಮೂರ್ಖ ಬೇಕಾದರೂ ವಿಷಯ ತಿಳಿದುಕೊಳ್ಳುತ್ತಾನೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾದ ಸಂಗತಿ.
–ಆಲ್‌ಬರ್ಟ್ ಐನ್‌ಸ್ಟೀನ್

ಶುಭಾಂಶು ಶುಕ್ಲಾ ಅವರ ಐಎಸ್‌ಎಸ್ ಯಾನವು ಅಂತರಿಕ್ಷದಲ್ಲಿ ಮಾನವನ ವಾಸಯೋಗ್ಯ ಸಾಧ್ಯತೆಯ ಬಗ್ಗೆ ಇನ್ನಷ್ಟು ಪ್ರಯೋಗಗಳನ್ನು ನಡೆಸುವುದಕ್ಕೆ ಒತ್ತಾಸೆ ನೀಡಿದೆ. ಅಷ್ಟೇ ಅಲ್ಲ, ಮೂಲವಿಜ್ಞಾನದತ್ತ ನಮ್ಮ ಮಕ್ಕಳ ಆಸಕ್ತಿಯನ್ನು ಕೆರಳಿಸುವುದಕ್ಕೆ ಮತ್ತು ಈ ಯೋಜನೆಯ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಮೂಲಕ ಅಧ್ಯಾಪಕರು ಬೋಧನೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಕೊಳ್ಳುವುದಕ್ಕೂ ಪ್ರೇರಣೆ ನೀಡಿದೆ

ಶುಭಾಂಶು ಯಾನ ಕಲಿಕೆಗೆ ಸೋಪಾನ

• ಬಿ.ಆರ್.ಗುರುಪ್ರಸಾದ್

ಅಂತರಿಕ್ಷಕ್ಕೆ ತೆರಳಿದ ಎರಡನೇ ಭಾರತೀಯರಾದ ಶುಭಾಂಶು ಶುಕ್ಲಾ ಅವರ ಯಾನ ಇದೀಗ ಯಶಸ್ವಿಯಾಗಿ ಮುಕ್ತಾಯವಾಗಿದೆ. 'ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ'ದಲ್ಲಿ (ಇಂಟರ್‌ನ್ಯಾಷನಲ್ ಸ್ಪೇಸ್ ಸ್ಟೇಷನ್–ಐಎಸ್‌ಎಸ್) 18 ದಿನ ವಾಸಿಸಿ ಅಪೂರ್ವವಾದ ಅನುಭವ ಪಡೆಯುವುದರೊಂದಿಗೆ, ಅಲ್ಲಿ ಅರ್ಥಪೂರ್ಣವಾದ ವೈಜ್ಞಾನಿಕ ಪ್ರಯೋಗಗಳನ್ನೂ ನಿರ್ವಹಿಸಿ ಅವರು ಭೂಮಿಗೆ ಮರಳಿದ್ದಾರೆ.

ಅಂತರಿಕ್ಷ ಯಾನ ಒಂದು ರೋಮಾಂಚಕಾರಿಯಾದ ಸಾಹಸ. ವಿಜ್ಞಾನದ ತಳಹದಿಯ ಮೇಲೆ ಭೌತಶಾಸ್ತ್ರದ ನಿಯಮಗಳಿಗೆ ಅನುಗುಣವಾಗಿ ಈ ಯಾನ ರೂಪಿತವಾಗಿರುತ್ತದೆ. ಇಲ್ಲಿ ಅನೇಕ ವೇಳೆ ಕಂಡುಬರುವ ಗಂಟೆಗೆ 28 ಸಾವಿರದಿಂದ 40 ಸಾವಿರ ಕಿಲೊಮೀಟರ್‌ವರೆಗಿನ ವೇಗ, ಅಪಾರವಾದ ಉಷ್ಣತೆ, ಅಂತರಿಕ್ಷ ನೌಕೆ ಹಾಗೂ ಅದರೊಳಗೆ ಕುಳಿತಿರುವ ಗಗನಯಾತ್ರಿಗಳ ಮೇಲೆ ಬೀಳುವ ಬಲ... ಇವೆಲ್ಲವೂ ನಮ್ಮ ಊಹೆಗೆ ನಿಲುಕದಂತಹವು.

ರಾಕೆಟ್‌ಗಳ ನೆರವಿನಲ್ಲಿ ಕೈಗೊಳ್ಳುವ ಅಂತರಿಕ್ಷ ಯಾನದ ವಿವರಗಳನ್ನು ಅರಿತಾಗ ಮೈ ಜುಮ್ಮೆನ್ನುತ್ತದೆ! ಅದರಲ್ಲೂ 'ಮಾನವಸಹಿತ ಅಂತರಿಕ್ಷಯಾನ'ಕ್ಕೆ ಲಕ್ಷಾಂತರ ವಿದ್ಯಾರ್ಥಿಗಳನ್ನು ಹುರಿದುಂಬಿಸುವ ಸಾಮರ್ಥ್ಯವಿದೆ.

1984ರಲ್ಲಿ ಅಂತರಿಕ್ಷಕ್ಕೆ ತೆರಳಿದ ಮೊದಲ ಭಾರತೀಯರಾದ ರಾಕೇಶ್ ಶರ್ಮಾ ಅವರ ಸಾಹಸಯಾನದಿಂದ ಸ್ಫೂರ್ತಿ ಪಡೆದವರು ಶುಕ್ಲಾ. ಬಳಿಕ ವಿಜ್ಞಾನ ಹಾಗೂ ಗಣಿತದಲ್ಲಿ ಆಸಕ್ತಿ ತಳೆದು, ಕಠಿಣತಮವಾದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಯುದ್ಧವಿಮಾನದ ಪೈಲಟ್ ಆದರು. ಟೆಸ್ಟ್ ಪೈಲಟ್ ಸಹ ಆಗಿ ಭಾರತದ 'ಗಗನಯಾನ' ಕಾರ್ಯಕ್ರಮದ ನಾಲ್ವರು ಗಗನಯಾತ್ರಿಗಳಲ್ಲಿ ಒಬ್ಬರಾದರು. ಇದೀಗ ಅವರು 'ಆ್ಯಕ್ಸಿಯಂ– 4' ಎಂಬ ಅಂತರಿಕ್ಷ ಅಭಿಯಾನದ ಭಾಗವಾಗಿ, ಭೂಮಿಯಲ್ಲಿದ್ದ ವಿದ್ಯಾರ್ಥಿಗಳೊಂದಿಗೆ ಭೂಕಕ್ಷೆಯಿಂದಲೇ ಸಂವಾದ ನಡೆಸಿದ್ದಾರೆ.

ತೂಕರಹಿತ ಸ್ಥಿತಿಯಲ್ಲಿ ತೇಲಾಡುತ್ತಾ ಗಂಟೆಗೆ ಸುಮಾರು 28 ಸಾವಿರ ಕಿ.ಮೀ ವೇಗದಲ್ಲಿ ಭೂಮಿಯನ್ನು ಸುತ್ತುತ್ತಿದ್ದ ಶುಕ್ಲಾ ಅವರನ್ನು ಟಿ.ವಿ. ಪರದೆಯ ಮೇಲೆ ಕಂಡು, ಅವರೊಂದಿಗೆ ಸಂವಾದ ನಡೆಸುವಾಗ ನಮ್ಮ ವಿದ್ಯಾರ್ಥಿಗಳು ಅನುಭವಿಸಿದ ಉದ್ವೇಗ, ಪಡೆದ ಉತ್ತೇಜನ ಅಸಾಧಾರಣವಾದುದು. ಪಠ್ಯಪುಸ್ತಕದಿಂದಷ್ಟೇ ಅಲ್ಲ, ಸಂವಹನದಲ್ಲಿ ತಜ್ಞರಿಗೆ ಪ್ರಶ್ನೆಗಳನ್ನು ಕೇಳುವುದರಿಂದಲೂ ಅನುಮಾನಗಳನ್ನು ಬಗೆಹರಿಸಿಕೊಳ್ಳಬಹುದು, ಈ ಮೂಲಕ ತಮ್ಮ ಜ್ಞಾನದಿಗಂತವನ್ನು ವಿಸ್ತರಿಸಿಕೊಳ್ಳಬಹುದು ಎಂಬ ಅರಿವನ್ನು ಇದು ವಿದ್ಯಾರ್ಥಿಗಳಲ್ಲಿ ಮೂಡಿಸಿದೆ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಈಗಾಗಲೇ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತ ಬಹಳಷ್ಟು ಸಾಧನೆ ಮಾಡಿದೆ. ಅದರಲ್ಲೂ ಅಂತರಿಕ್ಷ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಕೋಟ್ಯಂತರ ವಿದ್ಯಾರ್ಥಿಗಳನ್ನು ಹೊಂದಿರುವ ದೇಶಕ್ಕೆ ತನ್ನ ಸಾಧನೆಗಳು ಸುಸ್ಥಿರವಾಗಿ ಇರುವಂತೆ ನೋಡಿಕೊಂಡು, ಈ ಕ್ಷೇತ್ರಗಳಲ್ಲಿ ಮತ್ತಷ್ಟು ಮೇಲಕ್ಕೇರುವುದು ಅತ್ಯಗತ್ಯವಾಗಿದೆ. ಈ ದಿಸೆಯಲ್ಲಿ ಶುಕ್ಲಾ ಅವರ ಯಾನವು ದೇಶದಾದ್ಯಂತ ವಿದ್ಯಾರ್ಥಿಗಳು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತದಲ್ಲಿ, ಅಂದರೆ 'ಸ್ಟೆಮ್' ಕ್ಷೇತ್ರದಲ್ಲಿ ಶಿಕ್ಷಣವನ್ನು ಪಡೆದು ನಂತರ ಅದನ್ನೇ ವೃತ್ತಿಯನ್ನಾಗಿ ಆಯ್ದುಕೊಳ್ಳುವುದನ್ನು ಪ್ರೇರೇಪಿಸಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ಅಂತರಿಕ್ಷದ ತೂಕರಹಿತ ಸ್ಥಿತಿಯಲ್ಲಿ ವಾಸಿಸುವ ವಿಶಿಷ್ಟ ಅನುಭವವನ್ನು ಪಡೆಯುವುದಕ್ಕಷ್ಟೇ ಶುಕ್ಲಾ ಅವರ ಯಾನವು ಸೀಮಿತವಾಗಿರಲಿಲ್ಲ. ಭಾರತದಲ್ಲೇ ವಿಜ್ಞಾನಿಗಳಿಂದ ಯೋಜಿಸಿ, ರೂಪಿಸಿ, ವಿಶೇಷ ಸಾಧನಗಳಲ್ಲಿ ಸಿದ್ಧಗೊಳಿಸಲಾದ ಏಳು ಪ್ರಯೋಗಗಳನ್ನು ನಡೆಸುವುದೂ ಅವರ ಯಾನದ ಉದ್ದೇಶವಾಗಿತ್ತು. ಆ ಪೈಕಿ ಒಂದು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಐಐಟಿ ವಿಜ್ಞಾನಿಗಳು ರೂಪಿಸಿದ್ದು. ಅದು, ಅಂತರಿಕ್ಷದ ಪರಿಸರದಲ್ಲಿ ಹೆಸರುಕಾಳು ಹಾಗೂ ಮೆಂತ್ಯದ ಮೊಳೆತ ಬೀಜಗಳಲ್ಲಿ ಆಗುವ ಮಾರ್ಪಾಡುಗಳನ್ನು ಅಭ್ಯಸಿಸುವುದಾಗಿತ್ತು.

ಮೂಲ ವಿಜ್ಞಾನಕ್ಕೆ ಸಂಬಂಧಿಸಿದ್ದೂ ಸೇರಿದಂತೆ ಒಟ್ಟು 60 ಪ್ರಯೋಗಗಳಲ್ಲಿ ಶುಕ್ಲಾ ಹಾಗೂ ಸಹಚರರು ಐಎಸ್‌ಎಸ್‌ನ ಒಳಗೆ ತೊಡಗಿಸಿಕೊಂಡರು. ಇದು, ವಿಜ್ಞಾನ ಶಿಕ್ಷಣ ಪಡೆಯುತ್ತಿರುವ ವಿವಿಧ ಹಂತದ ವಿದ್ಯಾರ್ಥಿ ಸಮೂಹದ ಆಸಕ್ತಿಯನ್ನು ಪುನರುಜ್ಜೀವನಗೊಳಿಸಿ, ಕುತೂಹಲ ಕೆರಳಿಸುವುದರಲ್ಲಿ ಯಶಸ್ವಿಯಾಗಿದೆ ಎಂಬುದರಲ್ಲಿ ಅನುಮಾನವಿಲ್ಲ.

ಇನ್ನು ಶುಕ್ಲಾ ಅವರ ಯಾನಕ್ಕೆ ಸಂಬಂಧಿಸಿದ ಚಿತ್ರಗಳು, ವಿಡಿಯೊಗಳನ್ನು ತೋರಿಸುತ್ತಾ ಅವುಗಳ ವಿವಿಧ ಮುಖಗಳನ್ನು ವಿಶ್ಲೇಷಿಸುವ ಮೂಲಕ, ನ್ಯೂಟನ್ನನ ಚಲನಾ ನಿಯಮ, ಗುರುತ್ವಾಕರ್ಷಣ ನಿಯಮಕ್ಕೆ ಅವು ಯಾವ ರೀತಿ ಬದ್ಧವಾಗಿವೆ ಎಂಬುದನ್ನು ಅಧ್ಯಾಪಕರು ಸುಲಭವಾಗಿ ವಿವರಿಸಬಹುದು. ಈ ಯಾನಕ್ಕೆ ಬಳಸಿದ ರಾಕೆಟ್ ಯಾವ ಮುನ್ನೂಕುವ ಸಾಧನವನ್ನು (ಪ್ರೊಪೆಲೆಂಟ್ ಅಂದರೆ ಇಂಧನ-ಆಕ್ಸಿಡೈಸರ್ ಜೋಡಿ) ಬಳಸುತ್ತದೆ ಎಂಬುದನ್ನು ಪ್ರಸ್ತಾಪಿಸುತ್ತಾ ರಸಾಯನವಿಜ್ಞಾನವನ್ನು ಆಸಕ್ತಿದಾಯಕವಾಗಿ ಬೋಧಿಸಬಹುದು. ಈ ಯಾನವನ್ನು ಉದಾಹರಣೆಯನ್ನಾಗಿ ತೆಗೆದುಕೊಂಡು, ಶಾಲಾ ಶಿಕ್ಷಣದ ಮಟ್ಟದಲ್ಲಿ ಕಂಡುಬರುವ ಕೆಲವು ಗಣಿತಾತ್ಮಕ ಸಮಸ್ಯೆಗಳನ್ನೂ ಬಗೆಹರಿಸಬಹುದು. ಈ ರೀತಿ ಮಾಡಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದ ಅನುಭವ ನನಗಿದೆ.

ಹೀಗೆ, ಶುಭಾಂಶು ಶುಕ್ಲಾ ಅವರ 'ಆ್ಯಕ್ಸಿಯಂ– 4' ಅಭಿಯಾನ ನಮ್ಮ ಶಿಕ್ಷಣ ಕ್ಷೇತ್ರಕ್ಕೆ ಅನೇಕ ವಿಧವಾದ ಕೊಡುಗೆಯನ್ನು ನೀಡಿದೆ, ಭವಿಷ್ಯದಲ್ಲೂ ನೀಡಲಿದೆ.

ಲೇಖಕ: ನಿರ್ದೇಶಕ, ಜವಾಹರಲಾಲ್ ನೆಹರೂ ತಾರಾಲಯ ಬೆಂಗಳೂರು, 'ಇಸ್ರೊ' ನಿವೃತ್ತ ವಿಜ್ಞಾನಿ

ಹಟಮಾರಿ ಮಗಳನ್ನು ತಿದ್ದುವುದು ಹೇಗೆ?



ಸಮಾಧಾನ
ಡಾ. ಡಿ.ಎಂ.ಹೆಗಡೆ
ಸಮಾಲೋಚಕರು

• **ನನಗೆ ಮಗ ಮತ್ತು ಮಗಳಿದ್ದಾರೆ. ಮಗ ಎಂಜಿನಿಯರಿಂಗ್ ಓದುತ್ತಿದ್ದಾನೆ. ಸೂಕ್ಷ್ಮ ಸ್ವಭಾವ. ಮಗಳು 8ನೇ ತರಗತಿ ಕಲಿಯುತ್ತಿದ್ದಾಳೆ. ಆದರೆ, ಹಟದ ಸ್ವಭಾವ. ಏತಿ ಅಂದರೆ ಪ್ರೇತಿ ಎನ್ನುತ್ತಾಳೆ. ಓದಿನಲ್ಲಿ ಜಾಣೆ, ಕೌಶಲದಲ್ಲಿಯೂ ಮುಂದು, ಭಾಷಣ, ಕಲೆ, ಸಂಗೀತ... ಹೀಗೆ ಎಲ್ಲದರಲ್ಲಿಯೂ ಆಸಕ್ತಿ. ಆದರೆ ಅವಳ ಹಟದ ಸ್ವಭಾವ ಮಾತ್ರ ದಿನೇ ದಿನೇ ಹೆಚ್ಚುತ್ತಿದೆ. ಬೇಕು ಅಂದರೆ ಬೇಕೇಬೇಕು ಅನ್ನುವ ಸ್ಥಿತಿಗೆ ತಲುಪಿದೆ. ಶಾಲೆಯಲ್ಲಿಯೂ ಈ ಧೋರಣೆಗೆ ದೂರುಗಳು ಹೆಚ್ಚುತ್ತಿವೆ. ಅವಳನ್ನು ತಿದ್ದುವುದು ಹೇಗೆ? ಬಂಡಾಯಗಾರ್ತಿಯಂತೆ ಇರುವ ಅವಳಲ್ಲಿ ಸಂಯಮ ಮೂಡಿಸುವುದು ಹೇಗೆ?**

ನಿವೇದಿತಾ ರವಿಶಂಕರ್, ಶಿವಮೊಗ್ಗ

ನಿಮ್ಮ ಮಗಳ ಸ್ವಭಾವ ಸ್ವಲ್ಪ ವಿಕೋಪದ ದಾರಿಯಲ್ಲಿದೆ. ಸಾಧಾರಣವಾಗಿ ಯಾವುದೇ ಮಗುವಿಗೆ ತಾನು ಕೆಟ್ಟ ವ್ಯಕ್ತಿಯಾಗಿ ಗುರುತಿಸಿಕೊಳ್ಳುವುದು ಇಷ್ಟ ಇರುವುದಿಲ್ಲ. ತೀರಾ ನಕಾರಾತ್ಮಕ ವಾತಾವರಣದಲ್ಲಿ ಬೆಳೆದ ಕೆಲವರು ಇದಕ್ಕೆ ವ್ಯತಿರಿಕ್ತವಾಗಿ ಇರುತ್ತಾರೆ. ಇಲ್ಲಿ ಹಾಗೇನಿಲ್ಲ.

ಇನ್ನು, ನಿಮ್ಮ ದಾಂಪತ್ಯ ಜೀವನ ಹೇಗಿದೆ? ಮನೆಯಲ್ಲಿ ನೀವು ಗಂಡ– ಹೆಂಡತಿ ಪದೇ ಪದೇ ಜಗಳವಾಡುತ್ತೀರಾ, ದಬ್ಬಾಳಿಕೆ ಮಾಡುತ್ತೀರಾ? ವಿಶೇಷವಾಗಿ ನಿಮ್ಮ ಗಂಡ ನಿಮಗೆ ಹೊಡೆದು, ಬೈದು ಮಾಡುತ್ತಾರಾ? ಅಣ್ಣ– ತಂಗಿಯ ನಡುವಿನ ಬಾಂಧವ್ಯ ಹೇಗಿದೆ? ಇವೆಲ್ಲವುಗಳ ಜೊತೆಗೆ ಇನ್ನಷ್ಟು ವಿವರಗಳು ಬೇಕಾಗುತ್ತವೆ, ಇರಲಿ. ಮನೆಯಲ್ಲಿ ಸಹನೀಯ ವಾತಾವರಣ ಇಲ್ಲದಿರುವಾಗಲೂ ಮಕ್ಕಳು ಅಸಹಜ ಸ್ವಭಾವ ಮೈಗೂಡಿಸಿಕೊಳ್ಳುತ್ತಾರೆ.

ನಿಮ್ಮ ಮಗಳಿಗೆ 'ಟೀನೇಜ್' ಶುರುವಾಗಿದೆ. ಮನೋದೈಹಿಕ ಬದಲಾವಣೆಗಳನ್ನು ನಿರ್ವಹಿಸುವುದು ಆಕೆಗೆ ತಿಳಿಯದಿರಬಹುದು. ನೀವು ಅವಳಿಗೆ ಈ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಟ್ಟಿರಲಿಕ್ಕಿಲ್ಲ. ಆಕೆ ಅಪ್ಪನನ್ನೋ ಅಣ್ಣನನ್ನೋ ಅಥವಾ ಬೇರೆ ಯಾರನ್ನೋ ಅನುಕರಿಸುತ್ತಿರಬಹುದು. ಬದಲಾಗುತ್ತಿರುವ ತನ್ನ ಸ್ವಭಾವದಿಂದ ಅವಳಿಗೆ ಏನೇನೋ ಲಾಭಗಳಾಗಿರಬಹುದು. ಇದು ಅವಳ ಹೊರ ಮನಸ್ಸಿಗೆ ಗೊತ್ತಿರಲಿಕ್ಕಿಲ್ಲ. ಸುಪ್ತ ಮನಸ್ಸಿನಲ್ಲಿ ಗಟ್ಟಿಗೊಂಡಿರುವ ಆಲೋಚನೆಗಳು ಹೀಗೆ ವ್ಯಕ್ತವಾಗುತ್ತಿರಬಹುದು.

ಇನ್ನು, ಮನೆಯಲ್ಲಿ ತನಗೆ ಪಾಲಕರ ಪ್ರೀತಿ ಸಿಗುತ್ತಿಲ್ಲ, ಶಾಲೆಯಲ್ಲಿ ಶಿಕ್ಷಕರು ತನಗೆ 'ಮಹತ್ವ' ಕೊಡುತ್ತಿಲ್ಲ ಎಂದು ಆಕೆಗೆ ಅನ್ನಿಸಿರಬಹುದು. ನೀವು ಮೊದಲ ಪ್ರಾಶಸ್ತ್ಯವನ್ನು ಮಗನಿಗೆ ಕೊಟ್ಟಿದ್ದು ಜಾಸ್ತಿಯಾಗಿರಬಹುದು. ಅವಳು ಇಷ್ಟಪಟ್ಟು ಮಾಡಿದ್ದನ್ನು ನೀವು ತಿರಸ್ಕರಿಸಿರಬಹುದು. ಅಷ್ಟೆಲ್ಲಾ ಪ್ರತಿಭಾವಂತಳಾಗಿದ್ದರೂ ಆಕೆಗೆ ಸಮಾಧಾನ ಇಲ್ಲವಾಗಿರಬಹುದು. ಆಕೆ ಮಾಡುವ ಯಾವುದೇ ಕೆಲಸಕ್ಕೂ ಅವಳ ನಿರೀಕ್ಷೆಯಷ್ಟು ಮನ್ನಣೆ ಸಿಕ್ಕಿರಲಿಕ್ಕಿಲ್ಲ. ಶಾಲೆಯಲ್ಲಿಯೋ ಮನೆಯಲ್ಲಿಯೋ ಸಂಬಂಧಿಕರ ಎದುರಿಗೋ ಅವಳಿಗೆ ಅವಮಾನ ಆಗಿರಬೇಕು. ಇಂಥವೇ ಅನೇಕಾನೇಕ ಕಾರಣಗಳಿಂದ (ಅಂಥ ಸನ್ನಿವೇಶಗಳು ನಿಮ್ಮ ಗಮನಕ್ಕೆ ಬಂದಿರಲಿಕ್ಕಿಲ್ಲ ಅಥವಾ ನಿಮಗೆ ಸಹಜ ಅನ್ನಿಸಿರಲೂಬಹುದು) ಅವಳ ಮನಸ್ಸಿಗೆ ಗಾಸಿಯಾಗಿರುವ ಸಾಧ್ಯತೆ ಇರುತ್ತದೆ. ಹಾಗಾಗಿ, ಆಕೆ ಸಿಡಿದೆದ್ದಿರಬಹುದು, ಹಟದಿಂದ ಪ್ರತಿಭಟಿಸುತ್ತಿರಬಹುದು. ಇಂಥ ಸಂದರ್ಭಗಳಲ್ಲಿ, ನೀವು ಅವಳಿಗೆ ಒಂದಿಷ್ಟು ಜಾಸ್ತಿ ಪ್ರೀತಿ, ಕಾಳಜಿಯನ್ನು ತೋರಿಸಬೇಕು. ಇಬ್ಬರು ಮಕ್ಕಳ ಬಗ್ಗೆಯೂ ನಿಮಗೆ ಸಮಾನವಾದ ಪ್ರೀತಿ, ಕಾಳಜಿ ಇದೆ ಎನ್ನುವುದನ್ನು ತಿಳಿಸಿ ಹೇಳಬೇಕು. ಅವಳಲ್ಲಿರುವ ವಿಶೇಷ ಗುಣವನ್ನು, ಅವಳ ಚಟುವಟಿಕೆಗಳನ್ನು ನೀವು ಮೆಚ್ಚಿ, ಹೊಗಳಬೇಕು. ನಿಮ್ಮೆಲ್ಲರ ನಡುವೆ ಆಕೆಯೂ ಒಬ್ಬ ಮಹತ್ವದ ವ್ಯಕ್ತಿ ಎನ್ನುವುದು ಅವಳಿಗೆ ತಿಳಿಯುವ ಹಾಗೆ ನೀವು ಮಾತನಾಡಬೇಕು. ಬಹುತೇಕ ಎಂಥದ್ದೇ ಸಮಸ್ಯೆ ಇದ್ದರೂ 'ಪ್ರೀತಿ' ಎನ್ನುವ ಔಷಧಿಯಿಂದ ಕಡಿಮೆಯಾಗುತ್ತದೆ. ಅವಳ ದಿನಚರಿಯ ಬಗ್ಗೆ ಗಮನವಿಡಬೇಕು. ಸಾಕಷ್ಟು ನೀರು ಕುಡಿಯುತ್ತಾಳಾ, ಸರಿಯಾಗಿ ನಿದ್ರೆ ಮಾಡುತ್ತಾಳಾ, ಆಟೋಟಗಳಲ್ಲಿ ಭಾಗವಹಿಸುತ್ತಾಳಾ, ಯಾವ ಕಾರ್ಯಕ್ರಮಗಳನ್ನು, ಸೀರಿಯಲ್ಲುಗಳನ್ನು ನೋಡುತ್ತಾಳೆ ಎನ್ನುವಂತಹ ವಿಷಯಗಳನ್ನು ಗಮನಿಸಬೇಕು. ಈಗೀಗ ಮಕ್ಕಳು ಹೆಚ್ಚೆಚ್ಚು ನಾಜೂಕಿನವರಾಗುತ್ತಿದ್ದಾರೆ. ಅವರನ್ನು ಅಷ್ಟೇ ನಯವಾಗಿ, ನಾಜೂಕಾಗಿ ನಡೆಸಿಕೊಳ್ಳಬೇಕು. ಮಕ್ಕಳನ್ನು ಬೆಳೆಸುವುದೆಂದರೆ, ಮಣ್ಣಿನ ಮುದ್ದೆಯಿಂದ ಮಡಕೆಯನ್ನು ಮಾಡಿದ ಹಾಗೆಯೇ. ಕಲ್ಲನ್ನು ಕೆತ್ತಿ ಶಿಲ್ಪವನ್ನಾಗಿ ಮಾಡುವುದನ್ನು, ಮಡಕೆ ಮಾಡುವುದನ್ನು ಕಲಿಯುವಂತೆಯೇ 'ಪೇರೆಂಟಿಂಗ್' ಅನ್ನೂ ಕಲಿತುಕೊಳ್ಳಬೇಕಾಗುತ್ತದೆ!

ಶಿಕ್ಷಣ ಪುರವಣಿಗೆ ಬರಹಗಳನ್ನು ಕಳುಹಿಸಬೇಕಾದ ಇ–ಮೇಲ್ ಐ.ಡಿ. shikshana@prajavani.co.in

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ವಿದ್ಯಾರ್ಥಿ ವೇತನ ಕೈಪಿಡಿ

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಅಧಿಸೂಚನೆಯಿಂದ ಕೈಬಿಡಲಾದ ಬುಡಕಟ್ಟುಗಳು (ಡಿಎನ್‌ಟಿ), ಅಲೆಮಾರಿ ಬುಡಕಟ್ಟುಗಳು (ಎನ್‌ಟಿ) ಮತ್ತು ಅರೆ- ಅಲೆಮಾರಿ ಬುಡಕಟ್ಟುಗಳಿಗೆ (ಎಸ್‌ಎನ್‌ಟಿ) ಸೇರಿದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ಪಡೆಯಲು ನೆರವಾಗಲಿದೆ. ನೀಟ್, ಜೆಇಇ ಮೇನ್, ಕ್ಲಾಟ್, ಎನ್‌ಡಿಎ, ಟೋಫೆಲ್, ಸ್ಯಾಟ್, ಸಿಎ–ಸಿಪಿಟಿ, ಆರ್‌ಆರ್‌ಬಿ, ಬ್ಯಾಂಕಿಂಗ್, ವಿಮೆ, ರಾಜ್ಯ ಪೊಲೀಸ್, ಸಿಪಿಎಲ್ ಕೋರ್ಸ್‌ಗಳಂಥ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಳು ಇದರಲ್ಲಿ ಸೇರಿವೆ.

ಅರ್ಜಿದಾರರು 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಪ್ರಸ್ತುತ ಓದುತ್ತಿರಬೇಕು. ಕುಟುಂಬದ ವಾರ್ಷಿಕ ಗರಿಷ್ಠ ಆದಾಯ ಮಿತಿ ₹ 8 ಲಕ್ಷ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದೇ ಯೋಜನೆಯಿಂದ ಇದೇ ರೀತಿಯ ಪ್ರಯೋಜನ ಪಡೆದಿರಬಾರದು. ಎರಡು ಹಂತಗಳ (ಪ್ರಾಥಮಿಕ ಮತ್ತು ಮುಖ್ಯ) ಪರೀಕ್ಷೆಗಳಿಗೆ, ಪ್ರಾಥಮಿಕ ಹಂತದಲ್ಲಿ ಕನಿಷ್ಠ ಒಮ್ಮೆಯಾದರೂ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ. ಒಬ್ಬ ವಿದ್ಯಾರ್ಥಿಯು ಗರಿಷ್ಠ ಎರಡು ಬಾರಿ ಈ ಯೋಜನೆಯಡಿ ಪ್ರಯೋಜನ ಪಡೆಯಬಹುದು. ಯಾವುದೇ ಕೋಚಿಂಗ್ ಸಂಸ್ಥೆಯಲ್ಲಿ ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ದಾಖಲಾಗಬಹುದು.

- **ಆರ್ಥಿಕ ಸಹಾಯ:** ₹ 1.20 ಲಕ್ಷದವರೆಗಿನ ತರಬೇತಿ ಶುಲ್ಕ ಮತ್ತು ಹೆಚ್ಚುವರಿ ಪ್ರಯೋಜನಗಳು. **ಅರ್ಜಿ ಸಲ್ಲಿಸಲು ಕೊನೇ ದಿನ:** 03-08-2025. **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್. **ಹೆಚ್ಚಿನ ಮಾಹಿತಿಗೆ: Short Url: www.b4s.in/praja/FCDNT2**

ಕೆಎಸ್‌ಒಯು ಆನ್‌ಲೈನ್‌ಗೂ ಅವಕಾಶ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ– ಕೆಎಸ್‌ಒಯು ಇದೀಗ 10 ಆನ್‌ಲೈನ್ ಕೋರ್ಸ್‌ಗಳಿಗೆ ಯುಜಿಸಿ ಅನುಮೋದನೆ ಪಡೆಯುವ ಮೂಲಕ ಮತ್ತೊಂದು ಮಜಲಿಗೆ ತೆರೆದುಕೊಂಡಿದೆ.

ಬಿ.ಎ., ಬಿ.ಕಾಂ., ಎಂ.ಎ.– ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲಿಷ್, ಅರ್ಥಶಾಸ್ತ್ರ, ಎಂ.ಕಾಂ., ಎಂಬಿಎ, ಎಂಎಸ್ಸಿ– ಗಣಿತಶಾಸ್ತ್ರ ಶಿಕ್ಷಣ ಕ್ರಮಗಳಿಗೆ ಈ ಅವಕಾಶ ಲಭ್ಯವಾಗಿದೆ. ಮೈಸೂರಿನಲ್ಲಿರುವ ಕೇಂದ್ರ ಕಚೇರಿ ಅಥವಾ ಜಿಲ್ಲೆಗಳಲ್ಲಿ ಇರುವ ಪ್ರಾದೇಶಿಕ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು.

ಅಲ್ಪಸಂಖ್ಯಾತ ಸಚಿವಾಲಯದ ಜೊತೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಂಡಿದ್ದು, ನಿಗದಿತ ಮಾನದಂಡಗಳಿಗೆ ಒಳಪಡುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾವಕಾಶ ಇದೆ. 2025-26ರ ಜುಲೈ ಆವೃತ್ತಿಯ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ. ಆನ್‌ಲೈನ್ ಸೇರಿ ಒಟ್ಟು 79 ಕೋರ್ಸ್‌ಗಳು ಲಭ್ಯವಿವೆ ಎಂದು ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಭೂಗೋಳಶಾಸ್ತ್ರ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

41) ಯಾಕೆ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ?
ಉತ್ತರ:– ಪರ್ಯಾಯ ಪ್ರಸ್ಥಭೂಮಿ ಆರ್ಥಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

42) ಭಾರತದ ಕರಾವಳಿಗಳನ್ನು ಎಷ್ಟು ಭಾಗಗಳಾಗಿ ವಿಗಂಡಿಸಿದೆ? ಅವುಗಳನ್ನು ಹೆಸರಿಸಿ
ಉತ್ತರ:– ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ

43) ಭಾರತದಲ್ಲಿರುವ ಲಗೂನ್ ಅಥವಾ ಉಪ್ಪು ನೀರಿನ ಸರೋವರಗಳು ಯಾವುವು?
ಉತ್ತರ:– ಒಡಿಶಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು

41) ಉತ್ತರದ ಮಹಾ ಮೈದಾನ ಬಗ್ಗೆ ಬರೆಯಿರಿ.
ಉತ್ತರ : ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡು ಬರುವುದು. ಇದು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯವರೆಗೂ ಹಬ್ಬಿದೆ. ಇದು ಪೂರ್ವ ಮತ್ತು ಪಶ್ಚಿಮವಾಗಿ ಸುಮಾರು 2400 ಕಿ. ಮೀ ಉದ್ದವಾಗಿದೆ. ಈ ಮೈದಾನವು 70 ರಿಂದ 500 ಕಿ. ಮೀ. ಅಗಲವಾಗಿದೆ. ಈ ಮೈದಾನವು ಬಹುತೇಕವಾಗಿ ಸಮತಟ್ಟಾಗಿದೆ. ಉತ್ತರ ಭಾರತದ ಮೈದಾನವು, ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ ಸಂಚಯನ ಮೈದಾನವಾಗಿದೆ.

42) ಪರ್ಯಾಯ ಪ್ರಸ್ಥಭೂಮಿ ಕುರಿತು ಬರೆಯಿರಿ
ಉತ್ತರ: ಪರ್ಯಾಯ ಪ್ರಸ್ಥಭೂಮಿಯು ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದು. ಅಲ್ಲದೆ ಭೂ ಇತಿಹಾಸದ ಪ್ರಕಾರ ಇದು 'ಅತಿ ಪುರಾತನ'ವಾಗಿದ್ದು ಭೂ ಖಂಡಗಳ ಆರಂಭದಲ್ಲಿದ್ದ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದೆಯೆಂದು ಭೂ–ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರಸ್ಥಭೂಮಿಯು ಸಟ್ಲೆಜ್–ಗಂಗಾ ಮೈದಾನದ ದಕ್ಷಿಣದಲ್ಲಿ ಹಿಂದೂ ಮಹಾಸಾಗರದವರೆಗೂ ಚಾಚಿಕೊಂಡಿದೆ. ಇದರ ಒಟ್ಟು ಕ್ಷೇತ್ರ ಸುಮಾರು 16 ಲಕ್ಷ ಚ.ಕಿ.ಮೀ. ಇದು ಉತ್ತರದಲ್ಲಿ ಅರಾವಳಿ ಪರ್ವತದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ಹರಡಿದೆ. ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿಂದ ಪೂರ್ವದಲ್ಲಿ 'ಜಾರ್ಖಂಡ್'ನ ರಾಜಮಹಲ್ ಬೆಟ್ಟಗಳವರೆಗೆ ಸುಮಾರು 1400 ಕಿ.ಮೀ ಅಗಲವಾಗಿದೆ. ಈ ಪರ್ಯಾಯ ಪ್ರಸ್ಥಭೂಮಿಯು ತ್ರಿಕೋನಾಕೃತಿಯಲ್ಲಿದ್ದು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿದೆ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಪೂರ್ವದಲ್ಲಿ ಬಂಗಾಳಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳನ್ನು ಇದು ಒಳಗೊಂಡಿದೆ

ಈ ಪ್ರಸ್ಥಭೂಮಿಯ ಉತ್ತರಭಾಗದಲ್ಲಿ ಪ್ರಮುಖವಾಗಿ ವಿಂಧ್ಯ ಪರ್ವತಗಳು, ಸಾತ್ಪುರಾ ಬೆಟ್ಟ, ಅರಾವಳಿ ಬೆಟ್ಟಗಳು, ಮಾಳ್ವ ಪ್ರಸ್ಥಭೂಮಿಗಳಿದ್ದು ಇವುಗಳ ಮಧ್ಯದಲ್ಲಿ ನರ್ಮದಾ ಮತ್ತು ತಪತಿ ನದಿ ಹಾಗೂ ದಾಮೋದರ ನದಿಗಳಲ್ಲದೇ ಅನೇಕ ಚಿಕ್ಕ ನದಿಗಳು ಹರಿಯುತ್ತವೆ. ಇವೆಲ್ಲವುಗಳನ್ನು ಕೇಂದ್ರ ಪ್ರಸ್ಥಭೂಮಿ ಎನ್ನುವರು. ಇವುಗಳ ದಕ್ಷಿಣದಲ್ಲಿ ದಖನ್ ಪ್ರಸ್ಥಭೂಮಿಯಿದ್ದು, ಮಹಾದೇವ, ಮೈಕಲ್ ಶ್ರೇಣಿ, ಅಮರ ಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು ಇದರ ಉತ್ತರದಲ್ಲಿವೆ. ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಇವುಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಸಹ್ಯಾದ್ರಿ ಎಂದು ಕರೆಯುತ್ತಾರೆ.

ಅಣ್ಣಾಮಲೈ ಸರಣಿಯ ಆನೈಮುಡಿ ಶಿಖರ ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಪ್ರದೇಶವಾಗಿದೆ.

ದಖನ್ ಪ್ರಸ್ಥಭೂಮಿಯ ಪೂರ್ವಕ್ಕೆ ಪೂರ್ವಘಟ್ಟಗಳಿವೆ. ಅವು ಪಶ್ಚಿಮ ಘಟ್ಟಗಳನ್ನು ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ. ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ ಮತ್ತು ನಿರಂತರವಾಗಿಯೂ ಇಲ್ಲ. ಆರ್ಮಕೊಂಡ ಮತ್ತು ಮಹೇಂದ್ರಗಿರಿ ಇಲ್ಲಿರುವ ಎತ್ತರವಾದ ಶಿಖರಗಳು. ಈ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

43) ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಈ ಹೇಳಿಕೆಯನ್ನು ಸಮರ್ಥಿಸಿ
ಉತ್ತರ:– ನಿಜ! ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

44) ಕರಾವಳಿಯ ಬಗ್ಗೆ ಬರೆಯಿರಿ
ಉತ್ತರ:– ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಪಶ್ಚಿಮ ಕರಾವಳಿಯು ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿ ಭೂಶಿರದವರೆಗೆ 1500 ಕಿ.ಮೀ.ಗಳಷ್ಟು ಉದ್ದವಾಗಿದೆ. ಇದನ್ನು ಕೇರಳದಲ್ಲಿ ಮಲಬಾರ್ ತೀರ, ಕರ್ನಾಟಕದಲ್ಲಿ ಕರ್ನಾಟಕ ಅಥವಾ ಕೆನರಾ ತೀರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಕೊಂಕಣ ತೀರ ಮತ್ತು ಗುಜರಾತಿನಲ್ಲಿ ಗುಜರಾತ್ ತೀರ ಎಂದು ವಿಂಗಡಸಲಾಗಿದೆ.

ಮುಂಬೈ, ಮರ್ಮಗೋವಾ, ಕೊಚ್ಚಿನ್, ಕಾಂಡ್ಲಾ, ಕಾರವಾರ, ಮಂಗಳೂರು ಇಲ್ಲಿನ ಮುಖ್ಯ ಬಂದರುಗಳಾಗಿವೆ.

ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗಂಗಾ ನದಿ ಮುಖಜ ಭೂಮಿಯವರೆಗೆ ಪೂರ್ವ ಘಟ್ಟಗಳು ಹಬ್ಬಿವೆ. ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಪೂರ್ವ ಕರಾವಳಿ ಮೈದಾನವಿದೆ. ಈ ಕರಾವಳಿಯ ಮೈದಾನವು ಹೆಚ್ಚು ಅಗಲ ಮತ್ತು ಒಂದೇ ರೀತಿ ಸಮತಟ್ಟಾಗಿದೆ. ಇದು ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. ಪೂರ್ವ ತೀರದಲ್ಲಿ ಸಮುದ್ರದ ಉಪ್ಪು ನೀರಿನಿಂದ ನಿರ್ಮಿತವಾದ ಕೆಲವು ಸರೋವರ ಅಥವಾ ಲಗೂನ್‌ಗಳಿವೆ. ಇವುಗಳಲ್ಲಿ ಒಡಿಸ್ಸಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು ಮುಖ್ಯವಾಗಿವೆ. ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಂದು ವಿಂಗಡಿಸಲಾಗಿದೆ.

45) ಭಾರತದ ದಕ್ಷಿಣದ ತುತ್ತತುದಿ ಯಾವುದು?
ಉತ್ತರ:– ನಿಕೋಬಾರ್ ದ್ವೀಪದಲ್ಲಿ ಇಂದಿರಾ ಪಾಯಿಂಟ್ ಭಾರತದ ದಕ್ಷಿಣದ ತುತ್ತತುದಿಯಾಗಿದೆ.

46) ಬಿಟ್ಟ ಸ್ಥಳ ತುಂಬಿ

1) **ಇಂಡಿಯಾ ಎಂಬ ಹೆಸರು ...... ನದಿಯಿಂದ ಬಳಕೆಗೆ ಬಂದಿದೆ.**
ಉತ್ತರ:– ಸಿಂಧೂ

2) **ಭಾರತವು ಒಟ್ಟು .... ಚದರ ಕಿ.ಮೀಗಳಷ್ಟು ವಿಸ್ತಾರವಾಗಿದೆ.**
ಉತ್ತರ:– 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DETERMINANTS

Applications of simultaneous linear equations

(……..Contd)

$$\therefore \text{adj } A = \begin{bmatrix} -112 & 96 & 0 \\ 15 & -14 & -1 \\ 1 & -2 & 1 \end{bmatrix}'$$

$$= \begin{bmatrix} -112 & 15 & 1 \\ 96 & -14 & -2 \\ 0 & -1 & 1 \end{bmatrix}$$

$$\therefore A^{-1} = \frac{1}{|A|}(\text{adj } A) = -\frac{1}{16}\begin{bmatrix} -112 & 15 & 1 \\ 96 & -14 & -2 \\ 0 & -1 & 1 \end{bmatrix}$$

Hence, the solution is given by

$$X = A^{-1}B$$

$$= -\frac{1}{16}\begin{bmatrix} -112 & 15 & 1 \\ 96 & -14 & -2 \\ 0 & -1 & 1 \end{bmatrix}\begin{bmatrix} 5000 \\ 35800 \\ 7000 \end{bmatrix}$$

$$= -\frac{1}{16}\begin{bmatrix} -560000+537000+7000 \\ 480000-501200-14000 \\ 0-35800+7000 \end{bmatrix}$$

$$\text{i, e.,} \begin{bmatrix} x \\ y \\ z \end{bmatrix} = \begin{bmatrix} 1000 \\ 2200 \\ 1800 \end{bmatrix}$$

Hence, $x = 1000, y = 2200$ and $z = 1800$

∴ The three investments are of Rs. 1000, Rs. 2200 and Rs. 1800 respectively.

Multiple Questions

1) If A = kB where A and B are square matrices of order n, then |A| =

(a) k|B| (b) k ^ ⁿ|B|
(c) k ^ ⁽ⁿ ⁻ ¹⁾|B| (d) nk[B]

Ans: (b) k ^ ⁿ|B|

3. If $\begin{bmatrix} 3 & x \\ x & 1 \end{bmatrix}' = \begin{bmatrix} 3 & 2 \\ 4 & 1 \end{bmatrix}'$ then x is equal to …….

(a) 2 (b) 4
(c) 8 d) $\pm 2\sqrt{2}$

Ans: d) $\pm 2\sqrt{2}$

4. If $\begin{bmatrix} 2x & 4 \\ 6 & x \end{bmatrix}' = \begin{bmatrix} 2 & 4 \\ 5 & 1 \end{bmatrix}'$ then value of x is……….

(a) $\sqrt{3}$ (b) $\pm\sqrt{3}$
(C) $\pm\sqrt{6}$ (d) $\sqrt{6}$

Ans:- (b) $\pm\sqrt{3}$

5. If A is square matrix of order 3 x 3 , then [kA] is equal to

(a) |kA| (b) $k^{2}|A|$
(c) $k^{2}|A|$ (d) 3 k|A|

Ans:- (c) $k^{2}|A|$

* * * * * * *

Chapter: 5

DIFFERENTIABILITY

1) What is the derivative of a constant?
Ans:- The Derivative of a constant is zero.

$$\left[\frac{d}{dy}(\text{constant}) = 0\right]$$

2) What is the Derivative of a product of a constant and a function?
Ans:- Derivative of a product of a constant and a function is given by -

$$\left[\frac{d}{dy}(\text{constant} \times \text{function}) = \text{constant} \times \frac{d}{dx}(\text{function})\right]$$

3) What is the Derivative of the sum of two functions?
Ans:- Derivative of the sum of 2 functions is -

$$\frac{d}{dx}(u+v) = \frac{du}{dx} + \frac{dv}{dx}$$

4) What is the Derivative of the difference of two functions?
Ans:- Derivative of difference of 2 functions is-

$$\frac{d}{dx}(u-v) = \frac{du}{dx} - \frac{dv}{dx}$$

5) What is the Derivative of the product of two functions?
Ans:-Derivative of the product of 2 functions is-

$$\left[(1^{st}\text{ function}).\frac{d}{dx}(2^{nd}\text{ function}) + (2^{nd}\text{ function}).\frac{d}{dx}(1^{st}\text{ function})\right]$$

$$\frac{d}{dx}(uv) = u.\frac{du}{dx} + v.\frac{dv}{dx}$$

6) What is the Derivative of the quotient of two functions?
Ans:- Derivative of the quotient of two functions is given by (Quotient formula) -

$$\frac{d}{dx}\left(\frac{u}{v}\right) = \frac{v.\frac{du}{dx} - u.\frac{dv}{dx}}{v^2}$$

$$\Rightarrow \frac{\left[(\text{Dino min ator})\frac{du}{dx}(\text{Numerator}) - (\text{Numerator})\frac{dv}{dx}(\text{Dino min ator})\right]}{(\text{Dino min ator})^2}$$

ಚಿಟಿಕೆ ಸುದ್ದಿ

ನೀರಿನಲ್ಲಿ ಮುಳುಗಿ ಮೂವರು ನರ್ಸಿಂಗ್ ವಿದ್ಯಾರ್ಥಿಗಳು ಸಾವು

ಮೈಸೂರು: ತಾಲ್ಲೂಕಿನ ಮೀನಾಕ್ಷಿಪುರದ ಬಳಿ ಕೃಷ್ಣರಾಜಸಾಗರ (ಕೆಆರ್‌ಎಸ್) ಹಿನ್ನೀರಿಗೆ ಇಳಿದಿದ್ದ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಮಿಮ್ಸ್) ಮೂವರು ನರ್ಸಿಂಗ್ ವಿದ್ಯಾರ್ಥಿಗಳು ಮುಳುಗಿ ಮೃತಪಟ್ಟರು.

ಹಾವೇರಿಯ ಕೃಷ್ಣ (21), ಪಿರಿಯಾಪಟ್ಟಣ ತಾಲ್ಲೂಕು ಅನಿವಾಳು ಗ್ರಾಮದ ಪ್ರಶಾಂತ್ (21) ಹಾಗೂ ಚಾಮರಾಜನಗರ ಜಿಲ್ಲೆ ಸಂತೇಮರಳ್ಳಿಯ ಸಿದ್ದೇಶ್ (22) ಮೃತರು. ಮೂವರೂ 2ನೇ ವರ್ಷದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಎಂದು ಇಲವಾಲ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಮಧ್ಯಾಹ್ನ 1.30ರ ಸುಮಾರಿಗೆ ನೀರಿಗೆ ಇಳಿದಿದ್ದು, ಈಜು ಬಾರದೇ ಮುಳುಗಿದ್ದಾರೆ. ಮುಳುಗುತಜ್ಞರ ನೆರವಿನಿಂದ ಶವಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗಾಗಿ ಕೆ.ಆರ್.ಆಸ್ಪತ್ರೆಗೆ ಕಳುಹಿಸಲಾಗಿದೆ’ ಎಂದು ಹೇಳಿದ್ದಾರೆ.

ಕಾರವಾರದಲ್ಲಿ ಕಾರಿನ ಮೇಲೆ ದೊಡ್ಡ ಗಾತ್ರದ ಮರ ಉರುಳಿ ಬಿದ್ದು ಜಖಂಗೊಂಡಿರುವುದು

ಕಾರಿನ ಮೇಲೆ ಮರ ಬಿದ್ದು ಮಹಿಳೆ ಸಾವು

ಕಾರವಾರ: ಇಲ್ಲಿನ ಪಿಕಳೆ ರಸ್ತೆಯಲ್ಲಿ ಭಾನುವಾರ ಬೃಹತ್ ಮರವು ಕಾರಿನ ಮೇಲೆ ಬಿದ್ದು, ಅದರಲ್ಲಿದ್ದ ಲಕ್ಷ್ಮಿ ನಾಮ್ನೇಕರ್ (56) ಮೃತಪಟ್ಟರು.

ಸೊಸೆಯನ್ನು ಆರೋಗ್ಯ ತಪಾಸಣೆಗೆ ಇಲ್ಲಿನ ಖಾಸಗಿ ಆಸ್ಪತ್ರೆಗೆ ಕರೆತಂದಿದ್ದಾಗ, ಆಸ್ಪತ್ರೆ ಆವರಣದಲ್ಲಿದ್ದ 100 ವರ್ಷ ಹಳೆಯ ಹುಣಸೆ ಮರ ಉರುಳಿದೆ. ಕಾರು ಜಖಂಗೊಂಡಿತ್ತು. ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಮಹಿಳೆ ಕಾರಿನಲ್ಲಿ ಕೆಲ ಸಮಯ ಸಿಲುಕೊಂಡಿದ್ದರು. ಅಗ್ನಿಶಾಮಕ ದಳ, ನಗರಸಭೆ ಸಿಬ್ಬಂದಿ ಮರದ ಟೊಂಗೆ ತೆರವುಗೊಳಿಸಿ, ಮಹಿಳೆಯನ್ನು ಆಸ್ಪತ್ರೆಗೆ ಕರೆದೊಯ್ಯು ವಷ್ಟರಲ್ಲಿ ಅವರು ಸಾವನ್ನಪ್ಪಿದ್ದರು.

ಪತಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲು ಪತ್ರ

ಯಾದಗಿರಿ: ಫೋಟೊ ತೆಗೆಯುವ ನೆಪದಲ್ಲಿ ಗಂಡನನ್ನು ಕೃಷ್ಣಾ ನದಿಗೆ ತಳ್ಳಿದ್ದ ಆರೋಪ ಹೊತ್ತಿರುವ ಪತ್ನಿ ಅಪ್ರಾಪ್ತೆ. ಆಕೆಯ ಪತಿ, ಸಂಬಂಧಪಟ್ಟವರ ವಿರುದ್ಧ ಬಾಲ್ಯವಿವಾಹ, ಪೋಕ್ಸೊ ಅಡಿ ಪ್ರಕರಣ ದಾಖಲಿಸಲು ರಾಯಚೂರು ಡಿಸಿಪಿಒಗೆ ಪತ್ರ ಬರೆಯಲಾಗಿದೆ.

ರಾಯಚೂರು ತಾಲ್ಲೂಕಿನ ಗುರ್ಜಾಪುರ ಸಮೀಪದ ಕೃಷ್ಣಾ ನದಿಯ ಬ್ರಿಜ್ ಕಂ ಬ್ಯಾರೇಜ್ ಮೇಲೆ ಫೋಟೊ ತೆಗೆಸಿಕೊಳ್ಳುವಾಗ ಘಟನೆ ನಡೆದಿತ್ತು. ಶಕ್ತಿನಗರದ ತಾತಪ್ಪನನ್ನು ಆತನ ಪತ್ನಿ (ಯಾದಗಿರಿ ಜಿಲ್ಲೆ ಹುಣಸಗಿ ತಾಲ್ಲೂಕಿನ ನಿವಾಸಿ) ತಳ್ಳಿದ್ದಾರೆ ಎಂಬ ಆರೋಪವಿತ್ತು.

‘ಸಂಬಂಧಿಸಿದ ವಿಡಿಯೊ ಆಧರಿಸಿ ಸಂತ್ರಸ್ತೆಯ ಶಾಲಾ ದಾಖಲಾತಿ ಮಾಹಿತಿ ಕಲೆ ಹಾಕಿದಾಗ ಪತ್ನಿ ಅಪ್ರಾಪ್ತೆ ಎಂದು ಗೊತ್ತಾಗಿದೆ. 2025ರ ಏಪ್ರಿಲ್ 14ರಲ್ಲಿ ಶಕ್ತಿನಗರದ ಕಲ್ಯಾಣ ಮಂಟಪದಲ್ಲಿ ಮದುವೆಯಾಗಿದ್ದು, ಆಗ ಆಕೆಗೆ 15 ವರ್ಷ 8 ತಿಂಗಳು’ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಿರ್ಮಲಾ ಸುರಪುರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಾಲಕಿ ವಿವಾಹ ನಡೆದ ಸ್ಥಳವು ರಾಯಚೂರು ಜಿಲ್ಲಾ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ, ರಾಯಚೂರು ಡಿಸಿಪಿಒಗೆ ಪತ್ರ ಬರೆಯಲಾಗಿದೆ’ ಎಂದು ಮಾಹಿತಿ ನೀಡಿದರು.

40 ಕ್ವಿಂಟಲ್ ಅಕ್ಕಿ ವಶ ಮೂವರ ಬಂಧನ

ಶಿರಸಿ (ಉತ್ತರ ಕನ್ನಡ): ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದು, ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ.

ನರೇಬೈಲಿನ ಮಹ್ಮದ್ ಉಬೇದ ಮಹ್ಮದ್ ಸಲೀಂ ಜವಳಿ, ಇಸಳೂರಿನ ಸುನೀಲ ಮಹಾದೇವಪ್ಪ ನಡಗಿ, ಕಸ್ತೂರ ಬಾ ನಗರದ ಅಲ್ತಾಫ್ ರೆಹಮತ್ ಉಲ್ಲಾ ಬಂಧಿತರು. ಶಿರಸಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿ ಮಹ್ಮದ್ ಉಬೇದ ಮಹ್ಮದ್ ಸಲೀಂ ಜವಳಿ, ಪಡಿತರ ಚೀಟಿದಾರರಿಂದ ಕಡಿಮೆ ಬೆಲೆಗೆ ಖರೀದಿಸಿದ್ದ ಒಟ್ಟು 40 ಕ್ವಿಂಟಲ್ ಅಕ್ಕಿಯನ್ನು ತಮ್ಮ ಗಿರಣಿಯಲ್ಲಿ ಇಟ್ಟಿದ್ದರು. ಅದನ್ನು ಸುನೀಲ ಮಹಾದೇವಪ್ಪ ನಡಗಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಲು ಹುಬ್ಬಳ್ಳಿಯತ್ತ ಅಲ್ತಾಫ್ ರೆಹಮತ್ ಉಲ್ಲಾ ಜತೆಗೂಡಿ ಸಾಗಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅಂದಾಜು ₹1.36 ಲಕ್ಷ ಮೌಲ್ಯದ 40 ಕ್ವಿಂಟಲ್ ಪಡಿತರ ಅಕ್ಕಿ, ಸಾಗಣೆಗೆ ಬಳಸುತ್ತಿದ್ದ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಜೇನುಗೂಡಿಗೆ ‘ಬೀಟಲ್’ ಬಾಧೆ

ಬೆಂಗಳೂರು ಕೃಷಿ ವಿ.ವಿ ಜೇನು ಕೃಷಿ ವಿಜ್ಞಾನಿಗಳ ತಂಡದ ಸಮೀಕ್ಷೆ

• ಗಾಣಧಾಳು ಶ್ರೀಕಂಠ

ಬೆಂಗಳೂರು: ರಾಜ್ಯದ ಎರಡು ಜಿಲ್ಲೆಗಳಲ್ಲಿನ ಜೇನು ಗೂಡುಗಳಿಗೆ ‘ಸ್ಮಾಲ್ ಹೈವ್ ಬೀಟಲ್’ ಎಂಬ ಹೊಸ ಕೀಟ ದಾಳಿ ಮಾಡಿದ್ದು, ಇದರಿಂದ ಜೇನು ಸಾಕಣೆ ಉದ್ಯಮಕ್ಕೆ ದೊಡ್ಡಪೆಟ್ಟು ಬೀಳುವ ಸಾಧ್ಯತೆ ಇದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜೇನುಕೃಷಿ ವಿಜ್ಞಾನಿಗಳ ತಂಡ ನಡೆಸಿರುವ ಸಮೀಕ್ಷೆಯಲ್ಲಿ ತಿಳಿಸಿದೆ.

ಜೇನುಕೃಷಿ ವಿಭಾಗದ ವಿಜ್ಞಾನಿ ಕೆ.ಟಿ.ವಿಜಯಕುಮಾರ್ ಮತ್ತು ತಂಡ, ಒಂದು ವರ್ಷದಿಂದ ರಾಜ್ಯದ 13 ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಿದ್ದು, ಇದರಲ್ಲಿ ಎರಡು ಜಿಲ್ಲೆಗಳ ಆರು ಪ್ರದೇಶಗಳಲ್ಲಿರುವ ಜೇನುಗೂಡುಗಳಲ್ಲಿ ‘ಸ್ಮಾಲ್ ಹೈವ್ ಬೀಟಲ್’ ಬಾಧೆ ಕಂಡು ಬಂದಿದೆ.

ಬೆಂಗಳೂರಿನ ಪೀಣ್ಯ ಮತ್ತು ಕೃಷಿ ವಿಶ್ವವಿದ್ಯಾಲಯದಲ್ಲಿರುವ ಯುರೋಪಿಯನ್ ಜೇನು ಕುಟುಂಬಗಳಲ್ಲಿ (ಎಫಿಸ್ ಮೆಲ್ಲಿಫೆರಾ) ಹಾಗೂ ಮೈಸೂರು ಜಿಲ್ಲೆಯ ರಾಜನಗರ, ದೇವರಾಯಸೆಟ್ಟಿಪುರ, ಹೆಡಿಯಾಲ, ಚಿಲಕಹಳ್ಳಿ, ನಂಜನಗೂಡು ಮತ್ತು ಗಣೇಶಪುರದಲ್ಲಿರುವ ತುಡುವೆ ಜೇನು ಕುಟುಂಬಗಳಲ್ಲಿ (ಎಫಿಸ್ ಸೆರಾನಾ) ಈ ಕೀಟ ಬಾಧೆಯನ್ನು ವಿಜ್ಞಾನಿಗಳ ತಂಡ ಗುರುತಿಸಿದೆ.

ಸ್ಮಾಲ್ ಹೈವ್ ಬೀಟಲ್ ಕೀಟ ಬಾಧೆ ಬೇರೆ ಜಿಲ್ಲೆಗಳಿಗೆ ಹಬ್ಬದಂತೆ ತಡೆಯಬೇಕಿದೆ. ಈ ಕೀಟವನ್ನು ಹೇಗೆ ನಿರ್ವಹಣೆ ಮಾಡಬೇಕು ಎಂಬುದರ ಕುರಿತು ಸಂಶೋಧನೆ ನಡೆಸುತ್ತಿದ್ದೇವೆ
ಕೆ.ಟಿ.ವಿಜಯಕುಮಾರ್, ವಿಜ್ಞಾನಿ, ಜೇನುಕೃಷಿ ವಿಭಾಗ, ಜಿಕೆವಿಕೆ, ಬೆಂಗಳೂರು

ಸಮೀಕ್ಷೆಗೊಳಪಡಿಸಿದ 480 ತುಡುವೆ ಜೇನು ಕುಟುಂಬಗಳಲ್ಲಿ, ಶೇ 58.33 ಕೀಟಬಾಧೆಯನ್ನು ಗುರುತಿಸಲಾಗಿದೆ. ಕೀಟಬಾಧೆಯಿಂದಾಗಿ ಈ ಆರು ಪ್ರದೇಶಗಳಲ್ಲಿ ಒಂದು ತಿಂಗಳಲ್ಲಿ 280 ತುಡುವೆ ಜೇನು ಕುಟುಂಬಗಳು ಗೂಡು ತೊರೆದಿರುವುದನ್ನು ಸಮೀಕ್ಷೆ ವೇಳೆ ಗುರುತಿಸಲಾಗಿದೆ. ಇದು ಆತಂಕಕಾರಿ ಬೆಳವಣಿಗೆ’ ಎಂದು ವಿಜ್ಞಾನಿಗಳು ವರದಿಯಲ್ಲಿ ತಿಳಿಸಿದ್ದಾರೆ.

ಜೇನು ಸಾಕಣೆ ಹೆಚ್ಚಾಗಿರುವ ಮಲೆನಾಡು ಮತ್ತು ಕರಾವಳಿ ಭಾಗಕ್ಕೆ ‘ಬೀಟಲ್’ ಕಾಟ ವಿಸ್ತರಿಸಿದರೆ ಬಹುದೊಡ್ಡ ಆರ್ಥಿಕ ನಷ್ಟ ಉಂಟಾಗುತ್ತದೆ. ಭಾರತದ ಜೇನು ಉದ್ಯಮದ ಆಧಾರಸ್ತಂಭವಾಗಿರುವ ಮೆಲ್ಲಿಫೆರಾ ಮತ್ತು ತುಡುವೆ ಜೇನು ಪ್ರಭೇದಗಳ ಮೇಲೆ ಕೀಟ ಹೆಚ್ಚು ಹಾನಿ ಮಾಡುತ್ತಿರುವುದರಿಂದ, ದೇಶದ ಜೇನು ಉತ್ಪಾದನೆಯ ಮೇಲೆ ಹೆಚ್ಚು ಪೆಟ್ಟು ಬೀಳುತ್ತದೆ ಎಂದು ವಿಜ್ಞಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ವಿಜ್ಞಾನಿಗಳ ತಂಡ ಈ ಸಮೀಕ್ಷಾ ವರದಿಯನ್ನು ತೋಟಗಾರಿಕೆ ಇಲಾಖೆಗೆ ಸಲ್ಲಿಸಿದೆ. ವರದಿ ಸ್ವೀಕರಿಸಿರುವ ಇಲಾಖೆಯ ನಿರ್ದೇಶಕರು, ‘ಈ ಕೀಟ ಬಾಧೆ ಮತ್ತು ನಿರ್ವಹಣೆ ಕುರಿತು ಜೇನು ಕೃಷಿಕರು, ಜೇನು ಕೃಷಿ ಸಂಘ ಸಂಸ್ಥೆಗಳು, ಅನುಮೋದಿತ ಜೇನು ಕುಟುಂಬ ಮತ್ತು ಪೆಟ್ಟಿಗೆ ಸರಬರಾಜು ಮಾಡುವವರಿಗೆ ಮಾಹಿತಿ ನೀಡಿ. ಕೀಟ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಎಲ್ಲ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದ್ದಾರೆ.

ತುಡುವೆ ಜೇನು ಕುಟುಂಬದ ಎರಿಯ ಮೇಲೆ ‘ಸ್ಮಾಲ್ ಹೈವ್ ಬೀಟಲ್ ಕೀಟ’

ಕೀಟದ ಹಾವಳಿ

ಸ್ಮಾಲ್ ಹೈವ್ ಬೀಟಲ್ ಕೀಟಗಳು ಲಾರ್ವಾ ಹಂತದಲ್ಲಿದ್ದಾಗ ಇಡೀ ಜೇನು ಗೂಡನ್ನು ಆವರಿಸಿಕೊಳ್ಳುತ್ತವೆ. ಮೊದಲು ಜೇನು ತುಪ್ಪ ತಿನ್ನಲು ಶುರು ಮಾಡುತ್ತವೆ. ಅವುಗಳ ಬಾಯಿಯ ಭಾಗ ಬೆಳೆದ ನಂತರ ಮೇಣವನ್ನು ತಿನ್ನಲು ಪ್ರಾರಂಭಿಸುತ್ತವೆ. ಆಗ ಕೀಟಬಾಧೆ ತಾಳಲಾರದೇ ತುಡುವೆ ಜೇನುಗಳಾದರೆ ಗೂಡು ಬಿಟ್ಟು ಹೋಗುತ್ತವೆ, ಮೆಲ್ಲಿಫೆರಾ ನೊಣಗಳಾದರೆ ಜೇನುಪೆಟ್ಟಿಗೆಯಲ್ಲಿ ನಶಿಸುತ್ತವೆ. ಮರಿಹುಳುಗಳು ಜೇನುಗೂಡಿನ ಎರಿಗಳಲ್ಲಿ ವಿಶಿಷ್ಟವಾದ ಲೋಳೆಯನ್ನು ಸ್ರವಿಸಿ ತುಪ್ಪವನ್ನು ಹುಳಿಗೊಳಿಸಿ ಅದರ ಗುಣಮಟ್ಟವನ್ನು ಕುಗ್ಗಿಸುತ್ತವೆ.

ಸ್ಮಾಲ್ ಹೈವ್ ಬೀಟಲ್ ದುಂಬಿಯ ಚಿತ್ರ

ಜೇನು ಕೃಷಿಕರು ಏನು ಮಾಡಬೇಕು?

- ಸೋಂಕಿತ ಜೇನು ಕುಟುಂಬಗಳ ವರ್ಗಾವಣೆ ಹಾಗೂ ಖರೀದಿ (ವಿಶೇಷವಾಗಿ ಮೆಲ್ಲಿಫೆರಾ) ನಿರ್ಬಂಧಿಸಬೇಕು.
- ಎಲ್ಲಾ ಸೋಂಕಿತ ಜೇನುಗೂಡುಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಬೇಕು. ಸೋಂಕಿತ ಖಾಲಿ ಎರಿಗಳನ್ನು ಸುಟ್ಟು ಹಾಕಬೇಕು.

ಎಲ್ಲಿಂದ ಬಂದಿರಬಹುದು?

ಸ್ಮಾಲ್ ಹೈವ್ ಬೀಟಲ್ ಕೀಟವು, ಬಾಂಗ್ಲಾದೇಶದಿಂದ ಭಾರತಕ್ಕೆ ಬಂದಿರಬಹುದು. ಅಲ್ಲಿಂದ ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಆಂಧ್ರದ ಮೂಲಕ ಕರ್ನಾಟಕ ಪ್ರವೇಶಿಸಿರುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಶಂಕಿಸಿದ್ದಾರೆ. ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ತುಡುವೆ ಜೇನುಗೂಡಿನಲ್ಲಿ ಈ ಕೀಟಬಾಧೆ ಕಾಣಿಸಿದೆ.

10 ಸರ್ಕಾರಿ ನೌಕರಿ ಗಿಟ್ಟಿಸಿದ ಪ್ರಶಾಂತ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಇಂದಿನ ಪೈಪೋಟಿ ದಿನಗಳಲ್ಲಿ ಒಂದು ಸರ್ಕಾರಿ ನೌಕರಿ ಸಿಗುವುದೇ ಕಷ್ಟ. ಜಿಲ್ಲೆಯ ಅಥಣಿ ತಾಲ್ಲೂಕು ಐಗಳಿ ಗ್ರಾಮದ 26 ವರ್ಷದ ಪ್ರಶಾಂತ ಅಣ್ಣಾಸಾಬ ಹಿಪ್ಪರಗಿ 10 ನೌಕರಿ ಗಿಟ್ಟಿಸಿದ್ದಾರೆ.

ಸಹಕಾರ ಸಂಘಗಳ ಚಿಕ್ಕೋಡಿ ಉಪ ವಿಭಾಗದ ಸಹಾಯಕ ಉಪನಿಬಂಧಕರ ಕಚೇರಿಯಲ್ಲಿ ಒಂದು ವಾರದಿಂದ ಸಹಕಾರ ಸಂಘಗಳ ನಿರೀಕ್ಷಕರಾಗಿದ್ದಾರೆ.

ಇದೇ ವರ್ಷ ಎಂಎಸ್‌ಐಎಲ್‌ನಲ್ಲಿ ಪ್ರಥಮದರ್ಜೆ ಸಹಾಯಕ ಮತ್ತು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವಾಣಿಜ್ಯ ತೆರಿಗೆ ನಿರೀಕ್ಷಕರಾಗಿಯೂ ಆಯ್ಕೆಯಾಗಿದ್ದಾರೆ.

‘ನನಗೆ ಯಾವುದಾದರೂ ಇಲಾಖೆಯಲ್ಲಿ ಉತ್ತಮ ಹುದ್ದೆ ಪಡೆಯುವ ಆಸೆ ಇತ್ತು. ನನ್ನ ವಿದ್ಯಾರ್ಹತೆಗೆ ತಕ್ಕಂತೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾದೆ. ಅವುಗಳಲ್ಲಿ 10 ಹುದ್ದೆಗಳಿಗೆ ಆಯ್ಕೆಯಾದೆ’ ಎಂದು ಪ್ರಶಾಂತ ಹಿಪ್ಪರಗಿ ‘ಪ್ರಜಾವಾಣಿ’ಗೆ ತಿಳಿಸಿದರು. ‘ಸಾರಿಗೆ ಸಂಸ್ಥೆಯ ಅಥಣಿ ಘಟಕದಲ್ಲಿ ನಿರ್ವಾಹಕ ರಾಗಿರುವ ತಂದೆ ನನ್ನನ್ನು, ನನ್ನ ಸಹೋದರ ಮತ್ತು ಸಹೋದರಿಯನ್ನು ಕಷ್ಟಪಟ್ಟು ಓದಿಸಿದರು. ಯೋಜನಾಬದ್ಧವಾಗಿ ಅಭ್ಯಾಸ ಮಾಡಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದೆ. ಯಶಸ್ಸು ಸಿಕ್ಕಿತು’ ಎಂದು ಅವರು ತಿಳಿಸಿದರು. ಐಗಳಿಯಲ್ಲಿ ಶಾಲಾ ಶಿಕ್ಷಣ ಪೂರೈಸಿದ ಪ್ರಶಾಂತ ಅವರು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಯಲ್ಲಟ್ಟಿಯಲ್ಲಿ ಪಿಯು ಶಿಕ್ಷಣ ಪೂರ್ಣಗೊಳಿಸಿದರು. ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಬಿ.ಎಸ್ಸಿ (ಕೃಷಿ) ಪದವಿ ಪಡೆದಿದ್ದಾರೆ.

ವಾಣಿಜ್ಯ ತೆರಿಗೆ ನಿರೀಕ್ಷಕ ಹುದ್ದೆಗೆ ಆಯ್ಕೆಯಾಗಿದ್ದು, ಶೀಘ್ರವೇ ವರದಿ ಮಾಡಿಕೊಳ್ಳುವೆ. ಕೆಎಎಸ್ ಅಧಿಕಾರಿ ಆಗುವುದು ನನ್ನ ಕನಸು. ಅಲ್ಲಿ ಕೆಲಸ ಮಾಡುತ್ತಲೇ ಅದಕ್ಕಾಗಿ ಪ್ರಯತ್ನಿಸುವೆ
ಪ್ರಶಾಂತ ಹಿಪ್ಪರಗಿ, ಸಾಧಕ

ಯಾವ ಹುದ್ದೆಗಳಿಗೆ ಆಯ್ಕೆ?

2019ರಲ್ಲಿ ಕೆಎಸ್‌ಆರ್‌ಪಿಯಲ್ಲಿ ಪೊಲೀಸ್ ಕಾನ್‌ಸ್ಟೆಬಲ್, 2022ರಲ್ಲಿ ಅಗ್ನಿಶಾಮಕ ಇಲಾಖೆಯಲ್ಲಿ ಫೈರ್‌ಮನ್, 2024ರಲ್ಲಿ ಸಿಎಆರ್ ಪೊಲೀಸ್ ಕಾನ್‌ಸ್ಟೆಬಲ್, ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್, ಆಹಾರ ನಾಗರಿಕ ಸರಬರಾಜು ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕ, ಆಹಾರ ನಾಗರಿಕ ಸರಬರಾಜು ಇಲಾಖೆಯಲ್ಲಿ ಪ್ರಥಮದರ್ಜೆ ಸಹಾಯಕ, ಕಾರ್ಮಿಕ ಇಲಾಖೆಯಲ್ಲಿ ಪ್ರಥಮದರ್ಜೆ ಸಹಾಯಕರಾಗಿ ಆಯ್ಕೆಯಾದರು.

‘ಧರ್ಮಸ್ಥಳ’ ಪ್ರಕರಣಕ್ಕೆ ಎಸ್‌ಐಟಿ

ಒಂದನೇ ಪುಟದಿಂದ...

ತನಿಖೆಗೆ ಸಂಬಂಧಿಸಿದ ಪ್ರಗತಿಯನ್ನು ಪೊಲೀಸ್ ಮಹಾನಿರ್ದೇಶಕರಿಗೆ ಆಗಿಂದಾಗ್ಗೆ ವರದಿ ಮಾಡಬೇಕು. ಅಲ್ಲದೆ, ಎಲ್ಲ ಪ್ರಕರಣಗಳ ಸಮಗ್ರ ತನಿಖೆ ನಡೆಸಿ ಆದಷ್ಟು ಬೇಗ ವರದಿಯನ್ನು ಪೊಲೀಸ್ ಮಹಾನಿರ್ದೇಶಕರ ಮೂಲಕ ಸರ್ಕಾರಕ್ಕೆ ಸಲ್ಲಿಸಬೇಕು ಎಂದೂ ಗೃಹ ಇಲಾಖೆ ನಿರ್ದೇಶನ ನೀಡಿದೆ.

ಏನಿದು ಪ್ರಕರಣ?: ‘ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದಿನಿಂದ ಹಲವಾರು ಅಪರಾಧ ಕೃತ್ಯಗಳು ನಡೆದಿವೆ. ನನಗೆ ಜೀವಬೆದರಿಕೆ ಒಡ್ಡಿ, ಈ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡಿಸಿದ್ದಾರೆ’ ಎಂದು ವ್ಯಕ್ತಿಯೊಬ್ಬರು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಹಾಗೂ ಧರ್ಮಸ್ಥಳ ಪೊಲೀಸ್ ಠಾಣೆಗೆ ಜುಲೈ 3ರಂದು ದೂರು ನೀಡಿದ್ದರು. ಈ ಬಗ್ಗೆ ಭಾರತೀಯ ನ್ಯಾಯ ಸಂಹಿತೆಯ ಕಲಂ 211 (ಎ) ಅಡಿಯಲ್ಲಿ ಧರ್ಮಸ್ಥಳ ಠಾಣೆಯಲ್ಲಿ ಜುಲೈ 4ರಂದು ಪ್ರಕರಣ ದಾಖಲಾಗಿತ್ತು.

ಜುಲೈ 11ರಂದು ವಕೀಲರ ಜತೆ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಅದೇ ದೂರುದಾರ, ಧರ್ಮಸ್ಥಳ ಭಾಗದಲ್ಲಿ ನೂರಾರು ಮೃತದೇಹಗಳನ್ನು ದಫನ ಮಾಡಿರುವುದಾಗಿ ಹೇಳಿಕೆ ನೀಡಿದ್ದರು. ಕಳೆದ ಎರಡು ದಶಕಗಳಲ್ಲಿ ಅತ್ಯಾಚಾರ, ಹತ್ಯೆ ಮತ್ತು ದೌರ್ಜನ್ಯಗಳು ಈ ಭಾಗದಲ್ಲಿ ನಡೆದಿವೆ ಎಂದೂ ಹೇಳಿಕೆ ದಾಖಲಿಸಿದ್ದರು.

ಸಮಗ್ರ ತನಿಖೆಗೆ ಒತ್ತಡ: ಧರ್ಮಸ್ಥಳ ಭಾಗದಲ್ಲಿ ನೂರಾರು ಶವಗಳನ್ನು ಹೂತಿರುವುದಾಗಿ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ನೀಡಿದ್ದ ಹೇಳಿಕೆ ಮತ್ತು ಮನುಷ್ಯರೊಬ್ಬರ ತಲೆ ಬುರುಡೆ ದೊರಕಿದ ಸುದ್ದಿ ಹಾಗೂ ನಾಪತ್ತೆಯಾದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರ ಕುಟುಂಬದವರ ಹೇಳಿಕೆ ಮಾಧ್ಯಮಗಳಲ್ಲಿ ಪ್ರಸಾರವಾಗಿರುವುದನ್ನು ಉಲ್ಲೇಖಿಸಿ ರಾಜ್ಯ ಮಹಿಳಾ ಆಯೋಗವು ಸರ್ಕಾರಕ್ಕೆ ಪತ್ರ ಬರೆದಿತ್ತು. ಕಳೆದ 20 ವರ್ಷಗಳಿಂದ ನಡೆದಿವೆ ಎನ್ನಲಾದ ಹಲವು ಮಹಿಳೆಯರು ಮತ್ತು ವಿದ್ಯಾರ್ಥಿಗಳ ಮೇಲಿನ ಗಂಭೀರ ಸ್ವರೂಪದ ದೌರ್ಜನ್ಯ, ಹತ್ಯೆ, ಅತ್ಯಾಚಾರ, ಅಸ್ವಾಭಾವಿಕ ಸಾವು ಮತ್ತು ನಾಪತ್ತೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆಗೆ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಬೇಕು ಎಂದೂ ಆಯೋಗ ಪತ್ರದಲ್ಲಿ ಆಗ್ರಹಿಸಿತ್ತು.

‘ಧರ್ಮಸ್ಥಳ ಪ್ರದೇಶದಲ್ಲಿ ನೂರಾರು ಅತ್ಯಾಚಾರ, ಹತ್ಯೆ ಮತ್ತು ಕಾಡಿನಲ್ಲಿ ಶವಗಳನ್ನು ಹೂಳಿರುವ ಆರೋಪದ ತನಿಖೆಗೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಬೇಕು ಎಂದು ಸಿ.ಎಸ್. ದ್ವಾರಕನಾಥ್, ಎಸ್. ಬಾಲನ್ ನೇತೃತ್ವದಲ್ಲಿ ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ‘ಒಬ್ಬ ಸಾಕ್ಷಿಯು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರಾಗಿ, ಕಳೇಬರದ ಮಾಹಿತಿಯನ್ನು ಸಲ್ಲಿಸಿದ್ದಾನೆ. ಜತೆಗೆ ನೂರಾರು ಶವಗಳು ಇರುವ ಸ್ಥಳವನ್ನು ತೋರಿಸುತ್ತೇನೆ ಎಂದಿದ್ದಾನೆ. ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ ನಂತರವಷ್ಟೇ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ, ಶವಗಳನ್ನು ಹುಡುಕಿ ಹೊರತೆಗೆಯುವ ಕೆಲಸ ಇನ್ನೂ ಆರಂಭವಾಗಿಲ್ಲ. ಈ ಗಂಭೀರ ವಿಷಯದತ್ತ ಗಮನ ಹರಿಸಬೇಕು’ ಎಂದೂ ಕೋರಿದ್ದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರು, ‘ಈ ಪ್ರಕರಣದಲ್ಲಿ ಫಿರ್ಯಾದುದಾರ ಸಾಕ್ಷಿಗೆ ರಾಜ್ಯ ಸರ್ಕಾರ ತಕ್ಷಣವೇ ಭದ್ರತೆ ಒದಗಿಸಬೇಕು. ಆರೋಪಗಳ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು’ ಎಂದು ಒತ್ತಾಯಿಸಿದ್ದರು. ‘ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ ನಂತರವೂ, ತನಿಖೆ ಸರಿಯಾಗಿ ಆಗುತ್ತಿಲ್ಲ. ಶವಗಳನ್ನು ಎಲ್ಲಿ ಹೂಳಲಾಗಿದೆ ಎಂಬುದನ್ನು ಖಾಲಿ ಹಾಳೆಯಲ್ಲಿ ಗುರುತು ಮಾಡಿಕೊಡು ಎಂದು ಪೊಲೀಸರು ಫಿರ್ಯಾದುದಾರ ಸಾಕ್ಷಿಯ ಮೇಲೆ ಒತ್ತಡ ಹೇರುತ್ತಿದ್ದಾರೆ. ಆತ ನೀಡಿರುವ ಹೇಳಿಕೆಗಳು ಆಯ್ದ ಮಾಧ್ಯಮಗಳಿಗೆ ಸೋರಿಕೆಯಾಗುತ್ತಿವೆ’ ಎಂದು ಕಳವಳ ವ್ಯಕ್ತಪಡಿಸಿದ್ದರು.

‘ಮುಚ್ಚಿಟ್ಟುಕೊಳ್ಳುವಂಥದ್ದು ಏನೂ ಇಲ್ಲ’

ಒಂದನೇ ಪುಟದಿಂದ...

‘ಈ ಮಧ್ಯೆ ವೈಯಕ್ತಿಕವಾಗಿ ಬೇರೆ ಬೇರೆ ರೀತಿಯಲ್ಲಿ ಮುಖ್ಯಮಂತ್ರಿ ಮತ್ತು ನನ್ನ ಬಗ್ಗೆ ಕೆಲವರು ಏನೇನೊ ಮಾತನಾಡಿದ್ದಾರೆ. ಎಲ್ಲ ಟೀಕೆಗಳನ್ನು ಸಹಿಸಿಕೊಂಡಿದ್ದೇವೆ’ ಎಂದರು.

‘ಮುಖ್ಯಮಂತ್ರಿ, ನಾನು ಮತ್ತು ಪೊಲೀಸ್ ಮಹಾನಿರ್ದೇಶಕರು ಚರ್ಚಿಸಿ ಎಸ್‌ಐಟಿ ರಚಿಸಿದ್ದೇವೆ. ಬಂದಿರುವ ದೂರುಗಳ ಬಗ್ಗೆ ತನಿಖೆ ನಡೆಸುವಂತೆ ಸೂಚಿಸಿದ್ದೇವೆ. ಸಿಕ್ಕಿರುವುದು ತಲೆಬುರುಡೆಯೋ, ಕಾಲೋ, ಕೈಯೋ ಆ ಎಲ್ಲದರ ಬಗ್ಗೆ ಎಸ್‌ಐಟಿ ಅಧಿಕಾರಿಗಳು ತನಿಖೆ ಮಾಡಲಿದ್ದಾರೆ. ತನಿಖೆಗೆ ಕಾಲ ಮಿತಿ ನಿಗದಿ ಮಾಡಿಲ್ಲ. ಆದಷ್ಟು ಬೇಗ ಸರ್ಕಾರಕ್ಕೆ ವರದಿ ಕೊಡುವಂತೆ ತಿಳಿಸಲಾಗಿದೆ’ ಎಂದರು.

‘ಈ ಪ್ರಕರಣದಲ್ಲಿ ಯಾರ ಒತ್ತಡಕ್ಕೂ ಮಣಿಯುವುದಿಲ್ಲ. ನ್ಯಾಯ ಸಿಗಬೇಕು ಎನ್ನುವ ಉದ್ದೇಶದಿಂದ ತನಿಖೆಗೆ ಆದೇಶಿಸಿದ್ದೇವೆ’ ಎಂದೂ ಹೇಳಿದರು.

‘ಶವ ಹೂಳಿದ’ ಹೇಳಿಕೆ ಮೂಡಿಸಿದ ಸದ್ದು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ‘ಶವ ಹೂಳಿದ’ ಪ್ರಕರಣದ ತನಿಖೆಗಾಗಿ ಸರ್ಕಾರವು ಎಸ್‌ಐಟಿ ರಚಿಸಿರುವುದನ್ನು ವಿವಿಧ ಸಂಘಟನೆಗಳು ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳದ ವಕ್ತಾರರೂ ಸ್ವಾಗತಿಸಿದ್ದಾರೆ.

‘ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ದೂರು ರಾಷ್ಟ್ರ ಮಟ್ಟದಲ್ಲಿ ವಾದ– ಪ್ರತಿವಾದಕ್ಕೆ ಕಾರಣವಾಗಿತ್ತು. ಪ್ರಕರಣದ ಪ್ರಾಮಾಣಿಕ ತನಿಖೆ ಆಗಬೇಕೆಂಬುದು ಎಲ್ಲರ ಬಯಕೆಯಾಗಿತ್ತು. ಆದ್ದರಿಂದ ಎಸ್‌ಐಟಿಗೆ ವಹಿಸಿರುವುದು ಉತ್ತಮ ನಿರ್ಧಾರ’ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ವಕ್ತಾರ ಕೆ. ಪಾರ್ಶ್ವನಾಥ್ ಜೈನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಧರ್ಮಸ್ಥಳದಲ್ಲಿ ಹಲವು ವರ್ಷಗಳ ಕಾಲ ಉದ್ಯೋಗಿಯಾಗಿದ್ದೆ’ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬರು, ‘ಧರ್ಮಸ್ಥಳ ಗ್ರಾಮದಲ್ಲಿ ಮಹಿಳೆಯರು, ಯುವತಿಯರು ಸೇರಿ ಅನೇಕ ಕೊಲೆಗಳು ನಡೆದಿದ್ದು, ಹತ್ಯೆಯಾದವರ ಪೈಕಿ ಹಲವರ ಮೃತ ದೇಹವನ್ನು ನಾನೇ ಹೂತುಹಾಕಿದ್ದೇನೆ’ ಎಂದು ಧರ್ಮಸ್ಥಳ ಪೊಲೀಸ್ ಠಾಣೆಗೆ ದೂರು ನೀಡಿ ನಂತರ ಇಬ್ಬರು ವಕೀಲರ ಜೊತೆ ಬೆಳ್ತಂಗಡಿ ನ್ಯಾಯಾಲಯಕ್ಕೆ ತೆರಳಿ ಹೇಳಿಕೆ ದಾಖಲಿಸಿದ್ದರು.

ಇದಾದ ಬಳಿಕ ಘಟನೆ ಬಗ್ಗೆ ತನಿಖೆಯಾಗಬೇಕು ಎಂದು ಹಲವು ಸಂಘಟನೆಗಳು, ಹೋರಾಟಗಾರರು ಪೊಲೀಸರ ಮೇಲೆ ಒತ್ತಡ ಹೇರಿದ್ದರು. ಹೇಳಿಕೆ ಕೊಟ್ಟ ವ್ಯಕ್ತಿಯ ಮಂಪರು ಪರೀಕ್ಷೆ, ಸುಳ್ಳುಪತ್ತೆ ಪರೀಕ್ಷೆ ಮತ್ತು ಬೆರಳಚ್ಚು ಸಂಗ್ರಹಕ್ಕೆ ಅನುಮತಿ ಕೋರಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ನ್ಯಾಯಾಧೀಶರ ನೇತೃತ್ವದ ತನಿಖೆ ನಮ್ಮ ಬೇಡಿಕೆ ಆಗಿತ್ತು. ಎಸ್‌ಐಟಿ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ. ಅಸಹಜ ಸಾವು ಪ್ರಕರಣಗಳ ಬಗ್ಗೆ ಜನರಲ್ಲಿ ಸಂದೇಹವೇ ಉಳಿಯದಂತೆ ಮಾಡಬೇಕು
ಫಾತಿಮಾ ನಸೀಮಾ, ವಿಮೆನ್ ಇಂಡಿಯಾ ಮೂವ್‌ಮೆಂಟ್ ಅಧ್ಯಕ್ಷೆ

ಈ ನಡುವೆ, ‘2003ರಲ್ಲಿ ಧರ್ಮಸ್ಥಳದಿಂದ ನಾಪತ್ತೆಯಾಗಿದ್ದ ತನ್ನ ಪುತ್ರಿ ಅನನ್ಯಾ ಭಟ್ ಬಗ್ಗೆ ಮಾಹಿತಿ ನೀಡಬೇಕು’ ಎಂದು ಮಹಿಳೆಯೊಬ್ಬರು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದರು. ರಾಜ್ಯ ಮಹಿಳಾ ಆಯೋಗವು ವಿಶೇಷ ತನಿಖಾ ತಂಡ ರಚಿಸುವಂತೆ ಸರ್ಕಾರವನ್ನು ಕೋರಿದರೆ, ವಿಮೆನ್ ಇಂಡಿಯಾ ಮೂವ್‌ಮೆಂಟ್, ಡಿವೈಎಫ್‌ಐ, ಎಸ್‌ಡಿಪಿಐ ಮುಂತಾದ ಸಂಘಟನೆಗಳು ತನಿಖೆಗೆ ಒತ್ತಾಯಿಸಿದ್ದವು.

ಸಿಪಿಎಂ, ಎಸ್‌ಡಿಪಿಐ ಸ್ವಾಗತ: ‘ಧರ್ಮಸ್ಥಳದಲ್ಲಿ ವರ್ಷಗಳ ಹಿಂದೆ ಪ್ರಕರಣಗಳು ನಡೆದಿದ್ದು ಸಾಕ್ಷ್ಯನಾಶ ಮಾಡಲಾಗಿದೆ. ಆದ್ದರಿಂದ ತನಿಖೆ ಕೂಲಂಕಷವಾಗಿ ನಡೆಯಬೇಕು. ಕಾಲವಿಳಂಬಕ್ಕೆ ಅವಕಾಶ ನೀಡದೆ ಸತ್ಯ ಬಯಲಾಗಬೇಕು’ ಎಂದು ಸಿಪಿಐ ಮತ್ತು ಡಿವೈಎಫ್‌ಐ ಪ್ರತ್ಯೇಕ ಪ್ರಕಟಣೆಯಲ್ಲಿ ಆಗ್ರಹಿಸಿವೆ. ‘ಎಸ್‌ಡಿಪಿಐ ಸೇರಿದಂತೆ ಹಲವು ಸಂಘಟನೆಗಳು ಒತ್ತಡ ಹೇರಿದ್ದರಿಂದ ಧರ್ಮಸ್ಥಳ ಪ್ರಕರಣವನ್ನು ಎಸ್‌ಐಟಿಗೆ ವಹಿಸಲಾಗಿದೆ. ಆದರೆ ಇದಕ್ಕೆ ಕಾನೂನಾತ್ಮಕ ಬಲವಿಲ್ಲ. ತನಿಖೆಯ ನೇತೃತ್ವವನ್ನು ಹೈಕೋರ್ಟ್ ನ್ಯಾಯಮೂರ್ತಿಗೆ ವಹಿಸಬೇಕು’ ಎಂದು ಎಸ್‌ಡಿಪಿಐ ಕರ್ನಾಟಕ ತನ್ನ ‘ಎಕ್ಸ್’ ಖಾತೆಯಲ್ಲಿ ಆಗ್ರಹಿಸಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

‘ನಿಷ್ಪಕ್ಷಪಾತ ತನಿಖೆ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳದ ಸುತ್ತಮುತ್ತ ನಡೆದಿದೆ ಎನ್ನಲಾದ ಅತ್ಯಾಚಾರ ಮತ್ತು ಹತ್ಯೆ ಪ್ರಕರಣಗಳ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವುದು ಸ್ವಾಗತಾರ್ಹ. ಎಸ್‌ಐಟಿಯು ನಿಷ್ಪಕ್ಷಪಾತ ತನಿಖೆ ನಡೆಸಿ, ಸತ್ಯವನ್ನು ಪತ್ತೆಮಾಡಬೇಕು’ ಎಂದು ‘ಜಾಗೃತ ನಾಗರಿಕರು ಕರ್ನಾಟಕ’ವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.

‘ಹಲವು ವರ್ಷಗಳ ಹಿಂದಿನ ಪ್ರಕರಣಗಳು ಇವಾಗಿರುವುದರಿಂದ ಕೂಲಂಕಷ ತನಿಖೆ ನಡೆಯಬೇಕಿದೆ. ಈ ಪ್ರಕರಣಗಳ ಬೆನ್ನು ಹತ್ತಿ ಹೋರಾಟ ಮತ್ತು ಪ್ರತಿಭಟನೆಗಳನ್ನು ಮಾಡಿದ ಸಂಘ, ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವಿಳಂಬ ವಿಲ್ಲದೇ ತನಿಖೆ ನಡೆಸಬೇಕು’ ಎಂದು ಆ ಪತ್ರದಲ್ಲಿ ಒತ್ತಾಯಿಸಲಾಗಿದೆ.

‘ಸೌಜನ್ಯ ಪ್ರಕರಣದಲ್ಲಿ, ಪ್ರಾಥಮಿಕ ಹಂತದಲ್ಲೇ ತನಿಖೆಯ ದಾರಿ ತಪ್ಪಿಸಲಾಗಿದೆ ಮತ್ತು ಸಾಕ್ಷ್ಯ ನಾಶ ಮಾಡಲಾಗಿದೆ ಎಂದು ನ್ಯಾಯಾಲಯವು ತೀರ್ಪಿನಲ್ಲಿ ಹೇಳಿದೆ. ಅದಕ್ಕೆ ಕಾರಣರಾದ ತನಿಖಾಧಿಕಾರಿಗಳನ್ನೂ ತೀವ್ರ ವಿಚಾರಣೆಗೆ ಒಳಪಡಿಸಬೇಕು’ ಎಂದು ಆಗ್ರಹಿಸಲಾಗಿದೆ.

ಸಾಹಿತಿಗಳು ಮತ್ತು ಸಾಮಾಜಿಕ ಹೋರಾಟಗಾರರಾದ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಡಾ. ವಿಜಯಾ, ಪ್ರೊ. ಎಸ್.ಜಿ.ಸಿದ್ದರಾಮಯ್ಯ, ವಿಮಲಾ. ಕೆ.ಎಸ್., ವಸುಂಧರಾ ಭೂಪತಿ, ಜಾಣಗೆರೆ ವೆಂಕಟರಾಮಯ್ಯ, ಬಂಜಗೆರೆ ಜಯಪ್ರಕಾಶ್ ಸೇರಿ ಹಲವರು ಪತ್ರಕ್ಕೆ ಸಹಿ ಮಾಡಿದ್ದಾರೆ.

ನಿಧನ ವಾರ್ತೆ

ಸದಾಶಿವ ಶೆಟ್ಟಿಗಾರ್

ಮಂಗಳೂರು: ಬಣ್ಣದ ವೇಷಧಾರಿಯಾಗಿ ಗಮನಸೆಳೆದಿದ್ದ ಯಕ್ಷಗಾನ ಕಲಾವಿದ, ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದ ಸಂಗಬೆಟ್ಟು ಗ್ರಾಮದ ಸಿದ್ದಕಟ್ಟೆ ಸದಾಶಿವ ಶೆಟ್ಟಿಗಾರ್ (60) ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ಕಟೀಲು 2ನೇ ಮೇಳದಲ್ಲಿ 2 ವರ್ಷ ನೇಪಥ್ಯ ಕಲಾವಿದರಾಗಿ ತಿರುಗಾಟ ಆರಂಭಿಸಿದ್ದ ಅವರು ಧರ್ಮಸ್ಥಳ ಮೇಳದಲ್ಲಿ 13 ವರ್ಷ ಹಾಗೂ ಕಟೀಲು 1ನೇ ಮೇಳದಲ್ಲಿ 8 ವರ್ಷ ಬಣ್ಣದ ವೇಷಧಾರಿಯಾಗಿ ತಿರುಗಾಟದಲ್ಲಿ ಪಾಲ್ಗೊಂಡಿದ್ದರು. ಹೊಸನಗರ, ಎಡನೀರು ಮತ್ತು ಹನುಮಗಿರಿ ಮೇಳಗಳಲ್ಲೂ ಪಾತ್ರ ಮಾಡಿದ್ದು ಈ ವರ್ಷ ನಿವೃತ್ತರಾಗಿದ್ದರು.

ಆಂಧ್ರಪ್ರದೇಶ, ತಮಿಳುನಾಡು, ದೆಹಲಿ, ಕೇರಳ, ಅಯೋಧ್ಯೆ, ಕಾಶಿ, ಕೋಲ್ಕತ್ತ, ಹರಿದ್ವಾರ ಮೊದಲಾದ ಕಡೆ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು. ಮಂಗಳೂರು ವಿಶ್ವವಿದ್ಯಾಲಯದ ಯಕ್ಷಮಂಗಳ ಪ್ರಶಸ್ತಿ, ಪೇಜಾವರ ಶ್ರೀಗಳ ಜನ್ಮದಿನದ ಅಂಗವಾಗಿ ನೀಡುವ ಶ್ರೀರಾಮ ವಿಠಲ ಪ್ರಶಸ್ತಿ, ಕಟೀಲು ಗೋಪಾಲಕೃಷ್ಣ ಆಸ್ರಣ್ಣ ಪ್ರಶಸ್ತಿ, ಕೀಲಾರು ಗೋಪಾಲಕೃಷ್ಣಯ್ಯ ಪ್ರಶಸ್ತಿ, ಅರಸಂಕಲ ಪ್ರಶಸ್ತಿಗೆ ಭಾಜನರಾಗಿದ್ದರು.

Rajiv Gandhi Institute of Petroleum Technology
(An Institution of National Importance established by Govt. of India)
Bengaluru Campus Website: www.rgipt.ac.in
विद्यारत्नम् महाद्धनम्

BBA ADMISSION NOTICE – 2025

RGIPT invites applications for admission to 3-year Full-Time residential Bachelor of Business Administration (BBA) programme for the academic session 2025-26 at Bengaluru Campus.

Eligibility: 10+2 with minimum 60% (55% for SC/ST/PwD)

Age: No Bar **Seats:** 60 (Reservation as per GoI Rules)

Admission Criteria: Through IPM Aptitude Test 2025/ JIPMAT 2025/ CUET-UG 2025 scores/ RGIPT's Entrance Test*.
*Candidates not having above score, may appear in RGIPT's Entrance Test-2025 on August 02, 2025 (Saturday).

Application Fee: For GEN/EWS/OBC candidates – Rs. 1200/-
For SC/ST/PwD/Female candidates – Rs. 600/-

For more details & apply online, visit:
https://rgipt.ac.in/en/page/bba-admission

Last date of submission of applications: 31-07-2025

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

ಸಂಖ್ಯೆ: ಕವಶಿಸಸ/ಕಾಅ–2/ಟೆಂಡರ್–11/2025–26 ದಿನಾಂಕ: 19.07.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೈಗೊಳ್ಳಲಿರುವ ಕಾಮಗಾರಿಗಳಿಗೆ ಅರ್ಹ/ ನುರಿತ **ತಾಂತ್ರಿಕ ಯೋಜನಾ ಸಮಾಲೋಚಕರು (PMC) (Indent No. KREIS/2023-24/SE0007/CALL-2, KREIS/2023-24/SE0010/CALL-2, KREIS/2023-24/SE0011/CALL-2, KREIS/2023-24/SE0016/CALL-2)** ರವರನ್ನು ನೇಮಿಸಲು ಇ–ಪೋರ್ಟಲ್ ಮುಖಾಂತರ ದಿನಾಂಕ: **19.07.2025ರಂದು** ಟೆಂಡರ್‌ಗಳನ್ನು ಕರೆಯಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 02.08.2025 ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕ.ವ.ಶಿ.ಸಂ.ಸಂಘ

DIPR/CP/YC/1931/2025-26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಸಿಂದಗಿ,
ಫೋನ್:08488–222826 ಇ–ಮೇಲ್:cmosindagi@gmail.com
ಸಂ:ತಾ.ಸಾ.ಆ.ಸಿಂ/ಟೆಂಡರ/130/2025–26 ದಿನಾಂಕ:17.07.2025

ಇ–ಪ್ರಕ್ಯುರಮೆಂಟ ಟೆಂಡರ್ ಪ್ರಕಟಣೆ

ವಿಷಯ:–2025–26 ಸಾಲಿಗೆ ನಾನ್ ಕ್ಲಿನಿಕಲ್ ಸೇವಾ ಗುತ್ತಿಗೆ ಕಾರ್ಯ ನಿರ್ವಹಣೆಗೆ 12 ಜನ ಇ–ಪ್ರಕ್ಯುರಮೆಂಟ ಟೆಂಡರ ಕರೆಯುವ ಬಗ್ಗೆ

2025–26 ನೇ ಸಾಲಿನಲ್ಲಿ 100 ಹಾಸಿಗೆ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಸಿಂದಗಿ ನಾನ್ ಕ್ಲಿನಿಕಲ್ ಸೇವೆಗಳ ಸ್ವಚ್ಚತಾ ಕಾರ್ಯ ನಿರ್ವಹಣೆಗೆ 12 ಜನ ಸ್ವಚ್ಚತಾ ಕಾರ್ಮಿಕರನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ 2000 ಮೇರೆಗೆ ಇ–ಪ್ರಕ್ಯುರಮೆಂಟ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ ಅಹ್ವಾನಿಸಲಾಗಿದೆ. ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವರು ಇ–ಪ್ರಕ್ಯುರಮೆಂಟ ವಿಳಾಸ http://eproc.karnataka.gov.in ವೆಬ್‌ಸೈಟನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು ಟೆಂಡರ್ ಇ.ಎಂ.ಡಿ ಮೊತ್ತ ರೂ. 68293/– ಮಾತ್ರ ಇ ಸಂಗ್ರಹಣೆ ಕರ್ನಾಟಕ ಸರ್ಕಾರ ಇವರ ಹೆಸರಿಗೆ ಪಾವತಿಸಕ್ಕದ್ದು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಲಸದ ಅವಧಿಯಲ್ಲಿ ಕಾರ್ಯಾಲಯದಲ್ಲಿ ಪಡೆಯಬಹುದು.

ಟೆಂಡರ ವಿವರ: 01) ಟೆಂಡರ ಪ್ರಾರಂಭಿಸುವ/ಟೆಂಡರ ಅಪ್ಲೋಡ ಮಾಡುವ ದಿನಾಂಕ: 18.07.2025, 17:30 PM
02) ಇ–ಪೋರ್ಟಲ್ ಟೆಂಡರ ಅಂತಿಮ ದಿನಾಂಕ: 25.07.2025 17:30 PM
03) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28.07.2025, 11:00 AM
04) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.07.2025, 11:00 AM

ಸೂಚನೆ: ನಾವು ಟೆಂಡರ್‌ನಲ್ಲಿ ಅಪ್ಲೋಡ ಮಾಡಲು ತಿಳಿಸಿದ ದಾಖಲೆಗಳನ್ನು ಮಾತ್ರ ಅಪ್ಲೋಡ ಮಾಡಲು ಸೂಚಿಸಿದೆ.

ಸಹಿ/– ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಸಿಂದಗಿ

ವಾಸಾಸಂಇ/ವಿಜಯಪುರ/196/ಕೆಎಸ್‌ಎಂಸಿಎ/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರವರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/555/2025–26 ದಿನಾಂಕ: 19.07.2025	
1	ಕಾನಿಅ(ತ್ಯಾನೀನಿ–ಎಸ್‌ಟಿಪಿ–ಸಿವಿ) ವಿಭಾಗದ ವ್ಯಾಪ್ತಿಯಡಿ ಬರುವ ಚಲ್ಲಘಟ್ಟ ವ್ಯಾಲಿಯ 60 ಎಂಎಲ್‌ಡಿ ಎಸ್‌ಟಿಪಿಯಲ್ಲಿ ಸ್ಕ್ರಬರ್‌ನೊಂದಿಗೆ ಜೈವಿಕ ಇಂಧನ ಇಂಜಿನ್ (ಸ್ಟ್ಯಾಂಡ್ ಬೈ) ಅನ್ನು ಒದಗಿಸಿ, ಕಾರ್ಯಚಾಲನೆಗೊಳಿಸುವ ಕಾಮಗಾರಿ (3ನೇ ಕರೆ).	ರೂ. 408.56 ಲಕ್ಷಗಳು / ರೂ. 6.13 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **04.08.2025ರ ಸಂಜೆ 4.00 ಗಂಟೆವರೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **05.08.2025ರ ಸಂಜೆ 5.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ–ಪೂರ್ವ)

ಮುಖ್ಯ ಅಭಿಯಂತರರವರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎಸ್‌ಟಿಪಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/771/2025–26 ದಿನಾಂಕ: 19.07.2025	
2	ಸಕಾನಿಅ(ತ್ಯಾನೀನಿ–ಎಸ್‌ಟಿಪಿ) ವಿ.ವಿ.–1 ಉಪ–ವಿಭಾಗದಡಿ ಬರುವ 60 ಎಂಎಲ್‌ಡಿ ಕೆಂಗೇರಿ ಯುಡಬ್ಲ್ಯೂಟಿಪಿ ಯಲ್ಲಿ ಜೆಹೆಚ್‌ಎ ನಿಧಿಯಡಿ ತ್ರಾಷ್ ರ್‍ಯಾಕ್ ಮತ್ತು ಮೆಸೆರೇಟರ್‌ಗಳ ಅಳವಡಿಸುವ ಸುಧಾರಣಾ ಕಾಮಗಾರಿ (3ನೇ ಕರೆ).	ರೂ. 286.41 ಲಕ್ಷಗಳು / ರೂ. 4.29 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎಸ್‌ಟಿಪಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/777/2025–26 ದಿನಾಂಕ: 19.07.2025	
3	ಸಕಾನಿಅ(ತ್ಯಾನೀನಿ–ಎಸ್‌ಟಿಪಿ. ಹೆಚ್.&ಎ.ವಿ–1) ಉಪ–ವಿಭಾಗದಡಿ ಬರುವ 40 ಎಂಎಲ್‌ಡಿ ರಾಜಕೆನಾಲ್ ಫೇಸ್–II ಯುಡಬ್ಲ್ಯೂಟಿಪಿ ಯಲ್ಲಿ ಜೆಹೆಚ್‌ಎ ನಿಧಿಯಡಿ ಯುಎಫ್ 1 ಎಂಎಲ್‌ಡಿ ಮತ್ತು ಕೋರ್ಸ್ ಸ್ಕ್ರೀನ್ ಅನ್ನು ಅಳವಡಿಸುವ ಕಾಮಗಾರಿ (3ನೇ ಕರೆ).	ರೂ. 387.70 ಲಕ್ಷಗಳು / ರೂ. 5.81 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎಸ್‌ಟಿಪಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/783/2025–26 ದಿನಾಂಕ: 19.07.2025	
4	ಸಕಾನಿಅ(ತ್ಯಾನೀನಿ–ಎಸ್‌ಟಿಪಿ. ಹೆಚ್.&ಎ–2) ಉಪ–ವಿಭಾಗದಡಿ ಬರುವ ಚಿಕ್ಕಬಾಣಾವರದಲ್ಲಿ ಸಬ್‌ಮರ್ಸಿಬಲ್ ಅಲ್ಟ್ರಾ ಹೆವಿ ಡ್ಯೂಟಿ, ಡ್ರೆಡ್ಜ್ ಪಂಪ್‌ಗಳು, ವರ್ಟಿಕಲ್ ಪಂಪ್‌ಸೆಟ್, ಸಿಎಂಎಂಎಸ್, ಸೌರ ಫಲಕಗಳು ಮತ್ತು ಯುವಿ ಡಿಸ್‌ಇನ್‌ಫೆಕ್ಷನ್ ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ (2ನೇ ಕರೆ).	ರೂ. 123.18 ಲಕ್ಷಗಳು / ರೂ. 1.85 ಲಕ್ಷಗಳು
	ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎಸ್‌ಟಿಪಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/779/2025–26 ದಿನಾಂಕ: 19.07.2025	
5	ಸಕಾನಿಅ(ತ್ಯಾನೀನಿ–ಎಸ್‌ಟಿಪಿ. ಹೆಚ್&ಎ–1) ಉಪ ವಿಭಾಗದಡಿ ಬರುವ ಹೆಬ್ಬಾಳ 100 ಎಂಎಲ್‌ಡಿ ಯುಡಬ್ಲ್ಯೂಟಿಪಿ ಯಲ್ಲಿ ಒಡೋರ್ ಕಂಟ್ರೋಲ್ ಯೂನಿಟ್‌ನ (ಓಸಿಯು) ಅಳವಡಿಕೆ, ಸರಬರಾಜು ಮತ್ತು ಕಾರ್ಯಚಾಲನೆಗೊಳಿಸುವ ಸುಧಾರಣೆ ಕಾಮಗಾರಿಗಳು (3ನೇ ಕರೆ).	ರೂ. 403.44 ಲಕ್ಷಗಳು / ರೂ. 6.05 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.07.2025ರ ಸಂಜೆ 4.00 ಗಂಟೆವರೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **31.07.2025ರ ಸಂಜೆ 5.00 ಗಂಟೆಗೆ.**

ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ–ಪಶ್ಚಿಮ)

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in**ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲ್ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/YC/1945/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಹಲವು ಕಾಲ ಕಲ್ಲು ನೀರೊಳಗಿದ್ದರೇನು, ಬಲು ನೆನೆದು ಅಮೃತಶಿಲೆಯಾಗುವುದೇ? -ಪುರಂದರದಾಸ

ಸಂಪಾದಕೀಯ

ಐಪಿಎಲ್ ವಿಜಯೋತ್ಸವದಲ್ಲಿನ ದುರಂತ ಹೊಣೆ ನುಣುಚಿಕೊಳ್ಳುವುದು ಸಲ್ಲದು

‘ಐಪಿಎಲ್’ ಕ್ರಿಕೆಟ್ ಪಂದ್ಯಾವಳಿಯಲ್ಲಿ ‘ರಾಯಲ್ ಚಾಲೆಂಜರ್ಸ್ ಬೆಂಗಳೂರು’ (ಆರ್‌ಸಿಬಿ) ತಂಡ ಸಾಧಿಸಿದ ಗೆಲುವನ್ನು ಸಂಭ್ರಮಿಸಲು ನಡೆದ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಪ್ರವೇಶ ದ್ವಾರದಲ್ಲಿ ಹನ್ನೊಂದು ಜನ ಸಾವಿಗೀಡಾಗಿದ್ದರು. ಜೂನ್ 4ರಂದು ಸಂಭವಿಸಿದ ಆ ದುರ್ಘಟನೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ವಿಚಾರಣಾ ಆಯೋಗ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆಯೋಗದ ವರದಿಯಲ್ಲಿ, ದುರ್ಘಟನೆಯ ಹೊಣೆಗಾರರನ್ನಾಗಿ ‘ಆರ್‌ಸಿಬಿ’ ಆಡಳಿತ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ), ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ಲಿ. ಹಾಗೂ ಆಗ ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ಬಿ. ದಯಾನಂದ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಗುರ್ತಿಸಲಾಗಿದೆ. ಕಾಲ್ತುಳಿತದ ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ವರದಿ ಸಲ್ಲಿಸಿರುವ ಸರ್ಕಾರ, ಸಂಘಟಕರ ಸೇವಕರಂತೆ ಪೊಲೀಸರು ವರ್ತಿಸಿದ್ದಾರೆ ಎಂದು ಕಟುವಾಗಿ ಹೇಳಿದೆ. ತಪ್ಪಿತಸ್ಥರ ಸ್ಥಾನದಲ್ಲಿ ಪೊಲೀಸರನ್ನು ಏಕಪಕ್ಷೀಯವಾಗಿ ನಿಲ್ಲಿಸುವುದು ಎಷ್ಟು ಸರಿ ಹಾಗೂ ಇಂಥ ಧೋರಣೆಯಿಂದ ಅವರ ಆತ್ಮವಿಶ್ವಾಸ ಮತ್ತು ನೈತಿಕತೆಯನ್ನು ಕುಗ್ಗಿಸಿದಂತೆ ಆಗುವುದಿಲ್ಲವೇ ಎನ್ನುವ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಬೇಕಾಗಿದೆ. ದುರಂತದ ಹೊಣೆಯನ್ನು ಪೊಲೀಸರ ತಲೆಗೆ ಕಟ್ಟಿ ನುಣುಚಿಕೊಳ್ಳುವ ಬದಲಾಗಿ, ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ಆಗಿರುವ ಸಾಂಸ್ಥಿಕ ಲೋಪ ಹಾಗೂ ನಿರ್ಲಕ್ಷ್ಯದ ಫಲಿತಾಂಶದ ರೂಪದಲ್ಲಿ ಸಂಭವಿಸಿದ ದುರ್ಘಟನೆಯನ್ನು ಗುರ್ತಿಸಬೇಕಾಗಿದೆ. ವಿಜಯೋತ್ಸವದಂಥ ಕಾರ್ಯಕ್ರಮವನ್ನು ಆಯೋಜಿಸಲು ಅಗತ್ಯವಾಗಿದ್ದ ಪೊಲೀಸರ ಕಡ್ಡಾಯ ಅನುಮತಿಯನ್ನು ಪಡೆಯದಿರುವ ಆಯೋಜಕರು, ಸಾರ್ವಜನಿಕ ಹಿತವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಲಕ್ಷಾಂತರ ಜನ ಸೇರುವ ನಿರೀಕ್ಷೆಯಿದ್ದ ಬೃಹತ್ ಕಾರ್ಯಕ್ರಮವೊಂದನ್ನು ಪೊಲೀಸ್ ಅನುಮತಿ ಇಲ್ಲದೆ ನಡೆಸಲು ಮುಂದಾಗುವುದು ಬರೀ ನಿರ್ಲಕ್ಷ್ಯ ಮಾತ್ರವಲ್ಲ, ಉದ್ಧಟತನವೂ ಹೌದು. ಅನುಮತಿ ಪಡೆಯದೆಯೇ ಭಾರೀ ಜನಸ್ತೋಮ ಸೇರುವ ಕಾರ್ಯಕ್ರಮವೊಂದರ ಆಯೋಜನೆಗೆ ಸಿದ್ಧತೆ ನಡೆಯುತ್ತಿದ್ದ ಸಂದರ್ಭದಲ್ಲಾದರೂ, ಮ್ಯಾಜಿಸ್ಟ್ರೇಟರು ತಮ್ಮ ಅಧಿಕಾರವನ್ನು ಬಳಸಿ ಜನ ಸೇರುವುದನ್ನು ನಿರ್ಬಂಧಿಸಿ ನಿಷೇಧಾಜ್ಞೆ ಜಾರಿ ಮಾಡಬಹುದಾಗಿತ್ತು; ನಿರ್ಣಾಯಕ ತೀರ್ಮಾನಗಳನ್ನು ಕೈಗೊಳ್ಳುವ ಮೂಲಕ ವಿಪತ್ತನ್ನು ತಪ್ಪಿಸುವ ಅವಕಾಶವೂ ಇತ್ತು.

ಹನ್ನೊಂದು ಜನರ ಸಾವಿಗೆ ಕಾರಣವಾದ ಕಾಲ್ತುಳಿತದ ದುರ್ಘಟನೆಗೆ ಹಲವು ಕಾರಣಗಳಿವೆ. ಸಂಭವಿಸಿದ ದುರಂತಕ್ಕೆ ಪೊಲೀಸರನ್ನು ಮಾತ್ರ ಹೊಣೆಗಾರರನ್ನಾಗಿ ಮಾಡುವುದು ಸಲ್ಲದು.

ಪರಿಸ್ಥಿತಿ ಹತೋಟಿ ತಪ್ಪುವಲ್ಲಿ ರಾಜಕಾರಣದ ಹಸ್ತಕ್ಷೇಪವೂ ಸ್ಪಷ್ಟವಾಗಿದೆ. ಐಪಿಎಲ್ ಆಟಗಾರರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೋಗಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ‘ಆರ್‌ಸಿಬಿ’ ಧ್ವಜವನ್ನು ಹಿಡಿದುಕೊಂಡು ಸಂಭ್ರಮಿಸಿದ್ದರು. ವಿಧಾನಸೌಧದ ಆವರಣದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಸೇರಿದಂತೆ ಇಡೀ ಆಡಳಿತಾಂಗವೇ ಹಾಜರಿತ್ತು. ಹೀಗೆ ವಿಜಯೋತ್ಸವದ ಭಾಗವಾಗಿ ಗುರ್ತಿಸಿಕೊಂಡ ಸರ್ಕಾರ, ದುರ್ಘಟನೆ ಸಂಭವಿಸಿದ ನಂತರ ಅಂತರ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಹಾಗೂ ಅನಾಹುತದ ಸಂಪೂರ್ಣ ಹೊಣೆಗಾರಿಕೆಯನ್ನು ಪೊಲೀಸರ ಹೆಗಲಿಗೇರಿಸಿದೆ. ಜವಾಬ್ದಾರಿಯಿಂದ ನುಣುಚಿಕೊಳ್ಳುವ ಕಾರ್ಯತಂತ್ರದ ಭಾಗವಾಗಿಯೇ, ಸರ್ಕಾರದ ವರದಿ ಹೈಕೋರ್ಟ್‌ಗೆ ಸಲ್ಲಿಕೆಯಾದ ದಿನವೇ ಆಯೋಗದ ವರದಿಯ ಕೆಲವು ಭಾಗಗಳು ಮಾಧ್ಯಮಗಳಿಗೆ ಬಿಡುಗಡೆಯಾದುದನ್ನು ಗಮನಿಸಬೇಕಾಗಿದೆ. ಪೊಲೀಸರ ಮೇಲಿನ ರಾಜಕೀಯ ಒತ್ತಡವು ದುರದೃಷ್ಟಕರ ವಾಸ್ತವವಾಗಿದೆ. ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಮೌಖಿಕ ಆದೇಶಗಳನ್ನು ಅನುಸರಿಸಿ ಪೊಲೀಸರು ಕಾರ್ಯ ನಿರ್ವಹಿಸಬಾರದು ಎನ್ನುವುದಕ್ಕೆ ಐಪಿಎಲ್ ವಿಜಯೋತ್ಸವ ಸಂದರ್ಭದಲ್ಲಿ ಘಟಿಸಿದ ದುರಂತ ಪೊಲೀಸ್ ಇಲಾಖೆಗೆ ಪಾಠ ಆಗಬೇಕಾಗಿದೆ. ಕಾಲ್ತುಳಿತದಿಂದ ಸಂಭವಿಸಿದ ಸಾವುಗಳ ಹೊಣೆಗಾರಿಕೆ ಸಾಮೂಹಿಕವಾದುದು. ಸಂಘಟಕರ ನಿರ್ಲಕ್ಷ್ಯ, ಕರ್ತವ್ಯ ನಿರ್ವಹಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ತೀರ್ಮಾನಗಳಲ್ಲಿ ಪೊಲೀಸರು ಎಸಗಿದ ಲೋಪಗಳು ಹಾಗೂ ರಾಜಕೀಯ ಹಸ್ತಕ್ಷೇಪ, ಇವೆಲ್ಲವೂ ಕಾಲ್ತುಳಿತದ ಸಾವು- ನೋವುಗಳಿಗೆ ಕಾರಣವಾಗಿವೆ. ಮುಂದೆ, ಇಂಥ ಕಾರ್ಯಕ್ರಮಗಳು ನಡೆಯುವಾಗ ಸಾರ್ವಜನಿಕರ ಹಿತಾಸಕ್ತಿ ಮತ್ತು ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಎಲ್ಲರೂ ಪ್ರದರ್ಶಿಸಬೇಕಾಗಿದೆ.

ಆ ಲಿಂಕನ್ ಮತ್ತು ಈ ಟ್ರಂಪ್

ವಿಶ್ಲೇಷಣೆ

ವೈ.ಎಸ್.ವಿ. ದತ್ತ

ಈಗ್ಗೆ ಕೆಲವು ದಿನಗಳ ಹಿಂದೆ ನನ್ನ ಹಳ್ಳಿಯ ಮನೆಯ ಅಟ್ಟದಲ್ಲಿ ನಮ್ಮ ತಂದೆಯವರು ಸಂಗ್ರಹಿಸಿ ಒಟ್ಟಿದ್ದ ಪುಸ್ತಕಗಳನ್ನು ಕೆದಕುತ್ತಿದ್ದಾಗ, ಒಂದು ಇಂಗ್ಲಿಷ್ ಪುಸ್ತಕ ಕಣ್ಣಿಗೆ ಬಿದ್ದಿತು. ಅದು 1936ರಲ್ಲಿ ಪ್ರಕಟಣೆಯಾದ 220 ಪುಟಗಳ ಪುಸ್ತಕ. ಅದರ ಹೆಸರು, ‘ರೀಡಿಂಗ್ಸ್ ಇನ್ ಪ್ರೋಜ್ ಅಂಡ್ ವರ್ಸ್’. ಅದರ ಪ್ರಕಾಶಕರು, ಅಂದಿನ ಮದರಾಸಿನ ‘ಭಾರತ್ ಪಬ್ಲಿಷಿಂಗ್ ಹೌಸ್’ ಸಂಸ್ಥೆಯವರು. ಅದು, 90 ವರ್ಷಗಳ ಹಿಂದೆ, ಅಂದಿನ ಭಾರತೀಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ್ದ ಇಂಗ್ಲಿಷ್ ಭಾಷಾ ಪಠ್ಯಪುಸ್ತಕ. ಆಗ ಅದರ ಬೆಲೆ, ಒಂದೂಕಾಲು ರೂಪಾಯಿ.

ಆ ಪಠ್ಯಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳಲಾಗಿದೆ:

‘ಈ ಪಠ್ಯಪುಸ್ತಕದ ಪಠ್ಯಗಳ ಆಯ್ಕೆಯನ್ನು 14ರಿಂದ 16 ವರ್ಷದ ಭಾರತೀಯ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. ...ಆಸಕ್ತಿದಾಯಕ ವಸ್ತು ವಿಷಯವನ್ನು ಪರಿಗಣಿಸದೆ, ವಿದೇಶಿ ಭಾಷೆಯೊಂದನ್ನು ಕೇವಲ ಭಾಷೆಯನ್ನಾಗಿ ಬೋಧಿಸುವುದು ವಿದ್ಯಾರ್ಥಿ ಮತ್ತು ಬೋಧಕರಿಬ್ಬರಿಗೂ ಶುಷ್ಕ ಹಾಗೂ ನೀರಸ ಪ್ರಕ್ರಿಯೆಯಾಗಿ ಬಿಡುತ್ತದೆ. ಈ ಅಪಾಯವನ್ನು ತಪ್ಪಿಸಲು ಈ ಪಠ್ಯಪುಸ್ತಕದಲ್ಲಿ ಜಾಗತಿಕ ಸಾಹಿತ್ಯದ ಶ್ರೇಷ್ಠ ಬರಹಗಳನ್ನು ಜಾಗರೂಕತೆಯಿಂದ ಅಳವಡಿಸಲಾಗಿದೆ. ಇದರಿಂದ ಭಾಷಾ ಬೋಧನೆಯನ್ನು ಪರಿಣಾಮಕಾರಿ ವಾಹಕವನ್ನಾಗಿಸುವುದಲ್ಲದೆ, ಅವರ ಅಂದರೆ ವಿದ್ಯಾರ್ಥಿಗಳ ಮಾನವ ಸಹಜ ಆಸಕ್ತಿಯ ಜೀವಂತಿಕೆಯನ್ನು ಉಳಿಸಿದಂತಾಗುತ್ತದೆ’.

ಮುನ್ನುಡಿಯ ಆಶಯದಂತೆಯೇ ಈ ಪಠ್ಯಪುಸ್ತಕದ ಗದ್ಯಭಾಗದಲ್ಲಿ ಲಿಯೋ ಟಾಲ್‌ಸ್ಟಾಯ್, ಬುನ್ಯಾನ್, ಸ್ವಿಫ್ಟ್, ಕೌಪರ್, ಮೆಕಾಲೆ, ಅಬ್ರಹಾಂ ಲಿಂಕನ್, ಲಾರ್ಡ್ ಇರ್ವಿನ್, ಗೋಲ್ಡ್‌ಸ್ಮಿತ್, ಇರ್ವಿಂಗ್... ಹೀಗೆ ಜಗತ್ಪ್ರಸಿದ್ಧರ ಬರಹಗಳಿವೆ.

ತೊಂಬತ್ತು ವರ್ಷಗಳ ಹಿಂದಿನ ಈ ಇಂಗ್ಲಿಷ್ ಭಾಷೆಯ ಪ್ರೌಢಶಾಲಾಮಟ್ಟದ ಪಠ್ಯಪುಸ್ತಕವನ್ನು ನೋಡಿದಾಗ, ನನಗೆ ಈಗ್ಗೆ 60 ವರ್ಷಗಳ ಹಿಂದೆ ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಅಂದಿನ ಸರ್ಕಾರ ನಿಗದಿಪಡಿಸಿದ್ದ ಇಂಗ್ಲಿಷ್ ಮತ್ತು ಕನ್ನಡ ಪಠ್ಯಪುಸ್ತಕಗಳು ನೆನಪಿಗೆ ಬಂದವು. ಅದರ ಜೊತೆಯಲ್ಲಿಯೇ ಇಂದಿನ ಶಿಕ್ಷಣ ಕ್ರಮದ ಪಠ್ಯಗಳೂ ಕಣ್ಣ ಮುಂದೆ ಸುಳಿದವು.

ಒಂಬತ್ತು ದಶಕಗಳ ಹಿಂದಿನ ಈ ಇಂಗ್ಲಿಷ್ ಪಠ್ಯಪುಸ್ತಕ ಕೇವಲ ಭಾಷೆಯನ್ನು ಕಲಿಸುವ ಪಠ್ಯವಾಗಿರಲಿಲ್ಲ. ಬದಲಿಗೆ, ಅದರ ಮುನ್ನುಡಿಯಲ್ಲಿಯೇ ಹೇಳಿರುವಂತೆ, ಜೀವನಾಸಕ್ತಿ ಮತ್ತು ಜೀವನ ಮೌಲ್ಯಗಳನ್ನು ಕಲಿಸುವ ಪಠ್ಯವೂ ಆಗಿತ್ತು ಎಂಬುದನ್ನು ಅದನ್ನು ಓದಿದ ಮೇಲೆ ನನಗನ್ನಿಸಿತು. ಲಿಯೋ ಟಾಲ್‌ಸ್ಟಾಯ್‌ರವರ ಪ್ರಸಿದ್ಧ ಕಥೆ ‘God Sees the truth but waits’ ಸಾರುವ ಸಂದೇಶದೊಂದಿಗೆ ಆ ಪಠ್ಯಪುಸ್ತಕ ಆರಂಭ ಆಗುತ್ತದೆ. ಮತ್ತೊಂದು ಪಠ್ಯ ಮೆಕಾಲೆ ಬರೆದಿರುವ ವಾರನ್ ಹೇಸ್ಟಿಂಗ್ಸ್‌ನ ವರದಿ ರೂಪದ ಗದ್ಯಬರಹ. ಭಾರತದ ಗವರ್ನರ್ ಜನರಲ್ ಆಗಿದ್ದ ವಾರನ್ ಹೇಸ್ಟಿಂಗ್ಸ್‌ನು ಭಾರತದಲ್ಲಿ ನಡೆಸಿದ ಭ್ರಷ್ಟಾಚಾರದ ವ್ಯವಹಾರವೊಂದರಲ್ಲಿ ಆರೋಪಿಯಾಗಿ ವಿಚಾರಣೆ ಎದುರಿಸಬೇಕಾಗಿ ಬಂದುದರ ವಿವರ ಅದು. ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ನ ಸದಸ್ಯರು ಅವನ ಮೇಲೆ ಗುರುತರ ಆರೋಪ ಪಟ್ಟಿ ಮಾಡಿ, ಹೌಸ್ ಆಫ್ ಲಾರ್ಡ್ಸ್‌ನ ಜ್ಯೂರಿಗಳ ಮುಂದೆ ವಿಚಾರಣೆಗೆ ಒಳಪಡಿಸುತ್ತಾರೆ. ಆ ವಿಚಾರಣೆಯ ಸ್ವಾರಸ್ಯ, ಮಾಡಿದ ಆರೋಪ, ಇಟ್ಟ ರುಜುವಾತುಗಳು, ನಡೆದ ವಾದ-ಪ್ರತಿವಾದ ಇವುಗಳನ್ನು ಮೆಕಾಲೆ ತನ್ನದೇ ಭಾಷೆಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಅದೊಂದು ನ್ಯಾಯಾಲಯದಲ್ಲಿ ನಡೆಯುವ ವಿಚಾರಣೆಯ ಶುಷ್ಕ ವರದಿಯಲ್ಲ. ಬದಲಿಗೆ ಅದು, ಇಂಗ್ಲೆಂಡಿನ ಪ್ರಜಾಪ್ರಭುತ್ವದ ಗಟ್ಟಿ ಬೇರುಗಳ ಚರಿತ್ರೆಯನ್ನು ಜೊತೆ ಜೊತೆಯಲ್ಲಿಯೇ ಹೇಳುತ್ತಾ ಹೋಗುತ್ತದೆ. ಇಂಗ್ಲೆಂಡಿನ ಪ್ರಜಾಪ್ರಭುತ್ವ ವ್ಯವಸ್ಥೆ ಎಂತೆಂತಹ ಅತಿರಥ ಮಹಾರಥರನ್ನು ಆಪೋಶನ ತೆಗೆದುಕೊಂಡಿತು ಎಂದು ಮೆಕಾಲೆ ಹೇಳುತ್ತಲೇ, ಇದೀಗ ವಾರನ್ ಹೇಸ್ಟಿಂಗ್ಸ್‌ನ ಸರದಿ ಎಂದು ಆರಂಭಿಸುತ್ತಾನೆ. ಇದು ನಮ್ಮ ದೇಶದ ಇಂದಿನ ರಾಜಕಾರಣದ ವ್ಯವಸ್ಥೆಗೆ ಪ್ರಸ್ತುತವೆಂದೇ ನನ್ನ ಭಾವನೆ.

ಹೀಗೆ ಈ ಪಠ್ಯಪುಸ್ತಕ ವಿದೇಶಿ ಭಾಷೆಯೊಂದನ್ನು ಭಾರತೀಯ ವಿದ್ಯಾರ್ಥಿಗಳಿಗೆ ಕಲಿಸುವಾಗ, ಬರಿಯ ಇಂಗ್ಲಿಷ್ ವ್ಯಾಕರಣದ Active voice, Passive voice, Direct- Indirect speechಗಳಿಗೆ ಸೀಮಿತವಾಗಿರದೆ, ಜೀವನಾದರ್ಶನಗಳನ್ನು ಬಿತ್ತುವ ಮಾರ್ಗದರ್ಶಿಯೂ ಆಗಿತ್ತು ಎಂಬುದು ಅದನ್ನು ಓದಿದಾಗ ನನಗನ್ನಿಸಿತು. ಆ ಪುಸ್ತಕದಲ್ಲಿನ ಒಂದು ಪಾಠವಂತೂ ಮನಸ್ಸನ್ನು ತೀವ್ರವಾಗಿ ಸೆಳೆಯಿತು. ಅದು, ಅಬ್ರಹಾಂ ಲಿಂಕನ್ ಅವರ ‘ಡೆಡಿಕೇಷನ್ ಆಫ್ ಗೆಟ್ಟಿಸ್‌ಬರ್ಗ್’ ಎಂಬುದು. 1863ನೇ ನವೆಂಬರ್ 19ರಂದು ಅಬ್ರಹಾಂ ಲಿಂಕನ್ ಅವರು ಮಾಡಿದ ಭಾಷಣದ ಆಯ್ದ ಭಾಗವದು.

ನಾವೆಲ್ಲ ತಿಳಿದಂತೆ ಅಮೆರಿಕ ಸಂಯುಕ್ತ ಸಂಸ್ಥಾನ ಸ್ವತಂತ್ರ ರಾಷ್ಟ್ರವಾಗಿ ಜನ್ಮತಳೆದದ್ದು 1776ನೇ ಜುಲೈ 4ರಂದು. ಅದಾದ ಸುಮಾರು 80 ವರ್ಷಗಳ ನಂತರ– ಅಂದರೆ, 19ನೇ ಶತಮಾನದ ಉತ್ತರಾರ್ಧದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಚಾರಿತ್ರಿಕವಾಗಿ ‘ಸಿವಿಲ್ ವಾರ್’ ಎಂದೇ ಕರೆಯಲಾಗುವ ಅಂತಃಕಲಹ ನಡೆಯಿತು. ಅಮೆರಿಕದ ಪ್ರಾಂತ್ಯಗಳು ನೀಗ್ರೊಗಳಿಗೂ ಎಲ್ಲರಂತೆ ಬದುಕುವ ಹಕ್ಕು ಇದೆ ಎಂಬ ಸರ್ಕಾರದ ನಿಲುವಿಗೆ ಬೆಂಬಲವಾಗಿ ನಿಂತವು. ಆಗ ಅಮೆರಿಕದ ಅಧ್ಯಕ್ಷರಾಗಿದ್ದವರು ಅಬ್ರಹಾಂ ಲಿಂಕನ್. ಗೆಟ್ಟಿಸ್‌ಬರ್ಗ್ ಎಂಬ ನೆಲದಲ್ಲಿ ನಡೆದದ್ದು ಆ ಯುದ್ಧ. ಉಕ್ಕಿನ ಕಾಠಿಣ್ಯದ ಆಡಳಿತಗಾರನಾಗಿ, ಆದರೆ ಅತ್ಯಂತ ಕೋಮಲ ಹೃದಯದ ಮಾನವತಾವಾದಿಯಾಗಿ, ವಸ್ತುನಿಷ್ಠ ಆದರ್ಶವಾದಿಯಾಗಿ ಲಿಂಕನ್ ಅವರು ಉತ್ತರ ಪ್ರಾಂತ್ಯಗಳ ಬೆಂಬಲದಿಂದ ಆ ಅಂತರ್ಯುದ್ಧವನ್ನು ಸಮರ್ಥವಾಗಿ ನಿಭಾಯಿಸಿದರು. ಸಂಯುಕ್ತ ಸಂಸ್ಥಾನದ ಏಕತೆ ಕಾಯ್ದುಕೊಳ್ಳುವುದರ ಜೊತೆಗೆ ತಮ್ಮ ಮಾನವತಾವಾದದ ಧ್ಯೇಯ ಗೆಲ್ಲುವಂತೆಯೂ ನೋಡಿಕೊಂಡರು.

> ‘ಪ್ರಜೆಗಳ, ಪ್ರಜೆಗಳಿಂದ, ಪ್ರಜೆಗಳಿಗಾಗಿ ನಡೆಸುವ ಪ್ರಜಾ ಸರ್ಕಾರವನ್ನು ಈ ಭೂಮಿಯ ಮೇಲೆ ನಾಶವಾಗದಂತೆ ಕಾಪಾಡಿಕೊಳ್ಳಬೇಕಾಗಿದೆ’ ಎಂದು 162 ವರ್ಷಗಳ ಹಿಂದೆ ಲಿಂಕನ್ ನೀಡಿದ ಸಂದೇಶ ಅಮೆರಿಕಕ್ಕೆ ಮಾತ್ರವಲ್ಲ, ಭಾರತದಂತಹ ಪ್ರಜಾಪ್ರಭುತ್ವ ದೇಶಗಳಿಗೂ ಈ ಹೊತ್ತಿಗೂ ಪ್ರಸ್ತುತ.

ಆ ಅಂತರ್ಯುದ್ಧದಲ್ಲಿ ಉದಾತ್ತ ಮಾನವೀಯ ಮೌಲ್ಯಕ್ಕಾಗಿ ಪ್ರಾಣತೆತ್ತ ಧೀರಯೋಧರಿಗೆ ಗೌರವ ಸಮರ್ಪಣೆ ಮಾಡಲು ಗೆಟ್ಟಿಸ್‌ಬರ್ಗ್ ನೆಲದಲ್ಲಿ ಸೇರಿದ್ದ ಜನಸ್ತೋಮವನ್ನು ಉದ್ದೇಶಿಸಿ ಲಿಂಕನ್ ಅವರು, ಈಗ್ಗೆ 162 ವರ್ಷಗಳ ಹಿಂದೆ ಮಾಡಿದ ಭಾಷಣ ಅಥವಾ ನೀಡಿದ ಸಂದೇಶವೇ ಆ ಪಠ್ಯಪುಸ್ತಕದಲ್ಲಿನ ಪಾಠ. ಅದೇ ನನಗೆ ತುಂಬ ಹಿಡಿಸಿದ್ದು. ಲಿಂಕನ್ ಅವರ ಆ ಸಂದೇಶ- ಭಾಷಣ ಹೀಗಿದೆ:

‘ಈಗ್ಗೆ 87 ವರ್ಷಗಳ ಹಿಂದೆ ನಮ್ಮ ಹಿರಿಯರೂ, ಪಿತಾಮಹರೂ ಈ ಖಂಡದ ಮೇಲೆ ಸ್ವಾತಂತ್ರ್ಯಕ್ಕೆ ಬದ್ಧವಾದ ಮತ್ತು ಎಲ್ಲ ಮನುಜರೂ ಸರ್ವಸಮಾನವಾಗಿ ಸೃಷ್ಟಿಸಲ್ಪಟ್ಟಿದ್ದಾರೆ ಎಂಬ ತತ್ವಕ್ಕೆ ಅನುಗುಣವಾದ ಹೊಸ ರಾಷ್ಟ್ರವೊಂದರ ಉದಯಕ್ಕೆ ಕಾರಣರಾದರು.

ಈಗ ನಾವು ಅಂತಃಕಲಹದಲ್ಲಿ ನಿರತರಾಗಿದ್ದೇವೆ. ಇದು ಅಂತಹ ಉದಾತ್ತ ಧ್ಯೇಯಕ್ಕೆ ಅರ್ಪಿಸಿಕೊಂಡಿರುವ ಒಂದು ರಾಷ್ಟ್ರ ಅಥವಾ ಅಂತಹ ಯಾವುದೇ ರಾಷ್ಟ್ರ ದೀರ್ಘಕಾಲ ಬಾಳಬಲ್ಲುದೇ ಎಂಬ ಪರೀಕ್ಷೆಯ ಸಮಯ ನಮಗೆ ಒದಗಿಸಿದೆ. ಇಂತಹ ರಾಷ್ಟ್ರ ಉಳಿಯಲೇಬೇಕೆಂಬ ವಾಂಛೆಯಿಂದ ತಮ್ಮ ಪ್ರಾಣವನ್ನೇ ಅರ್ಪಿಸಿದವರ ಶಾಶ್ವತ ವಿಶ್ರಾಂತಿಗೆಂದು ಈ ಯುದ್ಧಭೂಮಿಯ ಒಂದು ಭಾಗವನ್ನು ಅರ್ಪಿಸಲು ನಾವಿಲ್ಲಿ ಬಂದಿದ್ದೇವೆ. ಇದು ನಾವು ಮಾಡಲೇಬೇಕಾದ ಅರ್ಹ ಹಾಗೂ ಸರಿಯಾದ ಕರ್ತವ್ಯವಾಗಿದೆ.

ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ, ಈ ನೆಲದಲ್ಲಿ ನಾವು ಅರ್ಪಿಸಬೇಕಾದದ್ದಾಗಲೀ, ಪ್ರತಿಷ್ಠಾಪಿಸಬೇಕಾದದ್ದಾಗಲೀ, ಟೊಳ್ಳುಗೊಳಿಸಬೇಕಾದದ್ದಾಗಲೀ ನಮ್ಮ ಪಾಲಿಗೆ ಉಳಿದಿಲ್ಲ. ಏಕೆಂದರೆ, ಯುದ್ಧದಲ್ಲಿ ಬದುಕುಳಿದವರು ಮತ್ತು ಪ್ರಾಣತೆತ್ತಿರುವ ವೀರರು ಈ ನೆಲವನ್ನು ಈಗಾಗಲೇ ಮಹತ್ತಾಗಿ ಪ್ರತಿಷ್ಠಾಪಿಸಿಬಿಟ್ಟಿದ್ದಾರೆ. ಹಾಗಾಗಿ ಈ ಪವಿತ್ರ ಭೂಮಿಗೆ ನಾವು ಸೇರಿಸಬೇಕಾದದ್ದು, ಕಳೆಯಬೇಕಾದದ್ದು ಏನೂ ಇಲ್ಲ. ಇದು ನಮ್ಮ ಯಃಕಶ್ಚಿತ್ ಅಧಿಕಾರಕ್ಕಿಂತಲೂ ಅತ್ಯಂತ ಮಿಗಿಲಾದದ್ದು ಮತ್ತು ಮಹತ್ತರವಾದದ್ದು. ಇಲ್ಲಿ ನಾವು ಹೇಳುವ ಮಾತುಗಳನ್ನು ಜಗತ್ತು ಗಮನಿಸದೇ ಹೋಗಬಹುದು ಅಥವಾ ದೀರ್ಘಕಾಲ ನೆನಪಿನಲ್ಲಿ ಇಟ್ಟುಕೊಳ್ಳದಿರಬಹುದು. ಆದರೆ, ಆ ಧೀರರು ಇಲ್ಲಿ ಮಾಡಿದ ಮಹತ್ಕಾರ್ಯವನ್ನು ಜಗತ್ತು ಎಂದಿಗೂ ಮರೆಯಲಾಗದು. ಯಾವ ಉದಾತ್ತ ಧ್ಯೇಯಕ್ಕಾಗಿ ಆ ಧೀರರು ಹೋರಾಡಿದರೋ ಆ ಉದಾತ್ತ ಧ್ಯೇಯವು ಅಪೂರ್ಣವಾಗದಂತೆ ಪೂರ್ಣವಾಗಿ ಸಾಕಾರಗೊಳ್ಳಲು ಬದುಕಿರುವ ನಾವು ನಮ್ಮನ್ನು ನಾವೇ ಅರ್ಪಿಸಿಕೊಳ್ಳಬೇಕಾಗಿದೆ. ತಮ್ಮ ಜೀವದ ಕೊನೆಯ ಉಸಿರಿನವರೆಗೆ ಆ ಧೀರರು ಯಾವ ಘನ ಗುರಿ ಸಾಧನೆಗಾಗಿ ತಮ್ಮನ್ನು ತಾವು ತೆತ್ತುಕೊಂಡರೋ, ಅದರಿಂದ ಮತ್ತೂ ಹೆಚ್ಚಿನ ಸ್ಫೂರ್ತಿ ಪಡೆದು ಅಪೂರ್ಣವಾಗಿ ಉಳಿದಿರುವ ಘನಕಾರ್ಯವನ್ನು ಪೂರ್ಣಗೊಳಿಸಲು ನಾವು ಪ್ರತಿಜ್ಞಾಬದ್ಧರಾಗಬೇಕಿದೆ.

ಈ ಧೀರರ ಸಾವು ನಿಷ್ಫಲವಾಗಬಾರದೆಂದರೆ, ಈ ರಾಷ್ಟ್ರದ ಸ್ವಾತಂತ್ರ್ಯದ ಹೊಸ ಹುಟ್ಟಿನಿಂದ ಪ್ರಜೆಗಳ, ಪ್ರಜೆಗಳಿಂದ, ಪ್ರಜೆಗಳಿಗಾಗಿ ನಡೆಸುವ ಪ್ರಜಾ ಸರ್ಕಾರವನ್ನು ಈ ಭೂಮಿಯ ಮೇಲೆ ನಾಶ ಆಗದಂತೆ ಕಾಪಾಡಿಕೊಳ್ಳುತ್ತೇವೆ ಎಂಬ ಪ್ರತಿಜ್ಞೆಯನ್ನು ದೈವಸಾಕ್ಷಿಯಾಗಿ ನಾವೆಲ್ಲರೂ ಮಾಡಬೇಕಾಗಿದೆ’.

ಇದು 162 ವರ್ಷಗಳ ಹಿಂದೆ ಅಬ್ರಹಾಂ ಲಿಂಕನ್‌ರವರು ಆಡಿದ ಮಾತು. ನೀಡಿದ ಸಂದೇಶ. ಇದು ಈಗ ಹೆಚ್ಚು ಪ್ರಸ್ತುತ ಎಂದು ನನ್ನ ಭಾವನೆ. ಇದನ್ನು ಓದಿದಾಗ ನನಗೆ, ನಾನು ಹತ್ತನೇ ತರಗತಿಯಲ್ಲಿದ್ದಾಗ ಇದ್ದ ಪಠ್ಯಪುಸ್ತಕದ ಮೊದಲ ಪಾಠ ‘A Tryst with Destiny’ ಜ್ಞಾಪಕಕ್ಕೆ ಬಂತು. 1947ನೇ ಆಗಸ್ಟ್ 14ರ ಮಧ್ಯರಾತ್ರಿ ಭಾರತ ಸ್ವತಂತ್ರಗೊಂಡಾಗ ಜವಾಹರಲಾಲ್ ನೆಹರೂ ಅವರು ಮಾಡಿದ ಚಾರಿತ್ರಿಕ ಭಾಷಣ ಅದು. ‘ಇಡೀ ಜಗತ್ತೇ ಮಲಗಿರುವಾಗ ಭಾರತ ಎಚ್ಚರಗೊಂಡಿದೆ’ ಎಂದು ಭಾಷಣ ಆರಂಭಿಸುವ ನೆಹರೂ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಕನಸಾದ ‘ಪ್ರತಿಯೊಂದು ಕಣ್ಣಿನಿಂದಲೂ ಕಣ್ಣೀರು ಒರೆಸುವುದು ತಮ್ಮ ಜೀವನದ ಧ್ಯೇಯ’ ಎಂಬುದನ್ನು ಸಾಕಾರಗೊಳಿಸುವ ಸವಾಲು ನಮ್ಮ ಮುಂದಿದೆ ಎನ್ನುತ್ತಾರೆ.

ಈ ಸಂದೇಶಗಳು ಈಗ ಹೆಚ್ಚು ಪ್ರಸ್ತುತ ಎಂದು ನನ್ನ ಭಾವನೆ. ಇಂದು ಎಲ್ಲೆಲ್ಲೂ ನಮ್ಮನ್ನು ಯುದ್ಧೋನ್ಮಾದದ ಭೀತಿ ಕಾಡುತ್ತಿದೆ. ಧರ್ಮ, ಜಾತಿ, ವ್ಯಾಪಾರ, ವ್ಯವಹಾರ, ಒಣಪ್ರತಿಷ್ಠೆ, ಧನದಾಹ- ಹೀಗೆ ಒಂದಲ್ಲ ಒಂದು ಕಾರಣ. ಇಂತಹ ಪರಿಸ್ಥಿತಿಯ ಮಧ್ಯೆಯೇ, ಲಿಂಕನ್ ಅವರು ಕುಳಿತಿದ್ದ ಕುರ್ಚಿಯಲ್ಲಿ ಕುಳಿತಿರುವ ಡೊನಾಲ್ಡ್ ಟ್ರಂಪ್ ಮಹಾಶಯನ ಉದ್ಧಟತನ ಮತ್ತು ಅವಿವೇಕದ ನಡವಳಿಕೆಗಳನ್ನು ನೋಡಬೇಕಾಗಿದೆ.

ಅಂದು ಲಿಂಕನ್ ಮಾಡಿದ ಭಾಷಣದ ಪ್ರತಿಸಾಲೂ ಮನನಯೋಗ್ಯವಾಗಿದೆ. ಅದರಲ್ಲೂ ಭಾಷಣ ಮುಗಿಸುವ ಮುನ್ನ ಅವರು ಹೇಳಿದ ‘ಪ್ರಜೆಗಳ, ಪ್ರಜೆಗಳಿಂದ, ಪ್ರಜೆಗಳಿಗಾಗಿ ನಡೆಸುವ ಪ್ರಜಾ ಸರ್ಕಾರವನ್ನು ಈ ಭೂಮಿಯ ಮೇಲೆ ನಾಶವಾಗದಂತೆ ಕಾಪಾಡಿಕೊಳ್ಳಬೇಕಾಗಿದೆ’ ಎಂಬ ಮಾತು ನಮ್ಮನ್ನು ಸದಾ ಕಾಡುತ್ತಲೇ ಇರಬೇಕಾಗಿದೆ.

ಇದನ್ನು ಓದಿದ ಮೇಲೆ ನನಗೆ ಅನ್ನಿಸಿದ್ದು: ಆ ಲಿಂಕನ್ ಎಲ್ಲಿ? ಈ ಟ್ರಂಪ್ ಎಲ್ಲಿ?

ವಾಚಕರ ವಾಣಿ

ಏರೋಸ್ಪೇಸ್: ‘ಕಲ್ಯಾಣ’ ಪರಿಗಣಿಸಲಿ

ಬೀದರ್, ಕಲಬುರಗಿ, ಯಾದಗಿರಿ ಮತ್ತು ಕೊಪ್ಪಳ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಯಾವುದಾದರೂ ಜಿಲ್ಲೆಯ ವ್ಯಾಪ್ತಿಯಲ್ಲಿ ಅಗತ್ಯ ಮೂಲ ಸೌಕರ್ಯ ಒದಗಿಸಿ ರಕ್ಷಣಾ ಕೈಗಾರಿಕಾ ಕಾರಿಡಾರ್ ಹಾಗೂ ಏರೋಸ್ಪೇಸ್ ಪಾರ್ಕ್ ಸ್ಥಾಪನೆಗೆ ಮುತುವರ್ಜಿ ವಹಿಸಿದರೆ ಈ ಭಾಗದ ಅಭಿವೃದ್ಧಿಯಾಗಲಿದೆ. ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೂ ನಾಂದಿ ಹಾಡಿದಂತಾಗುತ್ತದೆ.

ದೇವನಹಳ್ಳಿ ತಾಲ್ಲೂಕಿನಲ್ಲಿ 1,776 ಎಕರೆ ಭೂಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರ ಕೈಬಿಟ್ಟಿದೆ. ಆಂಧ್ರಪ್ರದೇಶದ ಮಾಹಿತಿ ತಂತ್ರಜ್ಞಾನ ಸಚಿವ ನಾ.ರಾ. ಲೋಕೇಶ್, ತಮ್ಮ ರಾಜ್ಯದಲ್ಲಿ ರಕ್ಷಣಾ ಕಾರಿಡಾರ್ ಹಾಗೂ ಏರೋಸ್ಪೇಸ್ ಪಾರ್ಕ್ ಸ್ಥಾಪಿಸಲು ಆಹ್ವಾನ ನೀಡುತ್ತಿದ್ದಾರೆ. ಈ ಯೋಜನೆಗಳು ಅನ್ಯ ರಾಜ್ಯಗಳ ಪಾಲಾಗದಂತೆ ಸರ್ಕಾರ ತಡೆಯಬೇಕು. ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳನ್ನೂ ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಪರಿಗಣಿಸಿ, ಪರಿಶೀಲಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು.

ಶಿವರಾಜ್ ನಡಗೇರಿ, ಕಲಬುರಗಿ

ಪಂಜಾಬ್ ಸರ್ಕಾರವನ್ನು ಅನುಕರಿಸಿ

ಪಂಜಾಬ್ ರಾಜ್ಯ ಸರ್ಕಾರವು ಮಾದಕ ವಸ್ತುಗಳ ಕಳ್ಳಸಾಗಣೆ ತಡೆ ವಿರುದ್ಧ ರೂಪಿಸಿದ್ದ ಅಭಿಯಾನದಡಿ ಸುಮಾರು 22,377 ಕಳ್ಳಸಾಗಣೆದಾರರನ್ನು ಬಂಧಿಸಿದೆ (ಪ್ರ.ವಾ., ಜುಲೈ 19). ಪಂಜಾಬ್ ಸರ್ಕಾರದ ಈ ಆರೋಗ್ಯಕರ ನಿರ್ಧಾರ ಮತ್ತು ಅಭಿಯಾನವನ್ನು ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳು ಅನುಸರಿಸಿದರೆ, ಸಮಾಜದಲ್ಲಿ ಬಹುದೊಡ್ಡ ಬದಲಾವಣೆಗೆ ನಾಂದಿಯಾಗಲಿದೆ.

ಕೋವಿಡ್ ವೇಳೆ ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ, ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮದ ಕೇರಿಗಳ ಮೇಲೆ ಹದ್ದಿನ ಕಣ್ಣಿಟ್ಟು ಕೋವಿಡ್ ಬಾಧಿತರನ್ನು ಹುಡುಕಿ ತಂದು ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಇಡಲು ಸರ್ಕಾರಗಳಿಗೆ ಸಾಧ್ಯವಾಗಿತ್ತು. ಆದರೆ, ವಿದೇಶಗಳಿಂದ ಭಾರತಕ್ಕೆ ಕಳ್ಳಸಾಗಣೆಯಾಗುವ ಮಾದಕ ವಸ್ತುಗಳನ್ನು ತಡೆಗಟ್ಟಲು ಯಾಕೆ ಸಾಧ್ಯವಾಗುತ್ತಿಲ್ಲ? ಇಂತಹ ದಂಧೆಗಳಿಂದ ರಾಜಕಾರಣಿಗಳ ಕಿಸೆ ತುಂಬುತ್ತದೆ ಎಂಬ ನಗ್ನಸತ್ಯವನ್ನು ಅಲ್ಲಗಳೆಯಲಾಗದು.

ಆಮಿರ್ ಅಶ್‌ಅರೀ, ಬನ್ನೂರು

ಜಾಹೀರಾತು ನೀತಿ: ಪಾರದರ್ಶಕತೆ ಬೇಕು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜಾಹೀರಾತು ನೀತಿ ಪ್ರಕಟಿಸಿರುವುದು ಸ್ವಾಗತಾರ್ಹ. ಆದರೆ, ಈ ನೀತಿ ಜಾರಿಗೊಳಿಸುವಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕಿದೆ. ಇಲ್ಲವಾದರೆ, ಅಧಿಕಾರಿಗಳು ಸ್ಥಳೀಯ ಪುಢಾರಿಗಳೊಂದಿಗೆ ಕೈಜೋಡಿಸಿ ತಮ್ಮ ಜೇಬು ತುಂಬಿಸಿಕೊಳ್ಳುತ್ತಾರೆ. ಇದರಿಂದ ಪಾಲಿಕೆಯ ಆದಾಯಕ್ಕೆ ಕತ್ತರಿ ಬೀಳುವುದಂತೂ ಸ್ಪಷ್ಟ.

ಎಂ.ಎ. ಸುರೇಶ್, ಬೆಂಗಳೂರು

ನೋಟಿನಲ್ಲಿ ಅಂಬೇಡ್ಕರ್ ಚಿತ್ರ ಇರಲಿ

‘ನೋಟುಗಳಲ್ಲಿ ಬಿ.ಆರ್. ಅಂಬೇಡ್ಕರ್ ಚಿತ್ರವೂ ಇರಲಿ’ ಎಂದು ರಾಮಮನೋಹರ ಲೋಹಿಯಾ ವಿಚಾರ ವೇದಿಕೆಯು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದು ಒತ್ತಾಯಿಸಿದೆ (ಪ್ರ.ವಾ., ಜುಲೈ 20). ಈ ಸಂಗತಿಯು ಸಮಕಾಲೀನ ಸಂದರ್ಭದಲ್ಲಿ ಸ್ವೀಕಾರಾರ್ಹವಾಗಿದೆ. ಅಂಬೇಡ್ಕರ್ ಅವರ ಮಹೋನ್ನತ ಕೊಡುಗೆಗಳು ಹಾಗೂ ಅವರ ವ್ಯಕ್ತಿತ್ವವನ್ನು ವಿವಿಧ ಆಯಾಮಗಳಲ್ಲಿ ಈ ದೇಶವಾಸಿಗಳಿಗೆ ಸಾಂದರ್ಭಿಕವಾಗಿ ಮನವರಿಕೆ ಮಾಡಿಸಲು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ. ಪ್ರಸ್ತುತ ಕರೆನ್ಸಿ ನೋಟುಗಳಲ್ಲಿ ಅಂಬೇಡ್ಕರ್ ಚಿತ್ರ ಮುದ್ರಣಕ್ಕೆ ಲೋಹಿಯಾ ವಿಚಾರ ವೇದಿಕೆಯು ಉದ್ದೇಶಿತ ಮೌಲಿಕ ಯೋಜನೆ ರೂಪಿಸಿರುವುದು ಒಳ್ಳೆಯ ಬೆಳವಣಿಗೆ. ಸಂಬಂಧಪಟ್ಟವರು ಪೂರ್ವಗ್ರಹಪೀಡಿತರಾಗದೆ ಪಕ್ಷಾತೀತವಾಗಿ ಈ ಮಹತ್ತರ ಯೋಜನೆಯ ಅನುಷ್ಠಾನಕ್ಕೆ ಇಚ್ಛಾಶಕ್ತಿ ಪ್ರದರ್ಶಿಸಲಿ.

ಜಯವೀರ ಎ.ಕೆ. ಖೇಮಲಾಪುರ, ರಾಯಬಾಗ

ಸರ್ಕಾರದ ನಿರ್ಧಾರ ಶ್ಲಾಘನೀಯ

ಮುಖ್ಯಮಂತ್ರಿ ಅವರು ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ₹50 ಕೋಟಿ ವಿಶೇಷ ಅನುದಾನ ನೀಡಲು ಮುಂದಾಗಿರುವುದು ಶ್ಲಾಘನೀಯ (ಪ್ರ.ವಾ., ಜುಲೈ 19). ಇದರಿಂದ ಹಿಂದುಳಿದಿರುವ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನೆರವಾಗಲಿದೆ. ಸರ್ಕಾರವು ತ್ವರಿತವಾಗಿ ಅನುದಾನವನ್ನು ಬಿಡುಗಡೆಗೊಳಿಸಬೇಕು. ಇದರಿಂದ ನನೆಗುದಿಗೆ ಬಿದ್ದಿರುವ ಕಾಮಗಾರಿಗಳಿಗೂ ಮರುಜೀವ ಸಿಗಲಿದೆ.

ಎ.ವೈ. ಸೋನ್ಯಾಗೋಳ, ಪಾಶ್ಚಾಪೂರ

ಗ್ರಾಮಾಭಿವೃದ್ಧಿಗೆ ಇಚ್ಛಾಶಕ್ತಿ ಬೇಕು

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ರ್‍ಯಾವಣಕಿ ಗ್ರಾಮದ ಶಾಲೆಯ ವಿದ್ಯಾರ್ಥಿಗಳು ‘ಪ್ರವಾಹ’ ಸಂಕಟ ಅನುಭವಿಸುತ್ತಿರುವ ಸುದ್ದಿ ಓದಿ ಆಘಾತವಾಯಿತು (ಪ್ರ.ವಾ., ಜುಲೈ 20). ಇಂತಹ ಘಟನೆಗಳು ಕೇವಲ ರ್‍ಯಾವಣಕಿ ಗ್ರಾಮಕ್ಕಷ್ಟೇ ಸೀಮಿತವಾಗಿಲ್ಲ. ರಾಜ್ಯದಾದ್ಯಂತ ಅಲ್ಲಲ್ಲಿ ಕಂಡುಬರುತ್ತವೆ.

ಹಳ್ಳಿಗಳಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಧ್ವನಿ ಎತ್ತುವ ಶಕ್ತಿ ಇಲ್ಲದ್ದರಿಂದ ಇಂತಹ ಪ್ರಕರಣಗಳು ಬೆಳಕಿಗೆ ಬರುತ್ತಿಲ್ಲ. ಸಾಮಾಜಿಕ ಸೇವೆ ಮಾಡುತ್ತೇವೆಂದು ಹೇಳುವ ರಾಜಕೀಯ ಧುರೀಣರು ಮತ್ತು ಸರ್ಕಾರಿ ನೌಕರರಿಗೆ ಇಂತಹ ಸಮಸ್ಯೆಗಳು ಕಾಣುವುದಿಲ್ಲ. ಏಕೆಂದರೆ ಇಂತಹ ಯಾತನೆಯನ್ನು ಅವರ ಮಕ್ಕಳಾಗಲಿ ಅಥವಾ ಅವರಾಗಲಿ ಅನುಭವಿಸಿರುವುದಿಲ್ಲ. ಸರ್ಕಾರ ಕೇವಲ ನಗರೀಕರಣದ ಬಗ್ಗೆ ಹೆಚ್ಚು ಗಮನಹರಿಸುತ್ತದೆಯೇ ಹೊರತು, ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡುವುದಿಲ್ಲ. ಗ್ರಾಮೀಣರ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಮತ್ತು ಜನಪ್ರತಿನಿಧಿಗಳು ಇಚ್ಛಾಶಕ್ತಿ ಪ್ರದರ್ಶಿಸಬೇಕಿದೆ.

ಸಂಜು ಹೆಂದೊರೆ, ಶಿರಾ

ಜಾಲಡಿ

ಸಾರ್ವಜನಿಕರ ಹಣ!

ಸರ್ಕಾರಗಳು, ಸಾರ್ವಜನಿಕರ ಹಣದಿಂದ ಕೆಲಸ ಮಾಡಿ, ಮಾಡಿದ ಕೆಲಸಗಳನ್ನು ಸಾಧನೆ ಎಂದು ತೋರಿಸಲು ಅದೇ ಸಾರ್ವಜನಿಕರ ಹಣವನ್ನು ಖರ್ಚು ಮಾಡುತ್ತವೆ.

ಶಿವಕುಮಾರ ಮಾವಲಿ, ಕಥೆಗಾರ, ಫೇಸ್‌ಬುಕ್‌ನಿಂದ

ಕಿಡಿನುಡಿ

ನರೇಂದ್ರ ಮೋದಿ ಅವರು ಮಾತನಾಡುತ್ತಾರೋ ಇಲ್ಲವೋ ಎನ್ನುವುದು ನಿಮ್ಮ ಸಮಸ್ಯೆಯಲ್ಲ. ಅವರ ನೇತೃತ್ವದಲ್ಲಿ ಭಾರತ ವಿಶ್ವಮಟ್ಟದಲ್ಲಿ ಗರ್ಜನೆ ಮಾಡುತ್ತಿದೆಯಲ್ಲ, ಅದು ನಿಮ್ಮ ಸಮಸ್ಯೆ. ಮಲ್ಲಿಕಾರ್ಜುನ ಖರ್ಗೆ ಅವರೇ, ಮೋದಿ ಅವರನ್ನು ನೀವು ನಿಂದಿಸಿದರೆ ಜನ ಮೆಚ್ಚುತ್ತಾರೆಯೇ? ಇನ್ನೊಮ್ಮೆ ನಾಲಿಗೆ ಹರಿಬಿಡುವ ಮುನ್ನ ಆತ್ಮಾವಲೋಕನ ಮಾಡಿಕೊಳ್ಳಿ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 21-7-2000

• ಕ್ರಿಕೆಟ್ ಆಟಗಾರರ ಮನೆ ಮೇಲೆ ತೆರಿಗೆ ಅಧಿಕಾರಿಗಳ ದಾಳಿ

ಬೆಂಗಳೂರು, ಜುಲೈ 20– ಮೋಸದಾಟದ ಹಗರಣ ಬಯಲಿಗೆ ಬಂದ ನಂತರ ಇದೇ ಮೊದಲ ಬಾರಿಗೆ ದೇಶದ ವಿವಿಧೆಡೆ ಪ್ರತಿಷ್ಠಿತ ಕ್ರಿಕೆಟ್ ಆಟಗಾರರು, ಕ್ರಿಕೆಟ್ ಆಡಳಿತಗಾರರು, ತರಬೇತುದಾರರು ಮತ್ತು ಬುಕಿಗಳ ನೂರಕ್ಕೂ ಹೆಚ್ಚು ಮನೆ ಮತ್ತು ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಇಂದು ಏಕಕಾಲಕ್ಕೆ ದಾಳಿ ನಡೆಸಿ ‘ಅನೇಕ ಮಹತ್ವದ ದಾಖಲೆ’ಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ವಿಚಾರವನ್ನು ಇಂದು ಸಂಜೆ ಇಲ್ಲಿ ತುರ್ತಾಗಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸಿದ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ವಿ. ಧನಂಜಯ ಕುಮಾರ್, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕರಾದ ಕಪಿಲ್‌ದೇವ್, ಅಜರುದ್ದೀನ್, ಹಾಲಿ ಆಟಗಾರರಾದ ಅಜಯ್ ಜಡೇಜಾ, ನಿಖಿಲ್ ಚೋಪ್ರಾ ಮತ್ತು ವಿಕೆಟ್ ಕೀಪರ್ ನಯನ್ ಮೋಂಗಿಯಾ, ಅಜಯ್ ಶರ್ಮ, ನವಜೋತ್ ಸಿಧು ಅವರಲ್ಲದೆ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಹಿಂದಿನ ಅಧ್ಯಕ್ಷ ಜಗಮೋಹನ್ ದಾಲ್ಮಿಯಾ ಮತ್ತು ಭಾರತ ಕ್ರಿಕೆಟ್ ಮಂಡಳಿಯ ಖಜಾಂಚಿ ಕಿಶೋರ್ ರುಂಗ್ಟಾ ಅವರ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ಮಾಡಿ ತಪಾಸಣೆ ಮಾಡಲಾಯಿತು ಎಂದು ಬಹಿರಂಗಪಡಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 21-7-1950

• ಐಚ್ಛಿಕ ವಿಷಯಗಳಲ್ಲಿ ನಿರ್ಬಂಧವೇನೂ ಇಲ್ಲ

ಬೆಂಗಳೂರು, ಜುಲೈ 20– ಸೆಂಟ್ರಲ್ ಕಾಲೇಜಿನಲ್ಲಿ ಜೂನಿಯರ್ ತರಗತಿಗಳಿಗೆ ಸೇರಲು ಪಿಸಿಎಂ ಮತ್ತು ಸಿಬಿಜಡ್ ಐಚ್ಛಿಕ ಭಾಗಗಳನ್ನು ಕೇಳಿ ಅರ್ಜಿ ಹಾಕಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಸೀಟುಗಳನ್ನು ಒದಗಿಸಲು ಇಂದು ನಡೆದ ವಿಶ್ವವಿದ್ಯಾನಿಲಯ ಸಲಹಾ ಸಮಿತಿ ನಿರ್ಧರಿಸಿದೆ ಎಂದು ವರದಿಯಾಗಿದೆ.

ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಿಗೆ ಬದಲಾಗಿ ಶಿಕ್ಷಣ ಶಾಸ್ತ್ರ ಮತ್ತು ಅರ್ಥಶಾಸ್ತ್ರವನ್ನು ಐಚ್ಛಿಕ ಭಾಗಗಳನ್ನಾಗಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸಂದರ್ಭದಲ್ಲಿ ಯಾವ ನಿರ್ಬಂಧವೂ ಇರುವುದಿಲ್ಲ ಎಂದು ತಿಳಿದುಬಂದಿದೆ.

ಚುರುಮುರಿ

ಶ್ರೀಸಾಮಾನ್ಯ ಜಿರಲೆಗಳು!

• ಸುಮಂಗಲಾ

ಭಾನುವಾರ ಬೆಳಗ್ಗೆ ಈ ವಾರವಿಡೀ ಮಾಡಬೇಕಾದ ಕೆಲಸ ಕಾರ್ಯಗಳ ಪಟ್ಟಿಯನ್ನು ಚರ್ಚಿಸುತ್ತಿದ್ದೆ. ಬೆಕ್ಕಣ್ಣ ಕ್ಯಾರೇ ಎನ್ನದೇ ವಿಡಿಯೊ ನೋಡುತ್ತ, ‘ಭಲೇ... ಭಲೇ...’ ಎಂದು ಉದ್ಗರಿಸುತ್ತಿತ್ತು.

ನಾನು ‘ಗಂಭೀರವಾಗಿ ಕೂರಲೇ, ಚರ್ಚೆ ನಡಸೀನಿ’ ಅಂತ ಬೈದೆ.

‘ಕೆಡಿಪಿ ಸಭೆವಳಗೆ ಅಧಿಕಾರಿಗಳೇ ರಮ್ಮಿ ಆಡತಾರೆ. ಸಿದ್ದು ಅಂಕಲ್ಲಿನ ಸಾಧನಾ ಸಮಾವೇಶದ ವಿಡಿಯೊ ನಾ ನೋಡುತಿದ್ದರೆ ತಪ್ಪೇನು?’ ಎಂದು ವಾಪಸು ಗುರುಗುಟ್ಟಿತು. ಅದೂ ನಿಜವೆನ್ನಿಸಿ ತೆಪ್ಪಗಾದೆ.

‘ನೋಡು... ನಮ್ ಸಿದ್ದು ಅಂಕಲ್ಲು ಹೆಂಗೆ ಮಾರಾಜನಂಗೆ ರ್‍ಯಾಂಪು ಮೇಲೆ ನಡೆದು ಬಂದಾರೆ’ ಎಂದು ತೋರಿಸಿತು.

‘ಡಿಕೇಶಂಕಲ್ಲು ಕಾಟಾಚಾರಕ್ಕೆ ಮುಖ ತೋರಿಸಿ, ಗಪ್ಪನೆ ಮತ್ತೆ ದಿಲ್ಲಿಗೆ ಹಾರ್‍ಯಾರಂತೆ... ಮತ್ತೇನು ಕರಾಮತ್ತು ನಡೆಸ್ಯಾರೋ ಯಾರಿಗೆ ಗೊತ್ತು’ ಎಂದೆ.

‘ಎಷ್ಟೊಂದು ಮಂದಿ ಮುಂದಿನ ಸಲ ಕುರ್ಚಿ ನಂದೇ ಅಂತ ಟುವಾಲು ಹಿಡಕಂಡು ನಿಂತಾರೆ... ಡಿಕೇಶಂಕಲ್ಲು ಈಗಿಂದನೇ ಆ ಎಲ್ಲ ಟುವಾಲಿಗಿಂತ ಬ್ಯಾರೆ ಜಬರದಸ್ತ್ ಟುವಾಲು ರೆಡಿ ಮಾಡ್ಕಂಬಕು’ ಎಂದು ಬೆಕ್ಕಣ್ಣ ನಕ್ಕಿತು.

‘ವಿಧಾನಸೌಧದ ಸುತ್ತ ರನ್ನಿಂಗ್ ರೇಸ್ ಸ್ಪರ್ಧೆ ಏರ್ಪಡಿಸಿ, ಇಂತಿಷ್ಟು ಸೆಕಂಡ್‌ವಳಗೆ ಒಳಗೆ ಓಡಿ ಹೋಗಿ ಸಿ.ಎಂ ಕುರ್ಚಿ ಮ್ಯಾಲೆ ಟುವಾಲು ಹಾಕಿದವ್ರೇ ಸಿ.ಎಂ ಅಂತ ಮಾಡಬಕು’ ಎಂದೆ.

‘ಸಿ.ಎಂ ಕುರ್ಚಿ ರನ್ನಿಂಗ್ ರೇಸಿನ ಮಾನದಂಡ, ಅರ್ಹತೆ ಎಲ್ಲ ಬ್ಯಾರೇನೆ ಇರತೈತಿ. ಅದಿರಲಿ... ಈ ಶಾಸಕರು, ಮಂತ್ರಿಗಳನ್ನ ಆರಿಸಿ ಕಳಿಸಿದ ಶ್ರೀಸಾಮಾನ್ಯ ಮತದಾರರು ನೀವೂ ಒಂದು ಸಾಧನಾ ಸಮಾವೇಶ ಮಾಡಬಕು’ ಎಂದು ಬೆಕ್ಕಣ್ಣ ಮುಗುಮ್ಮಾಗಿ ಹೇಳಿತು.

‘ಈ ಎಲ್ಲಾ ಗೋಟಾವಳಿವಳಗೆ ಶ್ರೀಸಾಮಾನ್ಯರು ಬದುಕಿರೂದೆ ದೊಡ್ಡದು!’

‘ಜಿರಲೆಗಳು ಎಂಥಾ ಪರಿಸ್ಥಿತಿವಳಗೂ ಬದುಕುಳಿತಾವಂತೆ. ಶ್ರೀಸಾಮಾನ್ಯರೂ ಒಂಥರದ ಜಿರಲೆಗಳೇ! ನೀವೂ ಒಂದ್ ಸಮಾವೇಶ ಮಾಡಿರಿ’ ಎಂದು ಬೆಕ್ಕಣ್ಣ ಮಾತಿನ ಬಾಣವನ್ನು ಬಿಟ್ಟಿತು.

ಸಂಗತ

ವ್ಯಾಕರಣ ಬೇಕು, ಅನಿವಾರ್ಯ ಏನಲ್ಲ!

ವ್ಯಾಕರಣ ಒಂದು ಅದ್ಭುತ ಜ್ಞಾನ. ಆದರೆ, ಅದು ಎಲ್ಲರಿಗೂ ಅಗತ್ಯವಲ್ಲ, ಅನಿವಾರ್ಯವೂ ಅಲ್ಲ; ಭಾಷಾ ಸಾಮರ್ಥ್ಯಕ್ಕೆ ಮಾನದಂಡವೂ ಅಲ್ಲ.

• ಪು.ಸೂ. ಲಕ್ಷ್ಮೀನಾರಾಯಣ ರಾವ್

‘ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸುವಲ್ಲಿ ನಮ್ಮ ಶಿಕ್ಷಣ ಕ್ರಮ ವಿಫಲವಾಗುತ್ತಿದೆಯೆ?’ ಎಂಬ ಪ್ರಶ್ನೆ ಹಾಗೂ ‘ಭಾಷಾ ಬೋಧನೆಯಲ್ಲಿ ವಿಷಯಕ್ಕೆ ಮಹತ್ವ ನೀಡಿ ಅದನ್ನಷ್ಟೇ ಬೋಧಿಸುವುದು ನಮ್ಮ ಕಲಿಕಾ ಕ್ರಮದಲ್ಲಿನ ಬಹುದೊಡ್ಡ ಸಮಸ್ಯೆಯಾಗಿದೆ’ ಎಂಬ ಅಭಿಪ್ರಾಯ (ಲೇ: ಎಂ.ಜಿ. ರಾಮಚಂದ್ರ, ಜುಲೈ 17), ಸಮಸ್ಯೆಯನ್ನು ಸ್ಪಷ್ಟವಾಗಿಯೇ ಗುರ್ತಿಸಿದೆ. ಆದರೆ, ಸಮಸ್ಯೆ ನಿವಾರಣೆಗೆ ಅವರು ನೀಡಿರುವ, ‘ಕನ್ನಡವನ್ನು ಕಲಿಸುವ ಭಾಷಾ ಶಿಕ್ಷಕ, ತರಗತಿಯಲ್ಲಿ ಪಠ್ಯದಲ್ಲಿನ ವ್ಯಾಕರಣದ ಸಂಗತಿಗಳನ್ನು ಪರಿಚಯಿಸಿದರಷ್ಟೇ ಸಾಲದು; ಪ್ರತ್ಯೇಕವಾಗಿ ವ್ಯಾಕರಣ ಬೋಧನೆಯನ್ನೂ ಮಾಡಬೇಕು’ ಎಂಬ ಪರಿಹಾರವು, ಅವರಿಗಿರುವ ವ್ಯಾಕರಣದ ಮೇಲಿನ ಅರಿವು, ಅಭಿಮಾನವನ್ನು ವ್ಯಕ್ತಪಡಿಸುತ್ತದೆಯೇ ಹೊರತು ಪೂರ್ಣವಾಗಿ ಒಪ್ಪಲಾಗದು.

ವ್ಯಾಕರಣವು ಭಾಷೆಯ ಸ್ವರೂಪದ ಸೂಕ್ಷ್ಮಗಳನ್ನು ಸ್ವಾರಸ್ಯಕರವಾಗಿ ಹಾಗೂ ಆನಂದದಾಯಕವಾಗಿ ನಮಗೆ ಮನವರಿಕೆ ಮಾಡಿಕೊಡುತ್ತದೆ ಎಂಬುದು ನಿರ್ವಿವಾದದ ಸಂಗತಿ. ವ್ಯಾಕರಣದ ಮೊದಲ ಅಧ್ಯಾಯವಾದ ವರ್ಣಮಾಲೆಯೊಂದರಲ್ಲೇ ನಾವು ಅರಿತುಕೊಳ್ಳಬಹುದಾದ ಸಂಗತಿಗಳೇ ನಮಗೆ ನಿಸ್ಸಂಶಯವಾಗಿ ರೋಮಾಂಚನವನ್ನು ಉಂಟು ಮಾಡುತ್ತವೆ. ಆದರೆ, ಭಾಷಾ ಸಾಮರ್ಥ್ಯವನ್ನು ರೂಪಿಸಿಕೊಳ್ಳುವಲ್ಲಿ ವ್ಯಾಕರಣ ಜ್ಞಾನದ ಅನುಕೂಲವನ್ನು ಒದಗಿಸಿಕೊಡಬಹುದೇ ಹೊರತು ಅನಿವಾರ್ಯವಲ್ಲ. ವ್ಯಾಕರಣದ ಗಂಧ- ಗಾಳಿಯೂ ಇಲ್ಲದ ಅನೇಕರು ಉತ್ತಮಮಟ್ಟದ ಭಾಷಾ ಸಾಮರ್ಥ್ಯವನ್ನು ಗಳಿಸಿರುವ ಉದಾಹರಣೆಗಳು ನಮ್ಮಲ್ಲಿವೆ.

ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತಗಳಲ್ಲಿ ಪಠ್ಯಪುಸ್ತಕಗಳಲ್ಲಿರುವ ಗದ್ಯ, ಪದ್ಯಗಳ ಅರ್ಥವನ್ನು ಮಕ್ಕಳಿಗೆ ಹೇಳಿಕೊಡಲಾಗುತ್ತಿದೆಯೇ ಹೊರತು, ಭಾಷಾ ಕೌಶಲಗಳ ಬೆಳವಣಿಗೆಗೆ ಪೂರಕವಾಗಿ ಬೋಧನೆ ಮಾಡುತ್ತಿಲ್ಲ. ಮಕ್ಕಳು ಭಾಷೆಯನ್ನು ಕಲಿಯುವ ರೀತಿ, ಇದಮಿತ್ಥಂ ಎಂದು ಹೇಳಲಾಗದಷ್ಟು ಆಶ್ಚರ್ಯಕರ ಆಗಿರುತ್ತದೆ. ಒಮ್ಮೆ, ಏನೋ ತರಲೆ ಮಾಡುತ್ತಿದ್ದ ನನ್ನ ಎಲ್‌.ಕೆ.ಜಿ. ಹಂತದಲ್ಲಿರುವ ಮೊಮ್ಮಗಳಿಗೆ, ‘ಸುಮ್ನಿರು. ಇಲ್ಲಾಂದ್ರೆ ಚೆನ್ನಾಗಿ ಬಂದು ಹೊಡಿತೀನಿ’ ಅಂದದ್ದಕ್ಕೆ ಅವಳು, ‘ಚೆನ್ನಾಗಿ ಬಂದು ಹೊಡಿತೀನಿ ಅನ್ಬಾರದು ತಾತ, ಬಂದು ಚೆನ್ನಾಗಿ ಹೊಡಿತೀನಿ ಅನ್ನಬೇಕು’ ಅಂತ ಕನ್ನಡ ಮೇಷ್ಟ್ರನ್ನೇ ತಿದ್ದಿದ್ದಳು. ಹಾಗಾಗಿ, ಭಾಷಾ ಕಲಿಕೆ ಬಹಳ ವಿಸ್ಮಯವಾಗಿ ಆಗುತ್ತಿರುತ್ತದೆ. ನಾವು ಅದಕ್ಕೆ ಪೂರಕವಾಗಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

‘ಹಾಡ್ತಾ ಹಾಡ್ತಾ ರಾಗ; ಉಗುಳ್ತಾ ಉಗುಳ್ತಾ ರೋಗ’ ಎಂಬ ಗಾದೆಯಂತೆ, ಮಾತಾಡ್ತಾ ಇದ್ರೆ ಮಾತು, ಬರೆಯುತ್ತಾ ಇದ್ದರೆ ಬರವಣಿಗೆ ಬರುತ್ತದೆ. ಚರ್ಚಾ ಸ್ಪರ್ಧೆ, ಗದ್ಯ ಪದ್ಯ ವಾಚನ, ಏಕಪಾತ್ರಾಭಿನಯ, ಪ್ರಬಂಧ ರಚನೆ, ಗಾದೆಗಳ ಅರ್ಥ ವಿಸ್ತರಣೆ, ಸಾರಾಂಶ ಬರವಣಿಗೆ, ಗದ್ಯವನ್ನು ಸಂಗ್ರಹಿಸಿ ಬರೆಯುವುದು, ಪ್ರವಾಸ ಕಥನ, ಉಕ್ತಲೇಖನ– ಹೀಗೆ ಹತ್ತು ಹಲವು ಸಾಂದರ್ಭಿಕವಾಗಿ ಹೊಂದಿಕೊಳ್ಳುವಂತಹ ಕ್ರಿಯಾಯೋಜನೆಗಳ ಮೂಲಕ ಮಕ್ಕಳನ್ನು ಭಾಷೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ನಿರಂತರವಾಗಿ ಪ್ರಯತ್ನಿಸುತ್ತಿರಬೇಕು. ಆಗ, ತನಗೆ ತಾನೆ ಮಕ್ಕಳಲ್ಲಿ ಭಾಷೆಯ ಬಗ್ಗೆ ಆಸಕ್ತಿ ಹಾಗೂ ಕಲಿಕೆ ಸಾಧ್ಯವಾಗುತ್ತದೆ.

ಮಕ್ಕಳು ಸಾಮಾನ್ಯವಾಗಿ ವ್ಯಾಕರಣವನ್ನು ಕಬ್ಬಿಣದ ಕಡಲೆ ಎಂದು ಭಾವಿಸುತ್ತಾರೆ. (ನಾವು ಬಿ.ಎ. ಆನರ್ಸ್‌ನಲ್ಲಿ ಕೇಶಿರಾಜನ ಶಬ್ದಮಣಿದರ್ಪಣವನ್ನು ಅರಿತುಕೊಳ್ಳಲು ಹೆಣಗಾಡುತ್ತಿದ್ದೆವು). ಆದ್ದರಿಂದ, ಪಾಠ ಮತ್ತು ಪದ್ಯಗಳ ಬೋಧನೆಯ ನಡುವೆಯೇ ಬರಬಹುದಾದ ವ್ಯಾಕರಣದ ವಿಶೇಷಗಳನ್ನು ಬಿಡಿಸಿ ಹೇಳಿ ಮಕ್ಕಳಲ್ಲಿ ಕುತೂಹಲವನ್ನು ಉಂಟು ಮಾಡಬೇಕು.

ಭಾಷೆ ನಿಂತ ನೀರಲ್ಲ. ಕಾಲಕಾಲಕ್ಕೆ ಹಲವಾರು ಕಾರಣಗಳಿಂದಾಗಿ ಹೊಸ ಹೊಸ ಪದಗಳು, ನುಡಿಗಟ್ಟುಗಳು, ಶೈಲಿ, ನಿರೂಪಣೆ, ಸಂವಾದಗಳು ಹುಟ್ಟಿಕೊಳ್ಳುತ್ತಿರುತ್ತವೆ. ಅದು ಯಾವ ವ್ಯಾಕರಣ ನಿಯಮಗಳಿಗೂ ಒಳಪಡದೆ ತನ್ನದೇ ಆದ ರೀತಿಯಲ್ಲಿ ವಿನೂತನವಾಗಿ ವಿಕಾಸಗೊಳ್ಳುತ್ತಿರುತ್ತದೆ. ತದನಂತರ ವಯ್ಯಾಕರಣಿಗಳು ಅಲ್ಲಿ ಆಗಿರುವ ತರ್ಕವನ್ನು ಕಂಡುಹಿಡಿಯುತ್ತಾರೆ. ಹೀಗೆಯೇ ಬರೆಯಬೇಕು, ಹೀಗೆಯೇ ಮಾತನಾಡಬೇಕು ಎಂಬ ಕಟ್ಟಳೆಗಳನ್ನು ವಿಧಿಸಿದರೆ, ಯಾವುದೇ ಭಾಷೆಯು ಸಂಸ್ಕೃತದಂತೆ ಜನರಿಂದ ಮರೆಯಾಗುತ್ತದೆ. ಕುವೆಂಪುರವರು ಹೇಳುವ ಹಾಗೆ– ಈ ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿ ಶಾಸ್ತ್ರಗಳು, ‘ಕಲಿಯುವುದಕೆ ಅಲ್ಲು, ಮರೆಯುವುದಕೆ ಕಲ್ಲು’ ಎಂಬುದನ್ನು ಅರಿಯಬೇಕಾಗಿದೆ.

ಭಾಷೆಯನ್ನೇ ವಿಶೇಷವಾಗಿ ಅಧ್ಯಯನ ಮಾಡುವವರು ಮತ್ತು ಸಾಹಿತ್ಯಾಭ್ಯಾಸಿಗಳಿಗೆ ವ್ಯಾಕರಣದ ಅಧ್ಯಯನ ಖಂಡಿತವಾಗಿ ಸಹಾಯಕವಾಗುತ್ತದೆ. ಆದರೆ, ಸಾಮಾನ್ಯ ಜನರು ಭಾಷೆಯನ್ನು ಚೆನ್ನಾಗಿ ಕಲಿತರೆ ಸಾಕು.

ಪ್ರತ್ಯೇಕವಾದ ವ್ಯಾಕರಣ ಬೋಧನೆ ಮತ್ತು ವ್ಯಾಕರಣಬದ್ಧ ಬರವಣಿಗೆಯ ನಿರೀಕ್ಷೆ ಮಕ್ಕಳನ್ನು ಭಾಷಾ ಕಲಿಕೆಯಿಂದ ವಿಮುಖರನ್ನಾಗಿ ಮಾಡುತ್ತದೆ. ಭಾವನೆಗಳ, ವಿಚಾರಗಳ ಸಮರ್ಪಕ ಅಭಿವ್ಯಕ್ತಿಗಾಗಲೀ ಅಥವಾ ಗ್ರಹಿಕೆಗಾಗಲೀ ಬೇಕಾಗಿರುವುದು ಪದ ಸಂಪತ್ತು. ವೈಚಾರಿಕತೆ, ಚಿಂತನಶೀಲ ಬುದ್ಧಿಮತ್ತೆ, ನಿರಂತರ ಅಧ್ಯಯನ, ಅನುಭವ ಪ್ರಾಮಾಣ್ಯ ಮುಂತಾದ ಒಳನೋಟಗಳಿಂದಲೂ ಭಾಷಾ ಸಾಮರ್ಥ್ಯ ವಿಕಸನ ಹೊಂದುತ್ತಿರುತ್ತದೆ. ‘ಸ್ವಾಧ್ಯಾಯಾನ್ನಃ ಪ್ರಮದಿತವ್ಯಂ’ (ಸ್ವಂತ ಅಧ್ಯಯನವನ್ನು ಬಿಡಬಾರದು) ಎಂಬ ತೈತ್ತಿರೀಯ ಉಪನಿಷತ್ ಮಾತನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಭಾಷೆಗೂ, ಬದುಕಿಗೂ, ಸಂಸ್ಕೃತಿಗೂ, ಪರಂಪರೆಗೂ ಅವಿನಾಭಾವ ಸಂಬಂಧವಿದೆ. ವ್ಯಾಕರಣವೆಂಬುದು ಅದ್ಭುತವಾದ ಒಂದು ಜ್ಞಾನ. ಆದರೆ, ಎಲ್ಲರಿಗೂ ಅನಿವಾರ್ಯ ಹಾಗೂ ಭಾಷಾ ಸಾಮರ್ಥ್ಯಕ್ಕೆ ಅತ್ಯಗತ್ಯ ಎಂಬುದು ವಾಸ್ತವ ಸಂಗತಿಯಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದಲ್ಲಿ ಮುಂಗಾರು ಮಳೆ

(ಸೆಂ.ಮೀಗಳಲ್ಲಿ) (ಜೂನ್ 1ರಿಂದ ಜುಲೈ 19ವರೆಗೆ)

ವಾಡಿಕೆ | ವಾಸ್ತವ | ○ ವ್ಯತ್ಯಾಸ (%)

ಜಿಲ್ಲೆ	ವ್ಯತ್ಯಾಸ (%)	ವಾಡಿಕೆ	ವಾಸ್ತವ
ಬೆಂಗಳೂರು ನಗರ	-24	12.2	9.3
ಬೆಂಗಳೂರು ಗ್ರಾಮಾಂತರ	-37	11.5	7.2
ಬೆಂಗಳೂರು ದಕ್ಷಿಣ	-17	11.6	9.7
ಕೋಲಾರ	-48	10.7	5.6
ಚಿಕ್ಕಬಳ್ಳಾಪುರ	-39	11.2	6.8
ತುಮಕೂರು	-30	9.8	6.9
ಚಿತ್ರದುರ್ಗ	-34	8.4	5.5
ದಾವಣಗೆರೆ	17	14.5	17.0
ಚಾಮರಾಜನಗರ	-40	9.4	5.7
ಮೈಸೂರು	-20	17.1	13.6
ಮಂಡ್ಯ	-5	8.9	8.5
ಬಳ್ಳಾರಿ	-41	10.7	6.3
ವಿಜಯನಗರ	3	13.2	13.6
ಕೊಪ್ಪಳ	-7	11.4	10.6
ರಾಯಚೂರು	-17	13.6	11.4
ಕಲಬುರಗಿ	-31	18.3	12.6
ಯಾದಗಿರಿ	-25	16.7	12.4
ಬೀದರ್	-50	21.6	10.8
ಬೆಳಗಾವಿ	23	26.3	32.5
ಬಾಗಲಕೋಟೆ	1	12.2	12.3
ವಿಜಯಪುರ	-9	13.2	12.0
ಗದಗ	-1	12.7	12.6
ಹಾವೇರಿ	-12	22.3	19.7
ಧಾರವಾಡ	0	21.9	21.8
ಶಿವಮೊಗ್ಗ	-4	95.2	91.8
ಹಾಸನ	13	32.2	36.4
ಚಿಕ್ಕಮಗಳೂರು	-13	67.1	58.1
ಕೊಡಗು	1	107.5	108.7
ದಕ್ಷಿಣ ಕನ್ನಡ	8	168.7	181.8
ಉಡುಪಿ	9	200.3	217.5
ಉತ್ತರ ಕನ್ನಡ	9	130.6	142.3



ರಾಜ್ಯದ 21 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ● 12 ಜಿಲ್ಲೆಗಳಲ್ಲಿ ಕೊರತೆ ತೀವ್ರ ● ಬಿತ್ತನೆ, ಬೆಳೆಗಳ ಮೇಲೆ ಪರಿಣಾಮ

ಮುಂಗಾರಿನಲ್ಲೇ ಮುನಿದ ವರುಣ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ದೇವರಮರಿಕುಂಟೆ ಗ್ರಾಮದಲ್ಲಿ ಉಳುಮೆ ಮಾಡುತ್ತಿದ್ದ ರೈತರು

ಪ್ರಜಾವಾಣಿ ವಾರ್ತೆ

ರಾಜ್ಯದ ಕರಾವಳಿ, ಮಲೆನಾಡು ಭಾಗದಲ್ಲಿ ಮುಂಗಾರು ಮಳೆ ಅಬ್ಬರಿಸುತ್ತಿದ್ದರೂ, ಬಯಲು ಸೀಮೆ ಪ್ರದೇಶದ ಹಲವು ಜಿಲ್ಲೆಗಳು ಮಳೆ ಕೊರತೆ ಎದುರಿಸುತ್ತಿವೆ. ದಕ್ಷಿಣ ಮತ್ತು ಉತ್ತರ ಒಳನಾಡಿನ 21 ಜಿಲ್ಲೆಗಳಲ್ಲಿ ವಾಡಿಕೆಗಿಂತಲೂ ಕಡಿಮೆ ಮಳೆಯಾಗಿದೆ. ಈ ಪೈಕಿ 12 ಜಿಲ್ಲೆಗಳಲ್ಲಿ ಕೊರತೆ ತೀವ್ರವಾಗಿದ್ದು, ಬರದ ಭೀತಿ ಎದುರಾಗಿದೆ. ಹಲವು ಜಿಲ್ಲೆಗಳಲ್ಲಿ ಬಿತ್ತನೆ ಕಾರ್ಯ ಚೆನ್ನಾಗಿ ನಡೆದಿದೆ. ಆದರೆ, ಚಿಗುರೊಡೆದ ಬೆಳೆಗಳಿಗೆ ನೀರಿನ ಕೊರತೆ ಉಂಟಾಗಿ ಒಣಗಲು ಆರಂಭಿಸಿವೆ. ಕೆಲವು ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆಯಾಗಿಲ್ಲ. ಇದರಿಂದಾಗಿ ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ಮಳೆ ಕೊರತೆ ತೀವ್ರವಾಗಿದೆ. ಉತ್ತರ ಒಳನಾಡಿನ ಬಳ್ಳಾರಿ, ಕಲಬುರಗಿ, ಯಾದಗಿರಿ, ಮತ್ತು ಬೀದರ್‌ನಲ್ಲೂ ಇದೇ ಸ್ಥಿತಿ ಇದೆ. ಈ ಎಲ್ಲಾ ಜಿಲ್ಲೆಗಳಲ್ಲಿ ಶೇ 20ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಮಳೆ ಕೊರತೆ ಉಂಟಾಗಿದೆ. ಉಳಿದಂತೆ ಬೆಂಗಳೂರು ದಕ್ಷಿಣ, ಮಂಡ್ಯ (ದಕ್ಷಿಣ ಒಳನಾಡು), ಕೊಪ್ಪಳ, ರಾಯಚೂರು, ವಿಜಯಪುರ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಮುಂಗಾರಿನ ಒಂದೂವರೆ ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಮಲೆನಾಡು ಭಾಗದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಮಳೆ ಕೊರತೆ ಉಂಟಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ, ಮುಂಗಾರು ಆರಂಭದ ಜೂನ್ 1ರಿಂದ ಜುಲೈ 19ರವರೆಗಿನ ಅವಧಿಯಲ್ಲಿ ರಾಜ್ಯದಲ್ಲೇ ಬೀದರ್ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ, ಶೇ 50ರಷ್ಟು ಕಡಿಮೆ ಮಳೆಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಶೇ 48ರಷ್ಟು ಕೊರತೆ ಉಂಟಾಗಿದೆ. ಬಳ್ಳಾರಿಯಲ್ಲಿ ಶೇ 41 ಮತ್ತು ಚಾಮರಾಜನಗರದಲ್ಲಿ ಶೇ 40ರಷ್ಟು ಮಳೆ ಕೊರತೆಯಾಗಿದೆ.

ಸದ್ಯಕ್ಕೆ ಯಾವ ಜಿಲ್ಲೆಯಲ್ಲೂ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗಿರುವ ಬಗ್ಗೆ ವರದಿಯಾಗಿಲ್ಲ. ಆದರೆ, ಇದೇ ಪರಿಸ್ಥಿತಿ ಮುಂದುವರಿದರೆ ಹಲವು ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ಕಾಡಬಹುದು ಎಂಬ ಆತಂಕವನ್ನು ರೈತರು ವ್ಯಕ್ತಪಡಿಸಿದ್ದಾರೆ.

ನಿರೀಕ್ಷೆಯಂತೆ ಮಳೆಯಾಗದಿದ್ದರೂ, ಸದ್ಯದ ಮಟ್ಟಿಗೆ ಯಾವ ಸಮಸ್ಯೆಯೂ ಇಲ್ಲ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ. ರೈತರು ಆತಂಕ ಪಡಬೇಕಾಗಿಲ್ಲ ಎಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಹೇಳಿದ್ದಾರೆ.

ಬಿತ್ತಿದ ಬೆಳೆಗಿಲ್ಲ ನೀರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಈ ವರ್ಷ ಮುಂಗಾರು ಪೂರ್ವ ಮಳೆ ಕೈಕೊಟ್ಟಿತ್ತು. ಹಾಗಾಗಿ, ಮುಂಗಾರು ಅವಧಿಯಲ್ಲಾದರೂ ಉತ್ತಮ ಮಳೆಯಾಗುವ ನಿರೀಕ್ಷೆಯಲ್ಲಿ ರೈತರಿದ್ದರು. ಮೇ ಕೊನೆಗೆ-ಜೂನ್ ಆರಂಭದಲ್ಲಿ ಉತ್ತಮ ಮಳೆಯಾಗಿದ್ದರಿಂದ ಹಲವು ಜಿಲ್ಲೆಗಳ ಮಳೆಯಾಶ್ರಿತ ರೈತರು ವಿವಿಧ ಬೆಳೆಗಳ ಬಿತ್ತನೆ ಮಾಡಿದ್ದರು. ಬಿತ್ತನೆಯ ನಂತರವೂ ಮಳೆಯಾಗಿದ್ದರಿಂದ ಬೀಜಗಳು ಮೊಳಕೆಯೊಡೆದಿವೆ. ಆದರೆ, ಪೈರುಗಳಿಗೆ ನೀರು ಅಗತ್ಯವಿರುವಾಗ ಮಳೆಯಾಗದಿರುವುದರಿಂದ ಬೆಳೆನಷ್ಟದ ಆತಂಕವನ್ನು ರೈತರು ಎದುರಿಸುವಂತಾಗಿದೆ.

ಬೆಂಗಳೂರು ದಕ್ಷಿಣ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ತೀವ್ರ ಮಳೆಕೊರತೆ ಎದುರಿಸುತ್ತಿರುವ ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಿತ್ತನೆಯಾಗಿದೆ. ಮಳೆಯಾಗದಿರುವುದರಿಂದ ರೈತರು ಬಿತ್ತನೆ ಕಾರ್ಯಕ್ಕೆ ಮುಂದಾಗಿಲ್ಲ. ಭೂಮಿ ಹದ ಮಾಡಿ, ಬಿತ್ತನೆ ಬೀಜ, ರಸಗೊಬ್ಬರವನ್ನು ಸಂಗ್ರಹಿಸಿಕೊಟ್ಟುಕೊಂಡು ವರ್ಷಧಾರೆಗಾಗಿ ಕಾದಿದ್ದಾರೆ. ❖

> ಚದುರಿದಂತೆ ಸೋನೆ ಮಳೆಯಾಗುತ್ತಿರುವ ಕಾರಣ ಭೂಮಿ ನೆನೆಯುತ್ತಿಲ್ಲ. ಈ ಮಳೆಗೆ ಬಿತ್ತನೆ ಮಾಡಲೂ ಸಾಧ್ಯವಿಲ್ಲ. ಇನ್ನೊಂದು ವಾರದಲ್ಲಾದರೂ ಮಳೆ ಸುರಿದರೆ ಬಿತ್ತನೆ ಸಾಧ್ಯವಿದೆ. ಇಲ್ಲದಿದ್ದರೆ ಸಂಕಷ್ಟಕ್ಕೆ ಸಿಲುಕುತ್ತೇವೆ
>
> **ಡಿ.ಎಂ.ಚನ್ನಕೇಶವಮೂರ್ತಿ**, ಈಶ್ವರಗೆರೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

> ಜಿಲ್ಲೆಯಲ್ಲಿ ಮಳೆ ತಿಂಗಳಿಡೀ ಬಂದಿಲ್ಲ. ಆಗೊಮ್ಮೆ ಈಗೊಮ್ಮೆ ಬಂದಿದೆ. ಮಳೆ ಆಗಾಗ್ಗೆ ಸುರಿದರೆ ನೆಲ ಹದವಾಗುತ್ತದೆ. ಒಂದೆರಡು ದಿನ ಜೋರಾಗಿ ಬಂದು ಹೋದರೆ ಪ್ರಯೋಜನವಾಗದು. ಈಗಿನ ಪರಿಸ್ಥಿತಿ ನೋಡಿದರೆ ಈ ಸಲವೂ ಬರಗಾಲದ ಛಾಯೆ ಆವರಿಸುವಂತಿದೆ
>
> **ಆದೀಶ್**, ಪಾಲಬೋವಿದೊಡ್ಡಿ, ಬೆಂಗಳೂರು ದಕ್ಷಿಣ ಜಿಲ್ಲೆ

> ಉತ್ತಮ ಮಳೆ ನಿರೀಕ್ಷೆಯಲ್ಲಿ ಹತ್ತಿ, ತೊಗರಿ ಬಿತ್ತಿದ್ದೆವು. ಆದರೆ, ಬೆಳೆಯುವ ಹಂತದಲ್ಲಿ ಉತ್ತಮ ಮಳೆ ಆಗದೇ ಇದ್ದುದರಿಂದ ಬೆಳೆಗಳು ಒಣಗಿ ಹೋಗುತ್ತಿವೆ
>
> **ಸಂತೋಷ ಗಂಜಿ**, ಮಾಶಾಳ ಗ್ರಾಮ, ಅಫಜಲಪುರ ತಾಲ್ಲೂಕು, ಕಲಬುರಗಿ ಜಿಲ್ಲೆ

ಎಲ್ಲಿ, ಎಷ್ಟು ಮಳೆ?

(ಸೆಂ.ಮೀಗಳಲ್ಲಿ) (ಜೂನ್ 1ರಿಂದ ಜುಲೈ 19ವರೆಗೆ)

ಪ್ರದೇಶ	ವಾಡಿಕೆ	ವಾಸ್ತವ	ವ್ಯತ್ಯಾಸ (%)
ದಕ್ಷಿಣ ಒಳನಾಡು	11.1	8.4	-24
ಉತ್ತರ ಒಳನಾಡು	17	15.7	-8
ಮಲೆನಾಡು/ ಅರೆ ಮಲೆನಾಡು	73.3	71.1	-3
ಕರಾವಳಿ	153.7	166.9	9

ಅರೆಮಲೆನಾಡಲ್ಲೇ ಮಳೆ ಕಡಿಮೆ!

ಹೆಚ್ಚು ಮಳೆಯಾಗುವ ಕೊಡುಗು ಜಿಲ್ಲೆಯಲ್ಲೇ ಜುಲೈ ತಿಂಗಳಲ್ಲಿ ಮಳೆ ಕೊರತೆಯಾಗಿದೆ. ಜುಲೈನಲ್ಲಿ 18 ಸೆಂ.ಮೀ. ಮಳೆ ಆಗಬೇಕಿತ್ತು, ಆದರೆ, ಜುಲೈ 19ರವರೆಗೆ 14 ಸೆಂ.ಮೀ ಮಳೆಯಾಗಿದ್ದು, ಶೇ 22ರಷ್ಟು ಕೊರತೆ ಎದುರಾಗಿದೆ.

ಮಲೆನಾಡು/ಅರೆಮಲೆನಾಡು ವ್ಯಾಪ್ತಿಯ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಜೂನ್ 1ರಿಂದ ಜುಲೈ 19ರನಡುವೆ ಕ್ರಮವಾಗಿ ಶೇ 13 ಮತ್ತು ಶೇ 4ರಷ್ಟು ಕಡಿಮೆ ಮಳೆಯಾಗಿದೆ.

ಮಳೆ ಕೊರತೆ ಜಿಲ್ಲೆಗಳಲ್ಲಿ ಬಿತ್ತನೆ ಗುರಿ, ಸಾಧನೆ (ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	ಬಿತ್ತನೆ ಗುರಿ	ಸಾಧನೆ
ಬೆಂಗಳೂರು ದಕ್ಷಿಣ	81,493	1,780
ಕೋಲಾರ	72,900	2,363
ಚಿಕ್ಕಬಳ್ಳಾಪುರ	1,33 ಲಕ್ಷ	12,696
ತುಮಕೂರು	3.20 ಲಕ್ಷ	50,000
ಚಿತ್ರದುರ್ಗ	3.17 ಲಕ್ಷ	1.37 ಲಕ್ಷ
ಚಾಮರಾಜನಗರ	1.9 ಲಕ್ಷ	70,000
ಮೈಸೂರು	3.75 ಲಕ್ಷ	2 ಲಕ್ಷ
ಮಂಡ್ಯ	1.92 ಲಕ್ಷ	24,583
ಬಳ್ಳಾರಿ	1.63 ಲಕ್ಷ	50,000
ವಿಜಯನಗರ	2.78 ಲಕ್ಷ	2.40 ಲಕ್ಷ
ಕೊಪ್ಪಳ	3.64 ಲಕ್ಷ	2.70 ಲಕ್ಷ
ರಾಯಚೂರು	5.53 ಲಕ್ಷ	2.69 ಲಕ್ಷ
ಕಲಬುರಗಿ	8.10 ಲಕ್ಷ	7.21 ಲಕ್ಷ
ಯಾದಗಿರಿ	4.16 ಲಕ್ಷ	2.70 ಲಕ್ಷ
ಬೀದರ್	4.22 ಲಕ್ಷ	4.15 ಲಕ್ಷ
ಗದಗ	3.06 ಲಕ್ಷ	3.02 ಲಕ್ಷ
ಹಾವೇರಿ	3.14 ಲಕ್ಷ	2.98 ಲಕ್ಷ
ಶಿವಮೊಗ್ಗ	1.25 ಲಕ್ಷ	45,292
ಚಿಕ್ಕಮಗಳೂರು	90,000	17,000

ಮೋಡವಿದ್ದರೂ ಮಳೆ ಇಲ್ಲ

ದಕ್ಷಿಣ ಒಳನಾಡು ವ್ಯಾಪ್ತಿಯ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಇದ್ದರೂ ವರುಣನ ಸಿಂಚನವಾಗುತ್ತಿಲ್ಲ. ಬೀಸುವ ಗಾಳಿಗೆ ಮೋಡಗಳು ಚದುರುತ್ತಿದ್ದು, ಕೆಲವು ಭಾಗಗಳಲ್ಲಿ ಸಣ್ಣ ಹನಿಗಳು ಬಿದ್ದು, ಭೂಮಿಯ ಮೇಲ್ಮೈಯನ್ನು ಮಾತ್ರ ತುಸು ತೇವ ಮಾಡುತ್ತಿದೆ. ಇದರಿಂದ ಉಳುಮೆ, ಬಿತ್ತನೆ ಮಾಡಲಾಗುತ್ತಿಲ್ಲ.

ತುಮಕೂರು ಜಿಲ್ಲೆಯಲ್ಲಿ ಮುಂಗಾರು ಪೂರ್ವದ ಮಳೆಗೆ ಬಿತ್ತನೆ ಮಾಡಿದ್ದ ಹೆಸರು, ಉದ್ದು, ಅಲಸಂದೆ ಬೆಳೆ ಕೆಲವು ಕಡೆಗಳಲ್ಲಿ ಒಣಗಿದ್ದು, ಇಳುವರಿ ತೀವ್ರವಾಗಿ ಕುಸಿತ ಕಂಡಿದೆ. ಮಧುಗಿರಿ, ಚಿಕ್ಕನಾಯಕನಹಳ್ಳಿ, ಶಿರಾ ಭಾಗದಲ್ಲಿ ಜಾನುವಾರು ಮೇವಿಗೆ ಸಮಸ್ಯೆ ಆರಂಭವಾಗಿದೆ.

ಕೋಲಾರ ಜಿಲ್ಲೆಯಲ್ಲಿ ಶೇ 3.2ರಷ್ಟು ಮಾತ್ರ ಬಿತ್ತನೆಯಾಗಿದೆ. ಜಿಲ್ಲೆಯ ಪ್ರಮುಖ ಬೆಳೆಯಾಗಿರುವ ರಾಗಿ ಬಿತ್ತನೆ ಕೇವಲ 522 ಹೆಕ್ಟೇರ್‌ನಲ್ಲಿ (ಗುರಿ 54,136) ನಡೆದಿದೆ. ಆಗಸ್ಟ್ 15ರವರೆಗೆ ಬಿತ್ತನೆಗೆ ಅವಕಾಶವಿದ್ದು, ಮುಗಿಲತ್ತ ರೈತರ ಚಿತ್ತ ನೆಟ್ಟಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಶೇ 9.56ರಷ್ಟು ಮಾತ್ರ ಬಿತ್ತನೆಯಾಗಿದೆ. ಜಿಲ್ಲೆಯಾದ್ಯಂತ ಜೂನ್ ತಿಂಗಳಲ್ಲಿ ಮಳೆಯ ಕೊರತೆ ತೀವ್ರವಾಗಿ ಬಾಧಿಸಿತ್ತು. ಈಗ ಮೂರು ದಿನಗಳಿಂದ ಉತ್ತಮ ಮಳೆ ಸುರಿಯುತ್ತಿದೆ. ಇದೇ ರೀತಿ ಮಳೆ ಮುಂದುವರಿದರೆ ಕೃಷಿ ಚಟುವಟಿಕೆ ಕೈಗೊಳ್ಳಬಹುದು ಎಂದು ರೈತರು ಹೇಳಿದ್ದಾರೆ.

ರಾಜ್ಯದ ಗಡಿ ಜಿಲ್ಲೆ ಚಾಮರಾಜನಗರದ ಐದು ತಾಲ್ಲೂಕುಗಳ ಪೈಕಿ ನಾಲ್ಕು ತಾಲ್ಲೂಕುಗಳಲ್ಲಿ (ಹನೂರು ಶೇ 65.9, ಕೊಳ್ಳೇಗಾಲ ಶೇ 58.7, ಯಳಂದೂರು ಶೇ 58.7 ಹಾಗೂ ಚಾಮರಾಜನಗರ ಶೇ 36) ಮಳೆ ಕೊರತೆ ಕಾಣಿಸಿಕೊಂಡಿದೆ.

ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ಅತಿವೃಷ್ಟಿಯಾಗಿದ್ದರೆ, ಬಯಲುಸೀಮೆ, ಅರೆ ಮಲೆನಾಡು ಭಾಗದಲ್ಲಿ ಕಡಿಮೆ ಮಳೆಯಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಶೇ 166ರಷ್ಟು ಹೆಚ್ಚು ಮಳೆಯಾಗಿದೆ. ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಶೇ 20ರಷ್ಟು ಕಡಿಮೆ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಸದುರ್ಗ ತಾಲ್ಲೂಕುಗಳಲ್ಲಿ ಬರದ ಛಾಯೆ ಆವರಿಸಿದ್ದು, ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಇಲ್ಲಿ ಬೆಳೆಯುವ ಪ್ರಮುಖ ಬೆಳೆ ಶೇಂಗಾ ಬಿತ್ತನೆಗೆ ಅವಧಿ ಮೀರುತ್ತಿದ್ದು, ವಾರದೊಳಗೆ ಮಳೆ ಬಾರದಿದ್ದರೆ ರೈತರ ಬದುಕು ಅಸ್ತವ್ಯಸ್ತಗೊಳ್ಳಲಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹೊಂಗನೂರು ಕೆರೆ ಮಳೆಗಾಲದಲ್ಲೂ ತುಂಬಿಲ್ಲ

> ಜಿಲ್ಲೆಯಲ್ಲಿ ಜೂನ್‌ನಲ್ಲಿ ಮಳೆ ಕೊರತೆ ಉಂಟಾಗಿದೆ. ನಮ್ಮಲ್ಲಿ ಮುಂಗಾರು ಮಳೆ ಆಗುವುದೇ ಕೊನೆ ಹಂತದಲ್ಲಿ. ಹೀಗಾಗಿ, ಈ ತಿಂಗಳಾಂತ್ಯದಲ್ಲಿ ಮಳೆ ಬರುವ ಭರವಸೆ ಇದೆ. ಬಿತ್ತನೆಗೆ ಇನ್ನೂ ಅವಕಾಶ ಇದೆ. ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಆಗಿಲ್ಲ
>
> **ಎಂ.ಆರ್.ರವಿ**, ಕೋಲಾರ ಜಿಲ್ಲಾಧಿಕಾರಿ

> ವಾರದಲ್ಲಿ ಉತ್ತಮ ಮಳೆಯಾಗುವ ಮುನ್ಸೂಚನೆ ಇದೆ. ಮಳೆ ಬಾರದಿದ್ದರೆ ಪರಿಸ್ಥಿತಿ ಎದುರಿಸಲು ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಈಗಾಗಲೇ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ
>
> **ಟಿ.ವೆಂಕಟೇಶ್**, ಚಿತ್ರದುರ್ಗ ಜಿಲ್ಲಾಧಿಕಾರಿ

> ಜಿಲ್ಲೆಯಲ್ಲಿ ಮಳೆ ಆಶಾದಾಯಕವಾಗಿದ್ದು, ಇನ್ನೂ ನಾಲ್ಕು ದಿನಗಳವರೆಗೆ ಮಳೆ ಸುರಿಯಬಹುದು ಎಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಹಾಗಾಗಿ, ರೈತರು ಚಿಂತೆ ಮಾಡುವ ಅವಶ್ಯಕತೆ ಇಲ್ಲ. ಜಾನುವಾರುಗಳಿಗೂ ಮೇವಿನ ಕೊರತೆ ಇಲ್ಲ
>
> **ಸಮದ್ ಪಟೇಲ್**, ಕಲಬುರಗಿ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ

> ಜಿಲ್ಲೆಯಲ್ಲಿ ನಿರೀಕ್ಷೆಗೆ ತಕ್ಕಂತೆ ಜೂನ್, ಜುಲೈ ತಿಂಗಳಲ್ಲಿ ಮಳೆಯಾಗಿಲ್ಲ. ಮುಂಬರುವ ದಿನಗಳಲ್ಲಿ ಉತ್ತಮ ಮಳೆಯ ನಿರೀಕ್ಷೆ ಇದೆ. ರೈತರು ಆತಂಕ ಪಡಬೇಕಿಲ್ಲ
>
> **ದೇವಿಕಾ ಆರ್**, ಬೀದರ್ ಜಂಟಿ ಕೃಷಿ ನಿರ್ದೇಶಕಿ

ಮಳೆ ಬಂದರಷ್ಟೇ ಬೆಳೆಗೆ ಉಳಿಗಾಲ

ಉತ್ತರ ಒಳನಾಡು ವ್ಯಾಪ್ತಿಯ ಬಳ್ಳಾರಿ, ವಿಜಯನಗರ, ಬಾಗಲಕೋಟೆ, ವಿಜಯಪುರ, ಹಾವೇರಿ ಜಿಲ್ಲೆಗಳಲ್ಲಿ ವಾಡಿಕೆಯಂತೆ ಮಳೆ ಸುರಿದಿಲ್ಲ. ಇದರಿಂದಾಗಿ ಬಿತ್ತನೆಯಲ್ಲಿ ಕುಂಠಿತವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಆಗಾಗ ಬೀಳುತ್ತಿರುವ ತುಂತುರು ಮಳೆಯಿಂದಾಗಿ ಬೆಳೆಗೆ ಹಾನಿಯಾಗುವುದು ತಪ್ಪಿದೆ. ಆದರೆ, ಪೈರು ಸಮೃದ್ಧವಾಗಿ ಬೆಳೆದಿಲ್ಲ.

ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳಲ್ಲೂ ಮಳೆಕೊರತೆ ಇದೆ. ಮಳೆಯ ನಿರೀಕ್ಷೆಯಲ್ಲಿ ಮುಂಗಾರು ಆರಂಭದ ನಂತರ ಬಹುತೇಕ ರೈತರು ಬಿತ್ತನೆ ಮಾಡಿದ್ದಾರೆ. ಆ ಬಳಿಕ ಮಳೆ ಕೊರತೆ ಉಂಟಾಗಿತ್ತು. ಎರಡು ದಿನಗಳಿಂದ ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ರೈತರು ಕೊಂಚ ನಿರಾಳರಾಗಿದ್ದಾರೆ.

ಹಾಗಿದ್ದರೂ ಬೀದರ್ ಜಿಲ್ಲೆಯಲ್ಲಿ ಮಳೆ ಕೊರತೆ ಪ್ರಮಾಣ ಶೇ 50ರಷ್ಟಿದೆ. 2022ರಲ್ಲಿ ಜಿಲ್ಲೆಯಲ್ಲಿ ತೀವ್ರ ಬರಪರಿಸ್ಥಿತಿ ಎದುರಾಗಿತ್ತು. ಮಳೆ ಕೊರತೆಯ ನಡುವೆಯೇ ಶೇ 90ಕ್ಕೂ ಹೆಚ್ಚು ಪ್ರಮಾಣದಲ್ಲಿ ಬಿತ್ತನೆಯಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ, ಜೇವರ್ಗಿ, ಕಲಬುರಗಿ ತಾಲ್ಲೂಕಿನಲ್ಲಿ ಮೇ ತಿಂಗಳಲ್ಲಿ ಉತ್ತಮವಾಗಿ ಸುರಿದ ಮಳೆ ಜೂನ್, ಜುಲೈನಲ್ಲಿ ಕೈಕೊಟ್ಟಿದೆ. ಹೀಗಾಗಿ, ಮುಂಗಾರು ಮಳೆ ನಂಬಿ ಹತ್ತಿ, ತೊಗರಿ ಬೆಳೆದ ರೈತರು ನಿರಾಶರಾಗಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ತೊಗರಿ ಮತ್ತು ಹತ್ತಿ ಬೆಳೆಗಳು ನೀರಿಲ್ಲದೆ ನಲುಗುತ್ತಿವೆ.

ಗದಗ ಜಿಲ್ಲೆಯ ನರೇಗಲ್‌ನ ಹಿರೇಕೆರೆಯಲ್ಲಿ ಮಹಿಳೆಯರು ಮಳೆಗಾಗಿ ಗಂಗಾಪೂಜೆ ಮಾಡಿದರು

ಪದಬಂಧ 6110

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಗಾಯಗಳು ಮಾಯಲೆಂದು ಲೇಪಿಸುವ ಔಷಧ (3)
4.ತೆಂಗಿನ ಕಾಯಿನ ಒಣಗಿದ ತಿರುಳು (3)
5.ರತ್ನಖಚಿತವಾದ ಆಭರಣ (4)
6.ಮೋಸಗಾರಿಕೆ ಅಥವಾ ವಂಚಕತನ (4)
7.ಗಣಿಯ ಧಣಿ ಕಲಿಸಿರುವ ಲೆಕ್ಕಶಾಸ್ತ್ರ (3)
9.ಉತ್ತಮ ಜಾತಿಯ ಜೇನುತುಪ್ಪ (3)
13.ಮರದ ಬೊಂಬೆ ಕೆತ್ತನೆ ಕೆಲಸ ಮಾಡುವವನು (4)
14.ಉಗ್ರವಾದ ಹೊಡೆದಾಟ (4)
15.ಮಂಗಳದ್ರವ್ಯವಾದ ಕೇಸರಿಬಣ್ಣದ ಪುಡಿ (3)
16.ಪ್ರವಾಸದ ವೇಳೆಯಲ್ಲಿ ಬಂದಿರುವ ನೆರೆ (3)

ಮೇಲಿಂದ ಕೆಳಕ್ಕೆ

1.ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವವನು (4)
2.ಬರೀ ಮಣಿಯಲ್ಲ! ಕಿರೀಟರತ್ನವಿದು (5)
3.ಮಳೆಯಲ್ಲಿರುವ ಹೆಂಗಸು (3)
5.ಮಂದಿಯ ಮನಸ್ಸು (4)
8.ತಡವಾಗಿ ಬಿತ್ತಿರುವ ಅಲಸಂದೆ (4)
10.ಯುದ್ಧದ ಕೇಸರಿ (5)
11.ಹಣಕ್ಕಾಗಿ ನಡೆದ ಗೊಂದಲ (4)
12.ಗುಣವಂತ ಇಲ್ಲಿದ್ದಾನೆ (3)

6109ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಡಮರುಗ 3.ಮಳಿಗೆ 5.ಯಾತ್ರಿಕ 6.ಸದಾಚಾರ 8.ರಸಪೂರ್ಣ 10.ನವರಂಗ 12.ಮರಕತ 13.ಜಾತಕ 16.ವಸನ 17.ದಸಕತ್ತು

ಮೇಲಿಂದ ಕೆಳಕ್ಕೆ:
1.ಡಬ್ಬ 2.ಗಡಿಯಾರ 3.ಮಧುಕರ 4.ಗೇಣು 7.ದಾನವ 9.ಪೂರ್ವಿಕ 11.ಗಜಾನನ 12.ಮಕರಂದ 14.ರವ 15.ತುತ್ತು

ಸುಡೊಕು 6494

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

6493 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ರಾಮನ ನ್ಯಾಯ ಮಾರ್ಗ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಅಪ್ಪನ ಮಾತನ್ನು ನಡೆಸುವ ಉದ್ದೇಶದಿಂದ ಕಾಡಿಗೆ ಹೊರಟ ರಾಮ ದಶರಥನನ್ನು ಭೇಟಿಯಾಗುತ್ತಾನೆ. ಕಟ್ಟಕಡೆಯ ಬಾರಿಗೆ ಎಂಬಂತೆ ಬಂದ ಮಗನನ್ನು ತಬ್ಬಿಕೊಂಡು 'ಇದೊಂದು ರಾತ್ರಿ ಇದ್ದುಹೋಗು' ಎಂದು ಅಪ್ಪ ಅಂಗಲಾಚುತ್ತಾನೆ. ರಾಮ ಆಲೋಚಿಸುತ್ತಾನೆ: 'ಅರಮನೆ, ಸುಪ್ಪತ್ತಿಗೆ, ಅಧಿಕಾರ ಹೀಗೆ ಇದೊಂದು ರಾತ್ರಿ ಈ ಸುಖವನ್ನೆಲ್ಲಾ ಯಾಕೆ ಅನುಭವಿಸಬಾರದು? ನಾಳೆಯಿಂದ ಇದು ಯಾವುದೂ ಇರುವುದಿಲ್ಲ. ಕಾಡು, ಕಣಿವೆ, ಕಷ್ಟ ನಿಷ್ಠುರಗಳು, ಹಸಿವು,... ಹೀಗೆ ಕೊನೆಯಿಲ್ಲದ ಬವಣೆಗಳು. ಇವತ್ತು ಇದ್ದು ನಾಳೆ ಹೋದರಾಯಿತು' ಅಂತ ಅನಿಸುತ್ತದೆ. ಮರುಕ್ಷಣವೇ 'ಇದು ಸಲ್ಲದ ಆಲೋಚನೆ. ಹಾಗೇನಾದರೂ ಇವತ್ತು ಉಳಿದುಬಿಟ್ಟರೆ ನಾಳೆ, ನಾಡಿದ್ದು ಅಂತ ವನವಾಸವನ್ನು ಮುಂದೂಡುತ್ತಲೇ ಇರಬೇಕಾದೀತು. ಮನಸ್ಸಿನ ಈ ಆಸೆಯನ್ನು ಬಲಿಯುವುದಕ್ಕೆ ಬಿಡಬಾರದು, ಹೊರಡುವುದೇ ಸರಿ' ಅಂತ ತೀರ್ಮಾನಕ್ಕೆ ಬರುತ್ತಾನೆ. ದುಃಖತಪ್ತ ದಶರಥನ ಆಶೀರ್ವಾದ ಪಡೆದು ತಾಯಿ ಕೌಸಲ್ಯೆಯ ಬಳಿ ಬರುತ್ತಾನೆ. ಅಮ್ಮ ನೀಡಿದ ತುತ್ತನ್ನು ಆದರದಿಂದ ಸ್ವೀಕರಿಸಿದ ರಾಮ ಕಾಡಿಗೆ ತೆರಳುತ್ತಾನೆ.

ಇದು ಶ್ರೀರಾಮನ ಭಾವುಕ ತೀರ್ಮಾನವಲ್ಲ; ಅತ್ಯಂತ ಪ್ರಜ್ಞಾಪೂರ್ವಕವಾದ ಗಟ್ಟಿ ನಿರ್ಧಾರವಾಗಿತ್ತು. ತನ್ನನ್ನು ತಾನು ಕಡುಕಷ್ಟಗಳಿಗೆ ಒಡ್ಡಿಕೊಂಡ ನಿಲುವಾಗಿತ್ತು. ರಾಮನ ಪ್ರಜ್ಞೆಗೆ ನ್ಯಾಯ ಮತ್ತು ಸುಖ ಎನ್ನುವ ಸಂಗತಿಗಳು ಕಾಡಿದವು. ರಾಮನಿಗೆ ಇವುಗಳ ನಡುವಿನ ಆಯ್ಕೆ ಕಷ್ಟವಾಗಲೇ ಇಲ್ಲ. ಅವನ ವಿಶ್ಲೇಷಣೆಯ ಬುದ್ಧಿಗೆ ನ್ಯಾಯವೇ ಮಹತ್ವದ್ದಾಗಿ ಕಂಡಿತು. ಮಾತಿಗೆ ಬದ್ಧವಾಗಿರುವುದು ಅಂದರೆ ನುಡಿದಂತೆ ನಡೆಯುವುದು. ಅದೇ ನ್ಯಾಯ. ಇದೊಂದು ರಾತ್ರಿ ಉಳಿಯುವ ಸುಖದ ಮಾರ್ಗ ಆರಿಸಿಕೊಂಡಿದ್ದರೆ ಈ ಕ್ಷಣಕ್ಕೆ, ಇವತ್ತಿಗೆ ಹಿತವಾಗಿರುತ್ತಿತ್ತು. ಆದರೆ ಭೌತಿಕ ಸುಖಾಪೇಕ್ಷಿಯಾದ ರಾಮನಿಂದ ಯಾವ ನ್ಯಾಯವನ್ನು ನಿರೀಕ್ಷಿಸಬಹುದು ಎಂಬ ಪ್ರಶ್ನೆ ಎಂದೆಂದಿಗೂ ಉಳಿದುಬಿಡುತ್ತಿತ್ತು. ಶ್ರೀರಾಮನ ಸಂವೇದನಾಶೀಲ ಮನಸ್ಸು ನ್ಯಾಯದ ಮಾರ್ಗದಲ್ಲಿ ನಡೆಯುವ ಕಡುಕಷ್ಟದ ಹಾದಿಯನ್ನು ಆರಿಸಿಕೊಂಡಿತು. ರಾಮನ ಈ ಚಿಂತನಶೀಲ ಆಯ್ಕೆ ಅವನ ಪ್ರಬುದ್ಧ ನೈತಿಕ ರಾಜಕಾರಣವೇ ಆಗಿದೆ.

ದೊರೆತನದ ದಾರಿಯನ್ನು ಮಾದರಿ ಎಂದೇ ಜನಮಾನಸ ಭಾವಿಸುತ್ತದೆ. ಕರುಳ ಕಾಳಜಿಯಿಂದ ಕೂಡಿದ ಕಾನೂನು, ಅಂತಃಕರಣವನ್ನು ಆಲಿಸುವ ಆಡಳಿತ ಇಂತಹ ನ್ಯಾಯದ ಒಡಲಿನಿಂದಲೇ ಹುಟ್ಟುತ್ತದೆ. ದೊರೆತನ ಹಿರಿತನಕ್ಕೆ ಸಾಕ್ಷಿ ಎನಿಸಿಕೊಳ್ಳಬೇಕು. ಅದು ನ್ಯಾಯದ ಪರಂಪರೆಗೆ ಅಡಿಪಾಯವಾಗಬೇಕು. ರಾಮನ ಈ ನ್ಯಾಯದ ಆಯ್ಕೆ ಕಷ್ಟನಿಷ್ಠುರಗಳನ್ನು ಈಗಲೇ ಎದುರಿಸಿಬಿಡಲು ಅಗತ್ಯವಾದ ಮಾನಸಿಕ ಸಿದ್ಧತೆಯ ಸೂಚನೆಯಾಗಿದೆ. ಕಷ್ಟಗಳು ನಾಳೆಯ ಬದಲು ಇಂದೇ ಬರಲಿ, ಇಂದಿನ ಬದಲು ಈಗಲೇ ಬರಲಿ ಎನ್ನುವ ಮನಸ್ಥಿತಿಯಿದ್ದರೆ ಅವುಗಳನ್ನು ಎದುರಿಸುವ ದೃಢತೆ ಇನ್ನಷ್ಟು ಬಲಿಷ್ಠವಾಗುತ್ತದೆ.

ಸದ್ಯದ ಲೌಕಿಕ ಜಗತ್ತು ಸರಕುನಿಷ್ಠ ಸುಖಭೋಗದ ಲೋಲುಪತೆಯಲ್ಲಿ ಮುಳುಗಿದೆ. ಸುಖ ನೀಡುತ್ತವೆ ಎಂದು ಆಶಿಸಲಾಗುವ ಹಣ, ಅಧಿಕಾರ, ಪದವಿ ಮುಂತಾದವುಗಳು ನ್ಯಾಯೋಚಿತ ಉತ್ಪನ್ನಗಳಾಗಿದ್ದರೆ ಮಾತ್ರ ಘನತೆ. ಇಲ್ಲದಿದ್ದರೆ ಮಾನಗೇಡು. ಯಾವ ಬಗೆಯ ಸುಖವಾಗಲೀ ನ್ಯಾಯಮೂಲದಿಂದ ಹುಟ್ಟಬೇಕು. ಅದು ಆಪ್ಯಾಯಮಾನ, ಅನನ್ಯ. ನ್ಯಾಯಸ್ಪರ್ಶವಿಲ್ಲದ ಸುಖ ಯೋಗ್ಯವೆನಿಸುವುದಿಲ್ಲ. ಆದುದರಿಂದ ನಮ್ಮೊಳಗಿನ ನ್ಯಾಯಪ್ರಜ್ಞೆ ನಾಶವಾಗದಂತೆ ಕಾಪಾಡಿಕೊಳ್ಳಬೇಕು. ಅತಿಯಾದ ಸುಖಮೋಹಿಯೂ ನ್ಯಾಯವಿದೂರವೂ ಆದ ತಂತ್ರಜ್ಞಾನದ ಕಾಲದಲ್ಲಿ ನಾವಿದ್ದೇವೆ. ಸ್ವಾರ್ಥಪರ ಸ್ವಕೇಂದ್ರಿತ ಬುದ್ಧಿಯು ಬಲಗೊಳ್ಳುತ್ತಿರುವಾಗ ರಾಮನ ನ್ಯಾಯಪರ ನಿರ್ಧಾರ ನಮಗೆ ಪಾಠವಾಗಬೇಕು. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ಜುಲೈ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಏಕಾದಶಿ ಗಂ. 9-39 **ನಕ್ಷತ್ರ:** ರೋಹಿಣಿ ಗಂ. 21-07 **ಯೋಗ:** ವೃದ್ಧಿ ಗಂ. 18-39 **ಕರಣ:** ಬಾಲವ ಗಂ. 9-39, ಕರ್ಕಾಟಕ ಮಾಸದ 05 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 1 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 09-00, ಸೂರ್ಯೋದಯ: 06-17 ಸೂರ್ಯಾಸ್ತ: 06-57. **ಮುಸ್ಲಿಂ ದಿನಾಂಕ:** 25 ಮೊಹರಮ್. **ಅದೃಷ್ಟ ಸಂಖ್ಯೆ:** 1, 7

ಮೇಷ: ದೈನಂದಿನ ಬದುಕಿನಲ್ಲಿ ಇರುವ ವ್ಯಕ್ತಿಗಳ ಸಹವಾಸದಿಂದ ಅಪವಾದಗಳಿಗೆ ತುತ್ತಾಗುವಿರಿ. ಹಿಂದಿನ ಕಹಿ ಘಟನೆ ಮರೆಯಲು ಒಳ್ಳೆಯ ಸಮಯ ಸಿಗುವುದು. ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಜಯವಾಗುವುದು.

ವೃಷಭ: ಜ್ಞಾನಿಗಳು ಪರಂಪರೆಯನ್ನು ಉಳಿಸಲು ಯೋಗ್ಯ ಶಿಷ್ಯನನ್ನು ಕಂಡುಕೊಳ್ಳುವ ಸಾಧ್ಯತೆ ಇದೆ. ಸರ್ಕಾರಿ ಹುದ್ದೆಯಲ್ಲಿದ್ದು, ಉನ್ನತ ಮಟ್ಟದ ಪದವಿಗೆ ಪ್ರಯತ್ನ ಪಡುತ್ತಿರುವವರಿಗೆ ಶುಭವಾಗುವುದು.

ಮಿಥುನ: ನೂತನ ವಾಹನ ಕೊಳ್ಳುವುದನ್ನು ಸ್ವಲ್ಪ ದಿನಗಳ ಕಾಲ ಮುಂದೂಡುವುದು ಉತ್ತಮ. ವೈದ್ಯಕೀಯ ಹಾಗೂ ಎಂಜಿನಿಯರ್ ಕ್ಷೇತ್ರಗಳಿಗೆ ಹೋಗಬೇಕೆಂದು ಬಯಸುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರು ಸಿಗಲಿದ್ದಾರೆ.

ಕರ್ಕಾಟಕ: ಪರಿಣತರಿಗೆ ಶಿಕ್ಷಣ ವೃತ್ತಿ ದೊರೆಯುವ ಸಂಭವವಿದೆ. ಯೋಚನೆಯಂತೆ ಕೆಲಸ ಸಾಗದಿರುವ ಕಾರಣ ಪರ್ಯಾಯ ವ್ಯವಸ್ಥೆ ಬಗ್ಗೆ ಯೋಚಿಸುವುದು ಉತ್ತಮ.

ಸಿಂಹ: ಕುಟುಂಬದವರಿಗೆ ಹೆಚ್ಚಿನ ಸಮಯವನ್ನು ನೀಡುವ ಬಗ್ಗೆ ಯೋಚನೆ ನಡೆಸಿ, ಸಮಯ ಎಂದಾಗ ಅವರ ಸಹಾಯವೇ ಮುಖ್ಯ. ಮಂದಗತಿಯಲ್ಲಿ ಕೆಲಸ ಕಾರ್ಯಗಳು ನಡೆದು ಸಮಯದ ಕೊರತೆ ಎದುರಾಗಲಿದೆ.

ಕನ್ಯಾ: ಕಾರ್ಯನಿರ್ವಹಿಸಲು ಪರಿಣತರಿಂದ ಸುಲಭ ಉಪಾಯವನ್ನು ಪಡೆದು ಸಂತೋಷವಾಗಲಿದೆ. ಬೇರೆಯವರ ಮನಸ್ಸಿಗೆ ನೋವಾಗುವಂಥ ಮಾತುಗಳು ಬಳಸದೇ ಇರುವುದು ಉತ್ತಮ.

ತುಲಾ: ಮನೆಯ ಆರ್ಥಿಕ ಸ್ಥಿತಿಯಲ್ಲಿ ಹಂತ ಹಂತವಾಗಿ ಸುಧಾರಣೆಯನ್ನು ಕಂಡು ಮನಸ್ಸಿಗೆ ನೆಮ್ಮದಿ ಇರುವುದು. ಮನೆಯಲ್ಲಿ ಮಕ್ಕಳಿಂದ ಸಂಭ್ರಮದ ವಾತಾವರಣ ಮೂಡುವುದು. ಗಂಟಲು ಬೇನೆ ನಿರ್ಲಕ್ಷಿಸುವುದು ಸರಿಯಲ್ಲ.

ವೃಶ್ಚಿಕ: ಹಿಂದೆ ಮಗನ ಒಳಿತಿಗಾಗಿ, ಅಭ್ಯುದಯಕ್ಕಾಗಿ ತೆಗೆದುಕೊಂಡ ಕೆಲ ಕಠಿಣ ನಿರ್ಧಾರಗಳಿಂದಾಗಿ ಇಂದು ಉತ್ತಮ ಫಲ ನಿರೀಕ್ಷಿಸಬಹುದಾಗಿದೆ. ವೃತ್ತಿಯಲ್ಲಿ ಎಲ್ಲಾ ವಿಷಯಗಳ ಬಗ್ಗೆ ಪೂರ್ಣ ಮಾಹಿತಿ ಹೊಂದಿ.

ಧನು: ಕಾರ್ಯದಲ್ಲಿ ಅವಸರ ಮಾಡದೆ ನಿಧಾನವಾಗಿ ಮುಂದುವರಿದರೆ ಸರಾಗವಾಗಿ ನಡೆಯುವುದು. ಆಲಂಕಾರಿಕ ವಸ್ತುಗಳಿಗಾಗಿ ಧನವ್ಯಯ ಆಗಲಿದೆ. ಹತ್ತಿ ವಸ್ತ್ರಗಳ ಬೇಡಿಕೆಯಿಂದಾಗಿ ವರಮಾನ ಹೆಚ್ಚಲಿದೆ.

ಮಕರ: ರಾಜಕಾರಣಿಗಳು ಎಲ್ಲರೊಂದಿಗೆ ಸಹಕಾರ ಮನೋಭಾವನೆಯಿಂದ ಮತ್ತು ಸರಳತೆಯಿಂದ ಮುಂದುವರಿದಲ್ಲಿ ಯಶಸ್ಸು ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತದೆ. ಸಂತಾನದ ಶುಭ ಸುದ್ದಿ ಕೇಳುವಿರಿ.

ಕುಂಭ: ಚಂಚಲ ಸ್ವಭಾವದ ನೀವು ಅಚಲವಾದ ನಿರ್ಧಾರಗಳನ್ನು ಮಾಡುವುದು ಉಳಿತು. ಧಾರ್ಮಿಕ ಕೆಲಸದಲ್ಲಿ ಶ್ರದ್ಧೆ ತೋರಿದಷ್ಟೂ, ದಾರಿ ಕಾಣಬಹುದು. ಗಣಪತಿಯ ಆರಾಧನೆ ವಿಘ್ನಗಳನ್ನು ನಿವಾರಣೆ ಮಾಡುತ್ತದೆ.

ಮೀನ: ಸಹಾಯ ಅಪೇಕ್ಷಿಸಿ ಬಂದವರನ್ನು ತಿರಸ್ಕರಿಸಬೇಡಿ. ವರ್ಚಸ್ಸನ್ನು ವೃದ್ಧಿಸಿಕೊಳ್ಳಲು ಇತರರ ಜೊತೆ ಸಂವಾದದಲ್ಲಿ ಉತ್ತಮ ಭಾಷೆ ಬಳಸಿ. ಕಬ್ಬಿಣ ಮತ್ತು ಸ್ಟೀಲ್ ವ್ಯಾಪಾರಿಗಳಿಗೆ ಲಾಭವಾಗುವುದು.

ಪ್ರಜಾವಾಣಿ

3,558 ಕಂಪನಿಗಳು ವಂಚನೆಯಲ್ಲಿ ಭಾಗಿ

₹15,851 ಕೋಟಿ ನಕಲಿ ಐಟಿಸಿ ಕ್ಲೇಮ್ ಪತ್ತೆ

ಜಿಎಸ್‌ಟಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹15,851 ಕೋಟಿ ಮೊತ್ತದ ನಕಲಿ 'ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್' (ಐಟಿಸಿ) ಕ್ಲೇಮ್ ಪ್ರಕರಣಗಳನ್ನು ಜಿಎಸ್‌ಟಿ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಜಿಎಸ್‌ಟಿ ಅಧಿಕಾರಿಗಳು ಒಟ್ಟು 3,840 ನಕಲಿ ಕಂಪನಿಗಳಿಗೆ ಸಂಬಂಧಿಸಿ ₹12,304 ಕೋಟಿ ಮೊತ್ತದ ನಕಲಿ ಐಟಿಸಿ ಪ್ರಕರಣಗಳನ್ನು ಪತ್ತೆ ಮಾಡಿದ್ದರು. ಈ ಪೈಕಿ ₹549 ಕೋಟಿ ವಶಕ್ಕೆ ಪಡೆದು, 26 ಜನರನ್ನು ಬಂಧಿಸಲಾಗಿತ್ತು.

ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹15,851 ಕೋಟಿ ಮೊತ್ತದ ವಂಚನೆ ಬೆಳಕಿಗೆ ಬಂದಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಇದು ಶೇ 29ರಷ್ಟು ಅಧಿಕ. ವಂಚನೆಯಲ್ಲಿ ತೊಡಗಿದ್ದ 3,558 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿದೆ. ₹659 ಕೋಟಿ ವಶಪಡಿಸಿಕೊಳ್ಳಲಾಗಿದ್ದು, 53 ಜನರನ್ನು ಬಂಧಿಸಲಾಗಿದೆ ಎಂದು ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಪ್ರತಿ ತಿಂಗಳು ಸರಾಸರಿ 1,200 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿದೆ. ಆದರೆ, ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ನಕಲಿ ಕಂಪನಿಗಳ ಪತ್ತೆ ಸಂಖ್ಯೆ ಕಡಿಮೆ ಆಗಿದೆ.

ಇದು ನಕಲಿ ಜಿಎಸ್‌ಟಿ ನೋಂದಣಿ ವಿರುದ್ಧ ಆಂದೋಲನ ನಡೆಸಿದ ಕಾರ್ಯಾಚರಣೆ ಯಶಸ್ವಿಯಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ತಿಳಿಸಿದ್ದಾರೆ.

2024-25ರ ಆರ್ಥಿಕ ವರ್ಷದಲ್ಲಿ 25,009 ನಕಲಿ ಕಂಪನಿಗಳ ₹61,545 ಕೋಟಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪತ್ತೆಹಚ್ಚಲಾಗಿತ್ತು.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಧಿಕಾರಿಗಳು ದೇಶದಾದ್ಯಂತ ಈಗಾಗಲೇ ಎರಡು ಬಾರಿ ಜಿಎಸ್‌ಟಿ ನಕಲಿ ನೋಂದಣಿ ವಿರುದ್ಧ ಕಾರ್ಯಾಚರಣೆ ನಡೆಸಿದ್ದಾರೆ.

ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅಧ್ಯಕ್ಷತೆಯಲ್ಲಿ ರಾಜ್ಯಗಳ ಹಣಕಾಸು ಸಚಿವರ ಸಮಿತಿ, ತೆರಿಗೆ ವಂಚನೆ ಮತ್ತು ಐಟಿಸಿ ವಂಚನೆ ಕುರಿತು ಅಧ್ಯಯನ ಮಾಡುತ್ತಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹373-560
ದ್ವಿತಳಿ (ಬಿ.ವಿ)	₹420-690

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:
100 ಕ್ಕೆ	₹560	100 ಕ್ಕೆ ₹565
12 ಕ್ಕೆ	₹75	

ಎಲೆಕ್ಟ್ರಾನಿಕ್ಸ್ ರಫ್ತು ಶೇ 47ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಎಲೆಕ್ಟ್ರಾನಿಕ್ಸ್ ವಲಯದ ರಫ್ತು ಪ್ರಮಾಣ ಶೇ 47ರಷ್ಟು ಏರಿಕೆಯಾಗಿದೆ. ಇದರ ಒಟ್ಟು ಮೌಲ್ಯ ₹1.06 ಲಕ್ಷ ಕೋಟಿಯಷ್ಟಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಭಾನುವಾರ ತಿಳಿಸಿದೆ.

ಒಟ್ಟು ರಫ್ತು ಪೈಕಿ ಅಮೆರಿಕ ಶೇ 60.17ರಷ್ಟು ಪಾಲು ಹೊಂದಿದೆ. ಯುಎಇ (ಶೇ 8.09), ಚೀನಾ (ಶೇ 3.88), ನೆದರ್ಲೆಂಡ್ಸ್ (ಶೇ 2.68) ಮತ್ತು ಜರ್ಮನಿ (ಶೇ 2.09ರಷ್ಟು) ನಂತರದ ಸ್ಥಾನಗಳಲ್ಲಿ ಇವೆ.

ಇದೇ ಅವಧಿಯಲ್ಲಿ ಸಿದ್ಧಪಡಿಸಿದ ಉಡುಪುಗಳ ರಫ್ತು ಪ್ರಮಾಣ ಶೇ 34ರಷ್ಟು ಹೆಚ್ಚಳವಾಗಿದೆ. ಇದರ ಒಟ್ಟು ಮೌಲ್ಯ ₹36,112 ಕೋಟಿಯಷ್ಟಾಗಿದೆ. ರಫ್ತಿನಲ್ಲಿ ಅಮೆರಿಕ ಶೇ 8.81ರಷ್ಟು ಪಾಲನ್ನು ಹೊಂದಿದೆ ಎಂದು ತಿಳಿಸಿದೆ.

ಈ ಅಂಕಿ ಅಂಶಗಳು ಸಿದ್ಧಪಡಿಸಿದ ಉತ್ಪನ್ನಗಳ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ನಿರಂತರ ಸ್ಪರ್ಧಾತ್ಮಕತೆಯನ್ನು ಪ್ರತಿಬಿಂಬಿಸುತ್ತಿದೆ ಎಂದು ತಿಳಿಸಿದೆ. ಸಾಗರೋತ್ಪನ್ನಗಳ ರಫ್ತಿನಲ್ಲಿ ಶೇ 19ರಷ್ಟು ಏರಿಕೆಯಾಗಿದ್ದು, ₹16,806 ಕೋಟಿಯಾಗಿದೆ ಎಂದು ತಿಳಿಸಿದೆ.

ನಿಮ್ಮ ಹಣ ಸೋಮಾರಿಯಾಗದಿರಲಿ...

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಕಡಿತ ಮಾಡಿರುವ ಬೆನ್ನಲ್ಲೇ ಬ್ಯಾಂಕ್‌ಗಳು ಉಳಿತಾಯ ಖಾತೆ ಬಡ್ಡಿ ದರ ಇಳಿಸಿವೆ. ಎಸ್‌ಬಿಐ ತನ್ನಲ್ಲಿನ ಉಳಿತಾಯ ಖಾತೆ ಮೇಲಿನ ಬಡ್ಡಿ ದರವನ್ನು ಶೇ 2.5ಕ್ಕೆ ಇಳಿಸಿದರೆ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್ ಶೇ 2.75ಕ್ಕೆ ತಗ್ಗಿಸಿವೆ. ಬಡ್ಡಿ ದರ ಇಳಿಕೆಯ ಈ ಕಾಲದಲ್ಲಿ ಪರಿಶ್ರಮದಿಂದ ಸಂಪಾದಿಸಿದ ದುಡ್ಡನ್ನು ಬ್ಯಾಂಕ್‌ನ ಖಾತೆಯಲ್ಲಿಟ್ಟು ಸುಮ್ಮನೆ ಕುಳಿತರೆ ದುಡ್ಡು ಮೌಲ್ಯ ಕಳೆದುಕೊಳ್ಳುತ್ತದೆ. ಬೆಲೆ ಏರಿಕೆಯು (ಹಣದುಬ್ಬರ) ಸದ್ದಿಲ್ಲದೆ ನಮ್ಮ ಹಣವನ್ನು ಕರಗಿಸುತ್ತಿರುತ್ತದೆ. ಇವತ್ತು ₹1 ಸಾವಿರಕ್ಕೆ ಸಿಗುವ ವಸ್ತುವನ್ನು ಹತ್ತು ವರ್ಷಗಳ ನಂತರ ಖರೀದಿಸಬೇಕಾದರೆ ₹2 ಸಾವಿರ ಬೇಕಾಗುತ್ತದೆ. ಶೇ 7ರಷ್ಟು ಹಣದುಬ್ಬರ ಲೆಕ್ಕ ಹಾಕಿದರೂ ದುಡ್ಡು ಈ ಪ್ರಮಾಣದಲ್ಲಿ ಮೌಲ್ಯ ಕಳೆದುಕೊಳ್ಳುತ್ತಾ ಹೋಗುತ್ತದೆ. ಹೆಚ್ಚು ರಿಸ್ಕ್ ಇಲ್ಲದ, ಬೇಕಾದಾಗ ಹಣ ಪಡೆಯಲು ಆಗುವ, ಉಳಿತಾಯ ಖಾತೆಗಿಂತ ಹೆಚ್ಚು ಗಳಿಕೆ ತಂದುಕೊಡುವ ಹೂಡಿಕೆಗಳ ಬಗ್ಗೆ ತಿಳಿಯೋಣ.

ನಿಶ್ಚಿತ ಠೇವಣಿಗಳು: ಬಂಡವಾಳವನ್ನು ಸುರಕ್ಷಿತವಾಗಿಟ್ಟುಕೊಂಡು ಒಂದಿಷ್ಟು ಗಳಿಕೆಯನ್ನೂ ಪಡೆಯುತ್ತ, ಬೇಕಾದಾಗ ಹಣ ಪಡೆದುಕೊಳ್ಳಲು ಒಳ್ಳೆಯ ಆಯ್ಕೆಗಳಲ್ಲಿ ನಿಶ್ಚಿತ ಠೇವಣಿ ಪ್ರಮುಖವಾದುದು. ಉಳಿತಾಯ ಖಾತೆಯಲ್ಲಿ ಶೇ 2ರಿಂದ ಶೇ 3ರಷ್ಟು ಬಡ್ಡಿ ಸಿಕ್ಕರೆ ನಿಶ್ಚಿತ ಠೇವಣಿಯಲ್ಲಿ ಶೇ 5ರಿಂದ ಶೇ 8ರವರೆಗೂ ಗಳಿಕೆ ನಿರೀಕ್ಷಿಸಬಹುದು. ಹಲವು ಬ್ಯಾಂಕ್‌ಗಳು ಈಗಲೂ ನಿಶ್ಚಿತ ಠೇವಣಿ ಮೇಲೆ ಶೇ 8ರಿಂದ ಶೇ 8.5ರವರೆಗೆ ಬಡ್ಡಿ ನೀಡುತ್ತಿವೆ. ನಿಶ್ಚಿತ ಠೇವಣಿಯಲ್ಲಿ ನಿಮ್ಮ ಹಣಕ್ಕೆ ಲಾಕ್-ಇನ್ ಅವಧಿ ಇರುತ್ತದೆ. ಅವಧಿಗೂ ಮುನ್ನ ನಿಶ್ಚಿತ ಠೇವಣಿ ಹಿಂಪಡೆದರೆ ಬ್ಯಾಂಕ್‌ಗಳು ಶೇ 1ರಷ್ಟು ದಂಡ ವಿಧಿಸುತ್ತವೆ. ಆದರೆ ಇಲ್ಲಿ ದುಡ್ಡು ಸುರಕ್ಷಿತವಾಗಿರುವ ಜೊತೆಗೆ ಬೇಕಾದಾಗ ಹಣ ಸಿಗುತ್ತದೆ.

ಸ್ವೀಪ್ ಇನ್ ಫಿಕ್ಸೆಡ್ ಡೆಪಾಸಿಟ್: ಅವಧಿಗೂ ಮೊದಲು ನಿಶ್ಚಿತ ಠೇವಣಿಯಿಂದ (ಎಫ್.ಡಿ) ಹಣ ಹಿಂಪಡೆದರೆ ಶುಲ್ಕ ಇಲ್ಲದಿರುವ ಸೌಲಭ್ಯವನ್ನು ಬ್ಯಾಂಕಿಂಗ್ ಭಾಷೆಯಲ್ಲಿ 'ಸ್ವೀಪ್ ಇನ್ ಎಫ್.ಡಿ' ಎಂದು ಕರೆಯುತ್ತಾರೆ. ಆದರೆ ಇಂತಹ ಎಫ್.ಡಿ.ಗಳಿಂದ ಅವಧಿಗೂ ಮುನ್ನ ಹೂಡಿಕೆ ವಾಪಸ್ ಪಡೆದಾಗ ಕಡಿಮೆ ಬಡ್ಡಿ ಸಿಗುತ್ತದೆ.

ಉದಾಹರಣೆಗೆ, ಬ್ಯಾಂಕ್ ಒಂದರಲ್ಲಿ 1 ವರ್ಷದ ಸ್ವೀಪ್ ಇನ್ ಎಫ್.ಡಿ.ಗೆ ಶೇ 7ರ ಬಡ್ಡಿ ದರವಿದ್ದು, 6 ತಿಂಗಳ ಸ್ವೀಪ್ ಇನ್ ಎಫ್.ಡಿ.ಗೆ ಶೇ 6ರ ಬಡ್ಡಿ ದರವಿದೆ ಎಂದು ಭಾವಿಸಿ. ಇಂತಹ ಸಂದರ್ಭದಲ್ಲಿ ನೀವು ಒಂದು ವರ್ಷಕ್ಕೆ ಸ್ವೀಪ್ ಇನ್ ಎಫ್.ಡಿ. ಮಾಡಿಸಿ 6 ತಿಂಗಳಿನಲ್ಲೇ ಅದನ್ನು ಹಿಂಪಡೆದರೆ ಶೇ 6ರಷ್ಟು ಮಾತ್ರ ಬಡ್ಡಿ ಸಿಗುತ್ತದೆ.

ಲಿಕ್ವಿಡ್ ಎಂ.ಎಫ್: ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಅಗತ್ಯವಿದ್ದಾಗ ಹಣವನ್ನು ಹಿಂಪಡೆಯುವ ಜೊತೆಗೆ ಹಣದ ಮೌಲ್ಯವನ್ನು ವೃದ್ಧಿಸಿಕೊಳ್ಳಲು ಅವಕಾಶವಿರುತ್ತದೆ. ಈ ಫಂಡ್‌ಗಳಲ್ಲಿ ಶೇ 5ರಿಂದ ಶೇ 6ರಷ್ಟು ಗಳಿಕೆ ನಿರೀಕ್ಷಿಸಬಹುದು. ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ತೆರಿಗೆ ಅನುಕೂಲ ಪಡೆಯಬಹುದು. ಪ್ರತಿ ಬಾರಿ ಲಿಕ್ವಿಡ್ ಮ್ಯೂಚುವಲ್ ಫಂಡ್‌ನಿಂದ ಹಣ ತೆಗೆದಾಗ ಅಸಲಿನ ಮೊತ್ತ ಮತ್ತು ಗಳಿಕೆಯ ಮೊತ್ತವನ್ನು ಪ್ರತ್ಯೇಕಿಸಲಾಗುತ್ತದೆ. ಹಾಗಾಗಿ ಇಲ್ಲಿ ನಗದೀಕರಣ ಮಾಡುವ ಪೂರ್ತಿ ಮೊತ್ತಕ್ಕೆ ತೆರಿಗೆ ಬರುವುದಿಲ್ಲ. ಅಲ್ಲದೆ ಲಿಕ್ವಿಡ್ ಫಂಡ್ ಹೂಡಿಕೆಗಳಿಂದ ನಷ್ಟ ಉಂಟಾದರೆ ಅದನ್ನು ಬೇರೆ ಗಳಿಕೆಗಳೊಂದಿಗೆ ಸರಿದೂಸಲು ಅವಕಾಶವಿದೆ.

ಒಂದೊಮ್ಮೆ ಹೆಚ್ಚು ನಷ್ಟವಾಗಿದ್ದರೆ ಅದನ್ನು 8 ವರ್ಷಗಳವರೆಗೆ ಮುಂದಕ್ಕೆ ಒಯ್ದು ಹೊಂದಾಣಿಕೆ ಮಾಡಲು ಅವಕಾಶವಿದೆ. ಲಿಕ್ವಿಡ್ ಫಂಡ್‌ಗಳನ್ನು ಮಾರಾಟ ಮಾಡಿದ ಒಂದು ದಿನದ ಒಳಗಾಗಿ ನಿಮಗೆ ಹಣ ಲಭಿಸುತ್ತದೆ. ಆದರೆ ಹೂಡಿಕೆ ಮಾಡಿದ ಮೊದಲ ವಾರದಲ್ಲೇ ತೆಗೆದರೆ ಸಣ್ಣ ಶುಲ್ಕ ಅನ್ವಯಿಸುತ್ತದೆ. ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳು ಖಂಡಿತವಾಗಿ ಉಳಿತಾಯ ಖಾತೆಗಿಂತ ಹೆಚ್ಚಿನ ಗಳಿಕೆ ತಂದುಕೊಡಲು ಶಕ್ತವಾಗಿವೆ.

ಅಲ್ಟ್ರಾ ಶಾರ್ಟ್ ಟರ್ಮ್ ಮ್ಯೂಚುವಲ್ ಫಂಡ್ಸ್: ಉಳಿತಾಯ ಖಾತೆ ಮತ್ತು ಲಿಕ್ವಿಡ್ ಮ್ಯೂಚುವಲ್ ಫಂಡ್ಸ್‌ಗಿಂತ ಹೆಚ್ಚಿನ ಗಳಿಕೆಯನ್ನು ಅಲ್ಟ್ರಾ ಶಾರ್ಟ್ ಟರ್ಮ್ (ಅಲ್ಪಾವಧಿ) ಮ್ಯೂಚುವಲ್ ಫಂಡ್‌ಗಳಲ್ಲಿ ನಿರೀಕ್ಷೆ ಮಾಡಬಹುದು. ಆದರೆ ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಿಗಿಂತ ಕೊಂಚ ಹೆಚ್ಚು ರಿಸ್ಕ್ ಇದರಲ್ಲಿರುತ್ತದೆ. 3ರಿಂದ 12 ತಿಂಗಳಿಗೆ ಹಣವನ್ನು ಇರಿಸಲು ಈ ಫಂಡ್‌ಗಳು ಸೂಕ್ತ. ಅಲ್ಟ್ರಾ ಶಾರ್ಟ್ ಟರ್ಮ್ ಮ್ಯೂಚುವಲ್ ಫಂಡ್‌ಗಳಲ್ಲಿ ಶೇ 6.5ರಿಂದ ಶೇ 7.5ರವರೆಗೆ ಗಳಿಕೆ ನಿರೀಕ್ಷಿಸಬಹುದು. ಹಣದ ಅಗತ್ಯವಿದ್ದಾಗ 1ರಿಂದ 3 ದಿನಗಳಲ್ಲಿ ನಗದೀಕರಣ ಸಾಧ್ಯ.

ಆರ್ಬಿಟ್ರಾಜ್ ಮ್ಯೂಚುವಲ್ ಫಂಡ್: ಕಡಿಮೆ ಅನಿಶ್ಚಿತತೆ ಮತ್ತು ತೆರಿಗೆ ಅನಕೂಲ ಬಯಸುವ ಸಾಂಪ್ರದಾಯಿಕ ಹೂಡಿಕೆದಾರರಿಗೆ ಆರ್ಬಿಟ್ರಾಜ್ ಮ್ಯೂಚುವಲ್ ಫಂಡ್‌ಗಳು ಸರಿಹೊಂದುತ್ತವೆ. ಈ ಫಂಡ್‌ಗಳಲ್ಲಿ ಶೇ 6ರಿಂದ ಶೇ 7ರಷ್ಟು ಗಳಿಕೆ ನಿರೀಕ್ಷಿಸಬಹುದಾದರೂ, ಹೂಡಿಕೆಯು ಷೇರು ಮಾರುಕಟ್ಟೆ ಆಧಾರಿತವಾಗಿರುವ ಕಾರಣ ಖಚಿತವಾಗಿ ಇಂತಿಷ್ಟೇ ಲಾಭ ದಕ್ಕುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆರ್ಬಿಟ್ರಾಜ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ ಒಂದು ವರ್ಷದೊಳಗೆ ನಗದೀಕರಣ ಮಾಡಿಕೊಂಡರೆ ಗಳಿಕೆ ಮೇಲೆ ಶೇ 20ರಷ್ಟು ತೆರಿಗೆ ಅನ್ವಯಿಸುತ್ತದೆ. ಆದರೆ ಒಂದು ವರ್ಷದ ನಂತರ ನಗದೀಕರಣ ಮಾಡಿದರೆ ಶೇ 12.5ರಷ್ಟು ತೆರಿಗೆ ಬರುತ್ತದೆ. ಈ ಫಂಡ್‌ಗಳಲ್ಲಿ ತೊಡಗಿಸಿದ ಹಣವನ್ನು ಅಗತ್ಯವಿದ್ದಾಗ 1ರಿಂದ 3 ದಿನಗಳ ಒಳಗಾಗಿ ವಾಪಸ್ ಪಡೆಯಲು ಸಾಧ್ಯ.

ಆರ್‌ಬಿಐ ಫ್ಲೋಟಿಂಗ್ ರೇಟ್ ಸೇವಿಂಗ್ಸ್ ಬಾಂಡ್: ಆರ್‌ಬಿಐ ಫ್ಲೋಟಿಂಗ್ ರೇಟ್ ಸೇವಿಂಗ್ಸ್ ಬಾಂಡ್ಸ್‌ನ ಪ್ರಸ್ತುತ ಬಡ್ಡಿ ದರ ಶೇ 7.15ರಷ್ಟಿದೆ. ಆರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ. ಈ ಹೂಡಿಕೆಯಲ್ಲಿ 7 ವರ್ಷಗಳ ಲಾಕಿನ್ ಅವಧಿ ಇದೆ. ಆದರೆ ಹಿರಿಯ ನಾಗರಿಕರು ಅವಧಿಗೂ ಮುನ್ನ ಹಣ ಹಿಂಪಡೆಯಲು ಸಾಧ್ಯವಿದೆ. ಕೇಂದ್ರ ಸರ್ಕಾರದ ಗ್ಯಾರಂಟಿ ಇರುವುದು ಈ ಹೂಡಿಕೆಯ ಪ್ಲಸ್ ಪಾಯಿಂಟ್.

ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ

ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಗೆ (ಪಿಒಎಂಐಎಸ್) ಕೇಂದ್ರ ಸರ್ಕಾರದ ಖಾತರಿ ಇದೆ. ಈ ಸಣ್ಣ ಉಳಿತಾಯ ಯೋಜನೆಯಲ್ಲಿ ಕನಿಷ್ಠ ₹1 ಸಾವಿರದಿಂದಲೂ ಹೂಡಿಕೆ ಸಾಧ್ಯ. ಒಂಟಿ ಖಾತೆಯಲ್ಲಿ ಗರಿಷ್ಠ ₹9 ಲಕ್ಷ ಮತ್ತು ಜಂಟಿ ಖಾತೆಯಲ್ಲಿ ಗರಿಷ್ಠ ₹15 ಲಕ್ಷದವರೆಗೆ ಹೂಡಿಕೆ ಮಾಡಬಹುದು. ಈ ಯೋಜನೆಯಲ್ಲಿ ಸದ್ಯ ಬಡ್ಡಿ ಶೇ 7.4ರಷ್ಟಿದ್ದು ಪ್ರತಿ ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ. ಪಿಒಎಂಐಎಸ್‌ನಲ್ಲಿ ಹಣ ಹಾಕಿದವರಿಗೆ ಪ್ರತಿ ತಿಂಗಳು ನಿಶ್ಚಿತ ಆದಾಯ ದೊರಕುತ್ತದೆ.

ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಯಲ್ಲಿ ₹15 ಲಕ್ಷ ತೊಡಗಿಸಿದರೆ ಮಾಸಿಕ ₹9,250 ದೊರಕುತ್ತದೆ. ಅಂಚೆ ಕಚೇರಿಗಳಲ್ಲಿ ಈ ಯೋಜನೆ ಮಾಡಿಸಬಹುದು. ಅಗತ್ಯವಿದೆ ಎಂದಾಗ ಹೂಡಿಕೆ ನಗದೀಕರಣ ಮಾಡಬಹುದು. ಆದರೆ ಅದಕ್ಕೆ ದಂಡ ಶುಲ್ಕ ಅನ್ವಯಿಸುತ್ತದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಪಿ. ಚಂದ್ರಶೇಖರ್
(ದಿವಂಗತ ಡಿ. ಪುಟ್ಟಪ್ಪ ಅವರ ಜ್ಯೇಷ್ಠ ಪುತ್ರ)
ಶನಿವಾರ, 12.07.2025ರಂದು ಮಧ್ಯಾಹ್ನ 1.28ಕ್ಕೆ ದೈವಾಧೀನರಾದರು
ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ನಮ್ಮ ಸ್ವಗೃಹದಲ್ಲಿ 22.07.2025 ರಂದು ಮಂಗಳವಾರ ಬೆಳಗ್ಗೆ 10.30ರ ನಂತರ ಏರ್ಪಡಿಸಲಾಗಿದೆ.
ಇಂತಿ ದುಃಖ ತಪ್ತರು
ಶ್ರೀಮತಿ ತ್ರಿವೇಣಿ. ಸಿ, ಮಕ್ಕಳು ಹಾಗೂ ಸಹ–ಕುಟುಂಬದವರು

ಭಾರತೀಯ ವೈದ್ಯನ ವಿರುದ್ಧ ದೋಷಾರೋಪ

ನ್ಯೂಯಾರ್ಕ್ (ಪಿಟಿಐ): ಕಾನೂನು ಸಮ್ಮತ ವೈದ್ಯಕೀಯ ಉದ್ದೇಶವಿಲ್ಲದೆ, ಲೈಂಗಿಕತೆ ಪ್ರಚೋದಿಸುವ ಔಷಧಿಗಳನ್ನು ರೋಗಿಗಳಿಗೆ ಶಿಫಾರಸು ಮಾಡಿದ್ದಾರೆ ಎಂದು ಭಾರತೀಯ ಸಂಜಾತ ವೈದ್ಯರೊಬ್ಬರ ವಿರುದ್ಧ ಅಮೆರಿಕದ ಅಟಾರ್ನಿ ಕಚೇರಿ ದೋಷಾರೋಪ ಹೊರಿಸಿದೆ.

ಸೆಕಾಕ್ಸ್‌ನ ರಿತೇಶ್ ಕಲ್ರಾ (51) ವಿರುದ್ಧ ಈ ದೋಷಾರೋಪ ಹೊರಿಸಲಾಗಿದೆ.

ರಿತೇಶ್ ತಮ್ಮ ಕ್ಲಿನಿಕ್‌ನಲ್ಲಿ ಆಕ್ಸಿಕೋಡೋನ್ ಒಳಗೊಂಡ ಒಪಿಯಾಡ್ಸ್ ಹಾಗೂ ಕೊಡೈನ್‌ನೊಂದಿಗೆ ಪ್ರೊಮೆಥಾಜಿನ್ ಹೊಂದಿದ್ದ ಹೈಡೋಸ್ ಮಾತ್ರೆಗಳನ್ನು ಶಿಫಾರಸು ಮಾಡುತ್ತಿದ್ದರು ಎಂದು ನ್ಯೂಜೆರ್ಸಿಯ ಅಟಾರ್ನಿ ಕಚೇರಿ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

'ದುರ್ಬಲ ಮನೋಭಾವದ ರೋಗಿಗಳನ್ನು ಲೈಂಗಿಕ ತೃಷೆಗೆ ಬಳಸಿಕೊಳ್ಳಲಿಕ್ಕಾಗಿಯೇ ತಮ್ಮ ಜವಾಬ್ದಾರಿಯುತ ಸ್ಥಾನವನ್ನು ವೈದ್ಯ ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು ವಕೀಲರಾದ ಅಲೀನಾ ಹಬ್ಬಾ ತಿಳಿಸಿದ್ದಾರೆ.

ಆಕ್ಸಿಕೋಡೋನ್ ಮಾತ್ರೆಗಳನ್ನು 31 ಸಾವಿರ ಬಾರಿ ವೈದ್ಯರ ಚೀಟಿಯಲ್ಲಿ ಕಲ್ರಾ ಅವರು ಶಿಫಾರಸು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ನ್ಯೂಯಾರ್ಕ್‌ನ ಫೆಡರಲ್ ನ್ಯಾಯಾಲಯದ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರ ಮುಂದೆ ಗುರುವಾರ ಹಾಜರಾದ ರಿತೀಶ್ ಅವರನ್ನು ಗೃಹಬಂಧನಕ್ಕೊಳಪಡಿಸಿ, 1 ಲಕ್ಷ ಡಾಲರ್ ಮೌಲ್ಯದ ಬಾಂಡ್ ಮೇಲೆ ಬಿಡುಗಡೆ ಮಾಡಲಾಯಿತು. ಪ್ರಕರಣ ಮುಗಿಯುವ ತನಕವೂ ವೈದ್ಯಕೀಯ ಅಭ್ಯಾಸ ನಡೆಸದಂತೆ ಸೂಚಿಸಿದೆ.

ಕಲ್ರಾ ಪರ ವಕೀಲರು ಈ ಎಲ್ಲ ಆರೋಪಗಳನ್ನು ನಿರಾಕರಿಸಿದ್ದಾರೆ ಎಂದು ನ್ಯೂಯಾರ್ಕ್ ಡೈಲಿ ನ್ಯೂಸ್ ಶನಿವಾರ ವರದಿ ಮಾಡಿದೆ.

'ಗಾಜಾದ ಕೇಂದ್ರ ಭಾಗದಿಂದ ಹೊರ ನಡೆಯಿರಿ'

ದಾರ್ ಅಲ್-ಬಲಾ (ಎಪಿ): 'ಗಾಜಾಪಟ್ಟಿಯ ಕೇಂದ್ರ ಭಾಗದಿಂದ ಹೊರ ನಡೆಯಿರಿ' ಎಂದು ಇಸ್ರೇಲ್ ಸೇನೆಯು ಭಾನುವಾರ ಆದೇಶ ನೀಡಿದೆ. ನಿರಾಶ್ರಿತ ಜನರಿಗಾಗಿ ಆಹಾರ, ಔಷಧ ಸೇರಿದಂತೆ ಹಲವು ರೀತಿಯ ನೆರವು ನೀಡುತ್ತಿರುವ ಅಂತರರಾಷ್ಟ್ರೀಯ ಸಂಸ್ಥೆಗಳು ಈ ಭಾಗದಲ್ಲಿಯೇ ಕಾರ್ಯನಿರ್ವಹಿಸುತ್ತಿವೆ.

ಇಸ್ರೇಲ್ ತನ್ನ ಈವರೆಗಿನ ಕಾರ್ಯಾಚರಣೆಯಲ್ಲಿ ಗಾಜಾದ ಈ ಭಾಗದ ಮೇಲೆ ದಾಳಿ ನಡೆಸಿರಲಿಲ್ಲ. ಈ ಆದೇಶದಿಂದ ದಾರ್ ಅಲ್-ಬಲಾ ನಗರ ಹಾಗೂ ಗಾಜಾದ ದಕ್ಷಿಣ ಭಾಗದಲ್ಲಿರುವ ರಫಾ ಹಾಗೂ ಖಾನ್ ಯೂನುಸ್ ನಗರದ ಮಧ್ಯೆ ಇರುವ ಸಂಪರ್ಕ ಕಡಿತವಾಗಲಿದೆ.

ಇಸ್ರೇಲ್ ಹಾಗೂ ಹಮಾಸ್ ಬಂಡುಕೋರ ಸಂಘಟನೆಯ ಮಧ್ಯೆ ಕದನ ವಿರಾಮಕ್ಕೆ ಸಂಬಂಧಿಸಿ ಕತಾರ್‌ನಲ್ಲಿ ಮಾತುಕತೆ ನಡೆಯುತ್ತಿದೆ. ಆದರೆ, ಮಾತುಕತೆಯಲ್ಲಿ ಯಾವುದೇ ಪ್ರಗತಿ ಸಾಧಿಸಿಲ್ಲ. 'ಮಾತುಕತೆಗೆ ಬರುವಂತೆ ಹಮಾಸ್ ಮೇಲೆ ಒತ್ತಡ ಹೇರಲು ಗಾಜಾ ಮೇಲೆ ದಾಳಿ ನಡೆಸಲೇಬೇಕು' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪದೇ ಪದೇ ಹೇಳಿದ್ದಾರೆ.

ಅನಿಲ: ಏಕರೂಪಿ ಶುಲ್ಕಕ್ಕೆ ಆದೇಶ

ಕಂಪನಿಗಳು ಗ್ರಾಹಕರಿಗೆ ಭಿನ್ನ ಬಗೆಯಲ್ಲಿ ಶುಲ್ಕ ನಿಗದಿ ಮಾಡುವುದು ತಪ್ಪು ಎಂದ ಮಂಡಳಿ

ನವದೆಹಲಿ (ಪಿಟಿಐ): ಕೊಳವೆ ಮೂಲಕ ಮನೆಗಳಿಗೆ ಅಡುಗೆ ಉದ್ದೇಶಕ್ಕೆ ಪೂರೈಕೆ ಮಾಡುವ ನೈಸರ್ಗಿಕ ಅನಿಲಕ್ಕೆ ಏಕರೂಪದ ದರ ನಿಗದಿ ಮಾಡಬೇಕು ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿಯು (ಪಿಎನ್‌ಜಿಆರ್‌ಬಿ) ಕಂಪನಿಗಳಿಗೆ ಆದೇಶಿಸಿದೆ.

ಮನೆಗಳಲ್ಲಿ ನೈಸರ್ಗಿಕ ಅನಿಲದ ಬಳಕೆ ಮಟ್ಟವು ಯಾವುದೇ ಪ್ರಮಾಣದಲ್ಲಿ ಇದ್ದರೂ ದರ ನಿಗದಿ ವ್ಯವಸ್ಥೆಯು ಏಕರೂಪಿ ಆಗಿರಬೇಕು ಎಂದು ಮಂಡಳಿಯು ತಾಕೀತು ಮಾಡಿದೆ. ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚು ನೈಸರ್ಗಿಕ ಅನಿಲ ಬಳಕೆ ಮಾಡುವ ಕುಟುಂಬಗಳಿಗೆ ಹೆಚ್ಚು ದರ ವಿಧಿಸುವ ಕಂಪನಿಗಳ ಪ್ರವೃತ್ತಿಗೆ ಈ ಮೂಲಕ ಮೂಗುದಾರ ಹಾಕಲು ಮಂಡಳಿಯು ಮುಂದಾಗಿದೆ.

ಕೇಂದ್ರ ಸರ್ಕಾರವು ಕಂಪನಿಗಳಿಗೆ ನೈಸರ್ಗಿಕ ಅನಿಲವನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ಹಂಚಿಕೆ ಮಾಡುತ್ತದೆ. ಇದನ್ನು ಕಂಪನಿಗಳು ಮನೆಗಳಿಗೆ ಕೊಳವೆ ಮೂಲಕ ಪೂರೈಕೆ ಮಾಡುತ್ತವೆ. ಸರ್ಕಾರವು ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ಅನಿಲ ಪೂರೈಸುತ್ತಿರುವ ಕಾರಣಕ್ಕೆ, ಕಂಪನಿಗಳು ಕೂಡ ಅದರ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಬೇಕು ಎಂಬ ನಿರೀಕ್ಷೆ ಇರುತ್ತದೆ.

ಮನೆಗಳಿಗೆ ಪೂರೈಸುವ ಅನಿಲದ ಬೆಲೆಯು ಮಾರುಕಟ್ಟೆ ಬೆಲೆಗಿಂತ ಕಡಿಮೆ ಇರುತ್ತದೆ. ಹೋಟೆಲ್‌ಗಳಂತಹ ವಾಣಿಜ್ಯ ಕೇಂದ್ರಗಳಿಗೆ ಪೂರೈಸುವ ಅನಿಲದ ಬೆಲೆಯನ್ನು ಮಾರುಕಟ್ಟೆ ಬೆಲೆಯ ಮಟ್ಟದಲ್ಲಿ ನಿಗದಿ ಮಾಡಲಾಗುತ್ತದೆ.

ಆದರೆ ನಗರಗಳಲ್ಲಿ ಕೊಳವೆ ಮೂಲಕ ಅನಿಲ ಪೂರೈಸುವ ಕೆಲವು ಸಂಸ್ಥೆಗಳು ಮನೆಬಳಕೆಯ ಗ್ರಾಹಕರಿಗೆ ಬೇರೆ ರೀತಿಯಲ್ಲಿ ಶುಲ್ಕ ನಿಗದಿ ಮಾಡುತ್ತಿವೆ. ಮೊದಲೇ ನಿಗದಿ ಮಾಡಿರುವ ಮಟ್ಟವನ್ನು ದಾಟಿದ ನಂತರದಲ್ಲಿ ಪ್ರತಿ ಯೂನಿಟ್‌ನ (ಎಸ್‌ಸಿಎಂ ಅಂದರೆ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್‌ಅನ್ನು ಯೂನಿಟ್ ಎಂದು ಪರಿಗಣಿಸಲಾಗುತ್ತದೆ) ಶುಲ್ಕವು ಹೆಚ್ಚಳ ಆಗುತ್ತದೆ ಎಂದು ಪಿಎನ್‌ಜಿಆರ್‌ಬಿ ಹೇಳಿದೆ. ಆದರೆ ಈ ರೀತಿ ಮಾಡುವುದು ಸರಿಯಲ್ಲ ಎಂದು ಅದು ಹೇಳಿದೆ.

'ಇಂತಹ ಬೆಲೆ ನಿಗದಿ ಪದ್ಧತಿಯು ಸಬ್ಸಿಡಿ ಇರುವ ಅನಿಲವನ್ನು ವಾಣಿಜ್ಯ ಬಳಕೆದಾರರು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಅನುವು ಮಾಡಿಕೊಡಬಹುದು' ಎಂದು ಅದು ಎಚ್ಚರಿಸಿದೆ. ಆದರೆ ಯಾವ ಕಂಪನಿಗಳು ಈ ಬಗೆಯಲ್ಲಿ ಶುಲ್ಕ ನಿಗದಿ ಮಾಡುತ್ತಿವೆ ಎಂಬುದನ್ನು ಮಂಡಳಿಯು ಹೆಸರಿಸಿಲ್ಲ.

ಮನೆಬಳಕೆಗೆ ನೈಸರ್ಗಿಕ ಅನಿಲ ಸಂಪರ್ಕ ಹೊಂದಿರುವ ಎಲ್ಲರಿಗೂ, ಅವರ ಬಳಕೆ ಪ್ರಮಾಣ ಯಾವುದೇ ಇದ್ದರೂ, ಏಕರೂಪಿ ಶುಲ್ಕ ವ್ಯವಸ್ಥೆ ಇರಬೇಕು ಎಂದು ಮಂಡಳಿಯು ಸೂಚನೆಯಲ್ಲಿ ಹೇಳಿದೆ.

25 ವರ್ಷವಾದರೂ ಸೃಷ್ಟಿಯಾಗಿಲ್ಲ ಹುದ್ದೆ!

ಒಂದನೇ ಪುಟದಿಂದ...

ಈ ರೀತಿ ಪ್ರತ್ಯೇಕವಾದಾಗ, ಬಹುತೇಕ ಉಪನ್ಯಾಸಕರು ಪದವಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡರು. ಬೆರಳೆಣಿಕೆಯಷ್ಟು ಪದವಿ ಕಾಲೇಜುಗಳಲ್ಲಿ ಕಾರ್ಯಭಾರ ಇರಲಿಲ್ಲ. ಅಂತಹ ಕಡೆ 544 ಮಂದಿ ಅನಿವಾರ್ಯವಾಗಿ ವಿಭಜಿತ ಪದವಿ ಪೂರ್ವ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡರು. ಅಂಥವರಲ್ಲಿ ಬಹುತೇಕ ಮಂದಿ ಈಗ ನಿವೃತ್ತರಾಗಿದ್ದಾರೆ. ಆ ಹುದ್ದೆಗಳನ್ನೂ ಸರ್ಕಾರ ತುಂಬುತ್ತಿಲ್ಲ. ಇದರಿಂದಾಗಿ ಬೋಧನೆಗೆ ತೊಂದರೆಯಾಗುತ್ತಿದೆ ಎಂದು ಉಪನ್ಯಾಸಕರೊಬ್ಬರು ಅಳಲು ತೋಡಿಕೊಂಡರು.

'ವಿಭಜನೆಯಾದ ಪಿಯು ಕಾಲೇಜುಗಳಲ್ಲಿ ವಿಷಯವಾರು ಹುದ್ದೆಗಳನ್ನು ಸೃಷ್ಟಿಸಿ, ಅವುಗಳ ಭರ್ತಿಗೆ ಸರ್ಕಾರ ಅನುಮತಿ ನೀಡಬೇಕಾಗಿತ್ತು. ಅಲ್ಲದೆ ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿತ್ತು. ಆದರೆ, ಇಷ್ಟು ವರ್ಷವಾದರೂ ಇತ್ತ ಗಮನಹರಿಸಿಲ್ಲ. ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಿಯು ಕಾಲೇಜಿಗೆ ಇನ್ನೂ ಹುದ್ದೆಗಳು ಸೃಷ್ಟಿಯಾಗಿಲ್ಲ. ವಿಭಜಿತ ಪಿಯು ಕಾಲೇಜುಗಳಲ್ಲಿ ಈಗ ಇರುವ ಸಿಬ್ಬಂದಿ ಸಂಯುಕ್ತ ಪದವಿ ಕಾಲೇಜು ಗಳಿಂದ ಬಂದವರು. ಹೀಗಾಗಿ ಅವರ ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ತುಂಬಲು ತಾಂತ್ರಿಕ ತೊಂದರೆಗಳು ಇವೆ. ಈ ಸಮಸ್ಯೆಯನ್ನು ಸರ್ಕಾರದ ಮಟ್ಟದಲ್ಲಿ ಬಗೆಹರಿಸಿಕೊಳ್ಳಬೇಕು ಎನ್ನುತ್ತಾರೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು.

ಹೆಸರಿಗಷ್ಟೇ ಅನುದಾನಿತ ಕಾಲೇಜು: ಸಂಯುಕ್ತ ಪದವಿ ಕಾಲೇಜಿನಿಂದ ಪಿಯು ಕಾಲೇಜುಗಳು ಪ್ರತ್ಯೇಕವಾದಾಗ ಸರ್ಕಾರದಿಂದ ಅನುಮೋದನೆಯಾದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ-ಬೋಧಕೇತರ ಸಿಬ್ಬಂದಿಯನ್ನು ಹೊರತುಪಡಿಸಿ, ಖಾಲಿ ಇರುವ ಹುದ್ದೆಗಳನ್ನು ಅನುದಾನ ರಹಿತ ಎಂದು ಘೋಷಿಸಲಾಗಿದೆ. ಬಹುತೇಕ ಕಾಲೇಜುಗಳಲ್ಲಿ ಇಬ್ಬರು ಅಥವಾ ಮೂವರು ಕಾಯಂ ಉಪನ್ಯಾಸಕರು ಇದ್ದಾರೆ. ಇವರನ್ನು ಇಟ್ಟುಕೊಂಡು ಅನುದಾನಿತ ಕಾಲೇಜು ಎಂದು ಹೇಳುವ ಬದಲು ಮುಚ್ಚುವುದೇ ಒಳ್ಳೆಯದು ಎಂದು ಉಪನ್ಯಾಸಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.

ವಿಭಜನೆ ಬಳಿಕ ಉಂಟಾಗುವ ಕಾರ್ಯಭಾರ, ಜ್ಯೇಷ್ಠತೆ ಇತ್ಯಾದಿ ಸಮಸ್ಯೆಗಳ ನಿವಾರಣೆ ಸಂಬಂಧ ಪ್ರಾಂಶುಪಾಲರ ಸಭೆ ಕರೆದು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನಾಲಯದಿಂದ ಸೂಚನೆಗಳನ್ನು ನೀಡಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿತ್ತು. ಆದರೆ, ಇದುವರೆಗೂ ಆ ನಿಟ್ಟಿನಲ್ಲಿ ಯಾವುದೇ ಪ್ರಯತ್ನ ಆಗಿಲ್ಲ ಎನ್ನುತ್ತಾರೆ ಉಪನ್ಯಾಸಕರು.

ಸಂಯುಕ್ತ ಪದವಿ ಕಾಲೇಜಿನಲ್ಲಿ ಇದ್ದ ಬೋಧಕರನ್ನು ಸೇವಾ ಹಿರಿತನದ ಮೇಲೆ ಪಿಯು ಕಾಲೇಜಿನಲ್ಲಿ ಪ್ರಾಂಶುಪಾಲರ ಹುದ್ದೆಗೆ ಪ್ರಭಾರಿಯಾಗಿ ನೇಮಿಸಲಾಗಿತ್ತು. ಅವರ ನಿವೃತ್ತಿ ಬಳಿಕ ಮತ್ತೊಬ್ಬ ಪ್ರಭಾರಿ ಬರುತ್ತಾರೆ. ಕಾಯಂ ಆಗಿ ಪ್ರಾಂಶುಪಾಲರು ಇಲ್ಲ. ವಿಭಜಿತ ಪಿಯು ಕಾಲೇಜುಗಳು ನಾಮಕಾವಸ್ತೆಗೆ ಇವೆ. ಇವುಗಳ ಗೋಳು ಕೇಳುವವರೇ ಇಲ್ಲ ಎಂದು ಪ್ರಭಾರಿ ಪ್ರಾಂಶುಪಾಲರೊಬ್ಬರು ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಕೋರ್ಟ್‌ಗಳಲ್ಲಿ ಎ.ಐ ಬಳಕೆ: ಹೈಕೋರ್ಟ್ ಮಾರ್ಗಸೂಚಿ

ಕೊಚ್ಚಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಬಳಕೆಯ ಮೇಲೆ ನಿಯಂತ್ರಣ ಹೇರುವುದಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಕೇರಳ ಹೈಕೋರ್ಟ್ ಹೊರತಂದಿದ್ದು, ಜಿಲ್ಲಾ ನ್ಯಾಯಾಲಯಗಳು ನಿರ್ಧಾರ ತೆಗೆದುಕೊಳ್ಳುವಾಗ ಅಥವಾ ಕಾನೂನಿನಡಿ ತರ್ಕವನ್ನು ಮಂಡಿಸುವಾಗ ಎ.ಐ ತಂತ್ರಜ್ಞಾನ ಬಳಸುವಂತಿಲ್ಲ ಎಂದು ಹೇಳಿದೆ.

ಎ.ಐ ತಂತ್ರಜ್ಞಾನದ ಹೆಚ್ಚುತ್ತಿರುವ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿರುವ ಜಿಲ್ಲಾ ನ್ಯಾಯಾಲಯಗಳಲ್ಲಿ ಈ ತಂತ್ರಜ್ಞಾನದ ಜವಾಬ್ದಾರಿಯುತ ಮತ್ತು ನಿರ್ಬಂಧಿತ ಬಳಕೆಗಾಗಿ, 'ಜಿಲ್ಲಾ ನ್ಯಾಯಾಲಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಳಕೆ' ಹೆಸರಿನ ನೀತಿಯನ್ನು ಬಿಡುಗಡೆ ಮಾಡಿದೆ.

ನ್ಯಾಯಾಲಯದ ಮೂಲಗಳ ಪ್ರಕಾರ, ಜಿಲ್ಲಾ ನ್ಯಾಯಾಲಯಗಳಲ್ಲಿ ಎ.ಐ ಬಳಕೆಗೆ ಸಂಬಂಧಿಸಿದಂತೆ ಇಂತಹ ನೀತಿಯನ್ನು ರೂಪಿಸಿರುವುದು ದೇಶದಲ್ಲಿ ಇದೇ ಮೊದಲು.

ಶಾಸಕ ಚವಾಣ್ ಮಗನ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'ನಂತರ ಇಬ್ಬರು ನಾನಾ ಕಡೆ ಸುತ್ತಾಡಿದ್ದೇವೆ. ಈ ವೇಳೆ ಪ್ರತೀಕ್ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಯುವತಿ ದೂರು ನೀಡಿದ್ದಾರೆ.

ಖೂಬಾ ಕುತಂತ್ರ: ಘಟನೆ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಸಕ ಪ್ರಭು ಚವಾಣ್, 'ನನ್ನನ್ನು ಮುಗಿಸಬೇಕೆಂಬ ಒಂದೇ ಉದ್ದೇಶದಿಂದ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ನನ್ನ ವಿರುದ್ಧ ಹುನ್ನಾರ ನಡೆಸುತ್ತಿದ್ದಾರೆ. ಅವರ ಕುತಂತ್ರದಿಂದಲೇ ನನ್ನ ಹಾಗೂ ನಮ್ಮ ಕುಟುಂಬ ಸದಸ್ಯರ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ಕೊಡಲಾಗಿದೆ' ಎಂದು ಆರೋಪಿಸಿದರು.

'ಶಾಲೆಗಳಲ್ಲೇ ಮಕ್ಕಳ ಬಯೊಮೆಟ್ರಿಕ್ ಅಪ್‌ಡೇಟ್'

ನವದಹಲಿ (ಪಿಟಿಐ): ದೇಶದ 7 ಕೋಟಿ ಮಕ್ಕಳ ಆಧಾರ್ ಕಾರ್ಡ್ ಅಪ್‌ಡೇಟ್ ಆಗದಿರುವ ಕಾರಣ ಶಾಲೆಗಳಲ್ಲಿಯೇ ಬಯೊಮೆಟ್ರಿಕ್ ಅಪ್‌ಡೇಟ್ ಮಾಡಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಚಿಂತನೆ ನಡೆಸಿದೆ.

ಈ ನಿಟ್ಟಿನಲ್ಲಿ ಯೋಜನೆಯೊಂದನ್ನು ರೂಪಿಸಲಾಗುತ್ತಿದ್ದು, 40 ದಿನದಿಂದ 60 ದಿನಗಳ ಒಳಗೆ ಯೋಜನೆ ಸಿದ್ಧಗೊಳ್ಳಲಿದೆ ಎಂದು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ್ ಕುಮಾರ್ ತಿಳಿಸಿದ್ದಾರೆ.

5 ವರ್ಷದ ದಾಟಿದ ಪ್ರತಿ ಮಗುವಿನ ಬಯೊಮೆಟ್ರಿಕ್ ಅಪ್‌ಡೇಟ್ ಮಾಡುವುದು ಕಡ್ಡಾಯವಾಗಿದೆ. 7 ವರ್ಷ ದಾಟಿದ ಬಳಿಕವೂ ಅಪ್‌ಡೇಟ್ ಆಗದಿದ್ದರೆ ಆ ಮಗುವಿನ ಆಧಾರ್ ಕಾರ್ಡ್ ಸಂಖ್ಯೆ ನಿಷ್ಕ್ರಿಯವಾಗಲಿದೆ. ಈ ಕಾರಣದಿಂದ ಪೋಷಕರ ಸಮ್ಮತಿ ಪಡೆದು ಶಾಲೆಗಳಲ್ಲೇ ಬಯೊಮೆಟ್ರಿಕ್ ಅಪ್‌ಡೇಟ್ ಮಾಡಲು ಚಿಂತನೆ ನಡೆಸಲಾಗಿದೆ ಎಂದೂ ಮಾಹಿತಿ ನೀಡಿದ್ದಾರೆ.

ಯೋಧರಿಗೆ ಚಹಾ ಪೂರೈಸಿದ ಬಾಲಕನ ಶಿಕ್ಷಣ ವೆಚ್ಚ ಭರಿಸಲಿದೆ ಸೇನೆ

ಚಂಡೀಗಢ (ಪಿಟಿಐ): ಅದು 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ಸಮಯ. ಪಂಜಾಬ್‌ನ ಗ್ರಾಮವೊಂದರಲ್ಲಿ ಪಾಕಿಸ್ತಾನದೊಂದಿಗೆ ಗುಂಡಿನ ಚಕಮಕಿ ನಡೆಸುತ್ತಿದ್ದ ಭಾರತದ ಸೈನಿಕರಿಗೆ 10 ವರ್ಷದ ಪೋರನೊಬ್ಬ ನೀರು, ಚಹಾ, ಹಾಲು, ಐಸ್ ಕ್ರೀಂ ಹಾಗೂ ಲಸ್ಸಿ ನೀಡುತ್ತಾ ನೆರವಾಗಿದ್ದ. ಇದೀಗ ಆ ಬಾಲಕನ ಸಂಪೂರ್ಣ ಶೈಕ್ಷಣಿಕ ವೆಚ್ಚವನ್ನು ಭರಿಸಲು ಭಾರತೀಯ ಸೇನೆ ಮುಂದಾಗಿದೆ.

ತಾರಾ ವಾಲಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಯೋಧರಿಗೆ ಬಾಲಕ ಶ್ವನ್ ಸಿಂಗ್ ನೆರವಾಗುವ ಮೂಲಕ ಅವರ ಪ್ರೀತಿಗೆ ಪಾತ್ರನಾಗಿದ್ದ. ಬಾಲಕನ ಧೈರ್ಯ ಮತ್ತು ಉತ್ಸಾಹವನ್ನು ಮೆಚ್ಚಿ ಸೇನೆಯ 'ಗೋಲ್ಡನ್ ಆ್ಯರೋ' ವಿಭಾಗವು, ಆತನ ಶೈಕ್ಷಣಿಕ ವೆಚ್ಚ ಭರಿಸಲು ಬದ್ಧವಾಗಿರುವುದಾಗಿ ಘೋಷಿಸಿದೆ.

ಫಿರೋಜ್‌ಪುರದಲ್ಲಿ ನಡೆದ ಸಮಾರಂಭದಲ್ಲಿ ಸೇನೆಯ ಪಶ್ಚಿಮ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್, ಲೆಫ್ಟಿನೆಂಟ್ ಜನರಲ್ ಮನೋಜ್ ಕಟಿಯಾರ್ ಅವರು ಬಾಲಕ ಶ್ವನ್‌ನನ್ನು ಶನಿವಾರ ಸನ್ಮಾನಿಸಿದರು.

ಸೇನೆಯ ಅಧಿಕಾರಿ ನೀಡಿದ, ವಿದ್ಯಾಭ್ಯಾಸಕ್ಕೆ ಬೇಕಾದ ಕೆಲ ವಸ್ತುಗಳನ್ನು ಪಡೆದುಕೊಂಡ ಬಾಲಕ ಶ್ವನ್ ಸಿಂಗ್ ಹಾಗೂ ತಂದೆ

ಚಿತ್ರ: ಆಲ್ ಇಂಡಿಯಾ ರೇಡಿಯೊ 'ಎಕ್ಸ್'

'ದೊಡ್ಡವನಾದ ಮೇಲೆ ನಾನು ಸೇನೆಗೆ ಸೇರುತ್ತೇನೆ. ದೇಶಕ್ಕಾಗಿ ಸೇವೆ ಸಲ್ಲಿಸುತ್ತೇನೆ' ಎಂದು ಶ್ವನ್ ಹೇಳಿದ್ದಾನೆ. ಈತ ಫಿರೋಜ್‌ಪುರ ಜಿಲ್ಲೆಯ ಮಂದೊತ್ ಗ್ರಾಮದ ನಿವಾಸಿ.

ಗಾಜಾ: ನೆರವಿನ ನಿರೀಕ್ಷೆಯಲ್ಲಿದ್ದ 73 ಮಂದಿ ಸಾವು

ದಾರ್ ಅಲ್-ಬಲಾ (ಗಾಜಾ ಪಟ್ಟಿ) (ಎಪಿ): ಗಾಜಾದ ವಿವಿಧೆಡೆ ನೆರವು ಸಾಮಾಗ್ರಿ ಪಡೆಯಲು ಧಾವಿಸುತ್ತಿದ್ದ 73 ಜನರು ಭಾನುವಾರ ಮೃತಪಟ್ಟಿದ್ದಾರೆ.

150ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಹಲವರ ಸ್ಥಿತಿ ಗಂಭೀರವಾಗಿದೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ಉತ್ತರ ಗಾಜಾದಾಲ್ಲಿಯೇ ಅತಿ ಹೆಚ್ಚು ಸಾವು ಸಂಭವಿಸಿದೆ. ಜಿಕಿಮ್ ಮೂಲಕ ಉತ್ತರ ಗಾಜಾವನ್ನು ಪ್ರವೇಶಿಸಲು ಯತ್ನಿಸುತ್ತಿದ್ದ 67 ಮಂದಿ ಮೃತಪಟ್ಟಿದ್ದಾರೆ ಎಂದು ಸಚಿವಾಲಯ ಮತ್ತು ಸ್ಥಳೀಯ ಆಸ್ಪತ್ರೆಗಳು ತಿಳಿಸಿವೆ.

ಇಸ್ರೇಲ್ ಸೇನೆ ಅಥವಾ ಬಂಡುಕೋರರ ದಾಳಿಯಿಂದ ಜನರು ಮೃತಪಟ್ಟಿದ್ದಾರೆಯೇ ಎಂಬುವುದು ಖಚಿತವಾಗಿಲ್ಲ. ಆದರೆ, ಜನರ ಗುಂಪಿನ ಮೇಲೆ ಇಸ್ರೇಲ್ ಸೇನೆ ದಾಳಿ ಮಾಡಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಘಟನೆಯ ಬಗ್ಗೆ ಇಸ್ರೇಲ್ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ನೆರವು ಸಾಮಗ್ರಿಗಳನ್ನು ಹಿಡಿದುಕೊಂಡು ಪ್ಯಾಲೆಸ್ಟೀನಿಯರು ಸಾಗಿದರು ಎಪಿ ಚಿತ್ರ

ಜಪಾನ್ ಮೈತ್ರಿ ಸರ್ಕಾರಕ್ಕೆ ಚುನಾವಣಾ ಹಿನ್ನಡೆ: ಸಮೀಕ್ಷೆ

ಟೋಕ್ಯೊ (ಎಪಿ): ಜಪಾನ್‌ನಲ್ಲಿ ಭಾನುವಾರ ಚುನಾವಣೆ ಕೊನೆಗೊಂಡಿದ್ದು, ದ್ವಿಸದನಗಳ ಸಂಸತ್ತಿನಲ್ಲಿ ಹಾಲಿ ಪ್ರಧಾನಿ ಶಿಗೆರು ಇಶಿಬಾ ನೇತೃತ್ವದ ಸಮ್ಮಿಶ್ರ ಸರ್ಕಾರ ಬಹುಮತ ಕಳೆದುಕೊಳ್ಳಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಇದರಿಂದ ದೇಶದಲ್ಲಿ ರಾಜಕೀಯ ಅನಿಶ್ಚಿತತೆ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ ಹೆಚ್ಚಾಗಿದೆ.

ಜಪಾನ್ ಮೇಲ್ಮನೆಯ 248 ಸ್ಥಾನಗಳ ಪೈಕಿ ಬಹುಮತಕ್ಕೆ 125 ಸ್ಥಾನಗಳ ಅಗತ್ಯವಿದೆ. ಚುನಾವಣೆಗೂ ಮುನ್ನ 141 ಸ್ಥಾನ ಹೊಂದಿರುವ ಇಶಿಬಾ ಮೈತ್ರಿಕೂಟಕ್ಕೆ ದೊಡ್ಡ ಹಿನ್ನಡೆ ಆಗಲಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ಜಪಾನ್‌ನ ಎನ್‌ಎಚ್‌ಕೆ ವಾಹಿನಿ ಪ್ರಕಾರ, ಪ್ರಧಾನಿ ಅವರ ನೇತೃತ್ವದ ಮೈತ್ರಿಕೂಟ 32ರಿಂದ 51 ಸ್ಥಾನ ಗೆಲ್ಲಬಹುದು. ಮತ್ತೊಂದು ವಾಹಿನಿಯು ಈ ಮೈತ್ರಿಕೂಟಕ್ಕೆ 40 ಸ್ಥಾನಗಳನ್ನು ನೀಡಿದೆ.

ಶಿಗೆರು ಇಶಿಬಾ

ಇದರಿಂದ ತಕ್ಷಣವೇ ಸರ್ಕಾರ ಬದಲಾಗದು. ಏಕೆಂದರೆ ಮೇಲ್ಮನೆಗೆ ನಾಯಕನ ವಿರುದ್ಧ ಅವಿಶ್ವಾಸ ಮಂಡನೆಯ ಅಧಿಕಾರ ಇಲ್ಲ. ಆದರೆ ತನ್ನದೇ ಮೈತ್ರಿಯ ಒಳಗೆ ಮತ್ತೊಬ್ಬ ನಾಯಕನ ಆಯ್ಕೆ ಸವಾಲು ಇಶಿಬಾಗೆ ಎದುರಾಗಲಿದೆ.

ಆದರೆ ಇಶಿಬಾ ಸರಳ ಬಹುಮತದ 125 ಸ್ಥಾನದ ನಿರೀಕ್ಷೆಯಲ್ಲಿದ್ದಾರೆ. ಎಲ್‌ಡಿಪಿ ಮತ್ತು ಅವರ ಮಿತ್ರ ಪಕ್ಷ, ಬೌದ್ಧ ಸಮುದಾಯ ಬೆಂಬಲಿತ ಕೊಮೈಟೊ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ 50 ಸ್ಥಾನ ಗೆಲ್ಲುವ ವಿಶ್ವಾಸದಲ್ಲಿದೆ.

ಬೆಲೆ ಏರಿಕೆ, ಆದಾಯ ಕುಸಿತ, ಸಾಮಾಜಿಕ ಭದ್ರತಾ ಪಾವತಿಗಳ ಹೊರೆ ವಿಚಾರಗಳೇ ಚುನಾವಣೆಯಲ್ಲಿ ಬಲಪಂಥೀಯ ಪಾಪ್ಯುಲಿಸ್ಟ್ ಪಾರ್ಟಿಯ ಅಸ್ತ್ರಗಳಾಗಿದ್ದವು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ14,000-18,000. 8951315839, 7022770052

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/-ದಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

Office Boys/ Peon

OFFICE BOY required, pantry work, preparing tea/coffee, running errands, as needed. Full Time. Mob-: 9686644702

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

16.10.2025 11.11.2025 08.12.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 11.09.2025 04.10.2025 ಭೂತಾನ್ 8 ದಿನಗಳು.11 .10.2025 01.11.2025 ಶ್ರೀಲಂಕಾ 7 ದಿನಗಳು. 15.09.2025 06.10.2025 03.11.2025 ಕಾಶಿ,ಗಯಾ,ಅಯೋಧ್ಯ 7 ದಿನಗಳು. 11.10.2025 16.11.2025 ಅಸ್ಸಾಂ ಮೇಘಾಲಯ 6/9 ದಿನಗಳು. 04.10.2025 16.11.2025 ಮಧ್ಯಪ್ರದೇಶ 4/10 ದಿನಗಳು. 20.09.2025 06.10.2025 03.11.2025 ಗುಜರಾತ್ 8 ದಿನಗಳು. 22.09.2025 16.10.2025 11.11.2025 ರಾಜಸ್ಥಾನ 9ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು.03. 7022547922 9448402248

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಏಳು ವರ್ಷಗಳ ನಂತರ ಬಂದಿರುವೆ'

ಪ್ರಣಮ್ ದೇವರಾಜ್, ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿರುವ 'S\O ಮುತ್ತಣ್ಣ' ಚಿತ್ರ ಆ.22ರಂದು ತೆರೆಗೆ ಬರಲಿದೆ. ಸುದೀರ್ಘ ವಿರಾಮದ ಬಳಿಕ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಪ್ರಣಮ್, ಚಿತ್ರ ಹಾಗೂ ತಮ್ಮ ಮುಂದಿನ ಸಿನಿಪಯಣದ ಕುರಿತು ಮಾತಿಗೆ ಸಿಕ್ಕರು...

• ವಿನಾಯಕ ಕೆ.ಎಸ್.

'ಚಿತ್ರದಲ್ಲಿ 'ಶಿವು' ಎಂಬ ಪಾತ್ರ ಮಾಡಿರುವೆ. ಜೀವನದಲ್ಲಿ ಅನ್ಯೋನ್ಯವಾಗಿರುವ ಅಪ್ಪ–ಮಗನ ಕಥೆ. ಅವರಿಬ್ಬರು ಒಬ್ಬರನ್ನೊಬ್ಬರು ಬಿಟ್ಟು ಇರುವುದಿಲ್ಲ. ಅಪ್ಪ ನಿವೃತ್ತ ಸೇನಾಧಿಕಾರಿ. ಆತನನ್ನು ನೋಡಿಕೊಳ್ಳುವ ಮಗನ ಪಾತ್ರ ನನ್ನದು. ಅಮ್ಮ ಯಾಕೆ ಇಬ್ಬರಿಂದ ದೂರವಾಗಿರುತ್ತಾಳೆ ಎಂಬುದನ್ನು ನೀವು ಚಿತ್ರದಲ್ಲಿಯೇ ನೋಡಬೇಕು' ಎಂದು ತಮ್ಮ ಪಾತ್ರದ ಪರಿಚಯದೊಂದಿಗೆ ಮಾತು ಪ್ರಾರಂಭಿಸಿದರು ಪ್ರಣಮ್.

'ಚಿತ್ರದಲ್ಲಿ ಒಂದು ಪ್ರೇಮಕಥೆಯಿದೆ. ಜೀವನದಲ್ಲಿ ಎಲ್ಲ ಖುಷಿಯಾಗಿರುತ್ತದೆ. ಚಿಕ್ಕ ಸಮಸ್ಯೆಯಿಂದ ಅಪ್ಪನ ಜತೆ ಮನಸ್ತಾಪವಾಗುತ್ತದೆ. ಅಪ್ಪ ಮತ್ತು ನಾಯಕಿಯನ್ನು ಹೇಗೆ ನಿಭಾಯಿಸುತ್ತಾನೆ ಎನ್ನುವ ಸನ್ನಿವೇಶಗಳಿವೆ. ಗಿರಿ, ಸುಧಾ ಬೆಳವಾಡಿ, ಸುಚೇಂದ್ರ ಪ್ರಸಾದ್ ಮುಂತಾದವರು ನಟಿಸಿದ್ದಾರೆ. ಈ ಎಲ್ಲ ಪಾತ್ರಗಳ ಜತೆ ನಾಯಕ ಹೇಗೆ ಭಾವನಾತ್ಮಕವಾಗಿ ಸಾಗುತ್ತಾನೆ ಎಂಬುದೇ ಚಿತ್ರಕಥೆ' ಎಂದರು.

'ಏಳುವರೆ ವರ್ಷಗಳ ನಂತರ ಮತ್ತೆ ತೆರೆಯ ಮೇಲೆ ಬರುತ್ತಿದ್ದೇನೆ. 2018ರಲ್ಲಿ 'ವೈರಂ' ಎಂಬ ಚಿತ್ರ ಪ್ರಾರಂಭಿಸಿದೆ. ಆಮೇಲೆ ಕೋವಿಡ್ ಬಂತು. ಆರ್ಥಿಕ ಸಂಕಷ್ಟದಿಂದ ನಿರ್ಮಾಪಕರು ಹಿಂದೆ ಸರಿದರು. ಹೀಗಾಗಿ ಸಿನಿಮಾ ನಿಧಾನವಾಯಿತು. ಮೊದಲ ಸಿನಿಮಾ 'ಕುಮಾರಿ' ಹೆಚ್ಚು ಯಶಸ್ವಿಯಾಗಲಿಲ್ಲ. ಹೀಗಾಗಿ ನಟನಾಗಿ ಯಾರೂ ನನ್ನ ಕೆಲಸ ನೋಡಿರಲಿಲ್ಲ. 'ವೈರಂ' ಬಿಡುಗಡೆಯಾಗಿದ್ದರೆ ನಿರ್ಮಾಪಕರಿಗೆ ಹೀಗೊಬ್ಬ ನಟ ಇದ್ದಾನೆ ಎಂಬುದು ಬಹುಶಃ ತಿಳಿಯುತ್ತಿತ್ತು. ಆ ಕಾರಣದಿಂದ ಅವಕಾಶಗಳು ಬರಲಿಲ್ಲ. ಒಂದಷ್ಟು ಕಥೆಗಳನ್ನು ಕೇಳಿದ್ದೆ. ಆದರೆ ನನಗೆ ಕಥೆಗಳು ಇಷ್ಟವಾಗಲಿಲ್ಲ. ನನ್ನ ನಟನೆ ಸಾಮರ್ಥ್ಯ ತೋರಿಸಲು ಗಟ್ಟಿಯಾದ ಸ್ಕ್ರಿಪ್ಟ್ ಬೇಕಿತ್ತು. ಜತೆಗೊಂದು ಪ್ರಬಲವಾದ ತಂಡ ಎದುರು ನೋಡುತ್ತಿದ್ದೆ. ಆಗ 'S\O ಮುತ್ತಣ್ಣ' ಚಿತ್ರತಂಡ ನನಗೆ ಲಭಿಸಿತು. ಒಂದೊಳ್ಳೆ ಚಿತ್ರದೊಂದಿಗೆ ಮತ್ತೆ ಬಂದಿರುವೆ ಎಂಬ ಖುಷಿಯಿದೆ' ಎಂಬುದು ಅವರ ಮನದಾಳದ ಮಾತು.

'ರಂಗಾಯಣ ರಘು ಸರ್ ಅಂಥ ನಟರಿದ್ದಾರೆ ಎಂದಾಗ ನಮಗೂ ಈ ರೀತಿ ಒಂದು ಸಿನಿಮಾ ಮಾಡಬಹುದೆಂಬ ಆತ್ಮವಿಶ್ವಾಸ ಬರುತ್ತದೆ. ನಾವು ಇವತ್ತು ಡಿಜಿಟಲ್, ಒಟಿಟಿಗೆ ಚಿತ್ರ ಮಾರಬೇಕು ಎಂದರೆ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಲೇಬೇಕು. ಈ ರೀತಿ ಪರಿಸ್ಥಿತಿಯಲ್ಲಿ ಸಿನಿಮಾ ಚೆನ್ನಾಗಿರಬೇಕು. 'ಎಕ್ಕ', 'ಜೂನಿಯರ್'ಗೆ ಜನ ತುಂಬುತ್ತಿದ್ದಾರೆ. ಬಹಳ ಖುಷಿಯಾಗುತ್ತಿದೆ. ಹೊಸಬರಿಗೆ ಜನ ಬರುತ್ತಿದ್ದಾರೆ ಎಂಬುದು ಸಂತಸದ ವಿಷಯ. 'ಮಾದೇವ'ಗೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಜನ ವಾಪಾಸ್ ಚಿತ್ರಮಂದಿರಕ್ಕೆ ಬರುತ್ತಿದ್ದಾರೆ. ಟಿಕೆಟ್ ದರ ಕೂಡ ಕಡಿಮೆ ಆಗುತ್ತಿದೆ. ಹೀಗಾಗಿ ಮತ್ತೆ ಭರವಸೆ ಮೂಡಿದೆ. ಚಿತ್ರಕ್ಕೆ ಜನ ಬರದಿರಲು ಬಹಳಷ್ಟು ಕಾರಣಗಳಿವೆ. ಸಿನಿಮಾಗಳು ಒಂದೇ ಕಾರಣದಿಂದ ಸೋಲುತ್ತಿವೆ ಎಂದರೆ ಅದಕ್ಕೆ ಪರಿಹಾರ ಹುಡುಕಬಹುದು. ಆದರೆ ಸಾಕಷ್ಟು ಕಾರಣಗಳಿರುವಾಗ ನಮಗೆ ಯಾಕೆ ಚಿತ್ರ ಯಶಸ್ವಿಯಾಗಿಲ್ಲ ಎಂದು ತಿಳಿಯುವುದು ಕಷ್ಟ. ಒಳ್ಳೆ ಸಿನಿಮಾಗಳನ್ನು ಜನ ಕೈಬಿಟ್ಟಿಲ್ಲ. ಪ್ರಚಾರ ಕೂಡ ಮುಖ್ಯ. ನಮ್ಮ ಸಿನಿಮಾವನ್ನು ಉತ್ತಮ ರೀತಿಯಲ್ಲಿ ಪ್ರಚಾರ ಮಾಡುತ್ತೇವೆ. ಚಿತ್ರರಂಗದವರೂ ನಮ್ಮ ಜತೆಗೆ ನಿಲ್ಲುತ್ತಾರೆ ಎಂಬ ವಿಶ್ವಾಸವಿದೆ' ಎಂದು ಅವರು ಹೇಳುತ್ತಾರೆ.

'ಈ ಚಿತ್ರದ ಬಳಿಕ 'ವೈರಂ' ಬಿಡುಗಡೆಯಾಗುತ್ತಿದೆ. 'ಮುತ್ತಣ್ಣ' ತಂಡದ ಜತೆಯೇ ಇನ್ನೊಂದು ಚಿತ್ರವನ್ನು ಈಗಾಗಲೇ ಘೋಷಿಸಿದ್ದೇವೆ. ಸದ್ಯದಲ್ಲಿಯೇ ಈ ಚಿತ್ರವೂ ಸೆಟ್ಟೇರಲಿದೆ. ಕನ್ನಡ ಮತ್ತು ತೆಲುಗು ದ್ವಿಭಾಷಾ ಸಿನಿಮಾವೊಂದರಲ್ಲಿ ನಟಿಸುತ್ತಿದ್ದೇನೆ. ಹತ್ತು ದಿನಗಳ ಚಿತ್ರೀಕರಣ ಬಾಕಿಯಿದೆ. ಈ ಎಲ್ಲ ಸಿನಿಮಾಗಳು ತೆರೆಗೆ ಬಂದ ಬಳಿಕ ಇನ್ನಷ್ಟು ಅವಕಾಶಗಳು ಸಿಗಲಿವೆ ಎಂಬ ನಂಬಿಕೆ ಇದೆ' ಎಂದು ಅವರು ತಮ್ಮ ಮುಂದಿನ ಯೋಜನೆಗಳ ಕುರಿತು ವಿವರಿಸಿದರು.

ಅವಕಾಶ ಸಿಗುತ್ತಿಲ್ಲ

ಉತ್ತಮ ಚಿತ್ರಗಳನ್ನು ನೀಡಿದರೂ ತಮಗೆ ಕನ್ನಡದಲ್ಲಿ ಹೆಚ್ಚು ಅವಕಾಶ ಸಿಗುತ್ತಿಲ್ಲ ಎಂದು ಚಿತ್ರದ ನಾಯಕಿ ಖುಷಿ ರವಿ ಬೇಸರ ವ್ಯಕ್ತಪಡಿಸಿದ್ದಾರೆ. 'ದಿಯಾ' ಬಹಳ ಒಳ್ಳೆ ಹೆಸರು ತಂದುಕೊಟ್ಟಿತ್ತು. ಇತ್ತೀಚೆಗೆ ಬಿಡುಗಡೆಯಾದ 'ಅಯ್ಯನ ಮನೆ' ವೆಬ್ ಸರಣಿಗೆ ಕೂಡ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಆದಾಗ್ಯೂ ನಮ್ಮಲ್ಲಿ ಹೆಚ್ಚು ಅವಕಾಶಗಳಿಲ್ಲ. ಯಾಕೆ ಎಂದು ಬಹಳ ಯೋಚಿಸುತ್ತಿರುವೆ. ನನಗೆ ಅಂತಲ್ಲ ಬಹಳಷ್ಟು ಉತ್ತಮ ನಟರಿಗೆ ಈ ಅನುಭವ ಆಗುತ್ತಿದೆ. ಮೊದಲು ಒಂದಷ್ಟು ಕಥೆ ಬರುತ್ತಿತ್ತು. ಆದರೆ ಅವು ನನಗೆ ಇಷ್ಟವಾಗುತ್ತಿರಲಿಲ್ಲ. ಈಗೀಗ ಚಿತ್ರತಂಡಗಳು ಕಥೆ ತೆಗೆದುಕೊಂಡು ನನ್ನ ಬಳಿ ಬರುವುದು ಕಡಿಮೆಯಾಗಿದೆ. ಏಳು ಸಿನಿಮಾಗಳನ್ನು ಮಾಡಿದ್ದೇನೆ. ಬೇರೆ ಭಾಷೆಗಳಲ್ಲಿ ನಟಿಸುತ್ತಿರುವೆ. ಆದರೆ ಕನ್ನಡದ ಒಂದೇ ಒಂದು ಸಿನಿಮಾ ಕೂಡ ಕೈಯ್ಯಲ್ಲಿ ಇಲ್ಲ ಎಂಬುದು ಬೇಸರದ ಸಂಗತಿ' ಎನ್ನುತ್ತಾರೆ ಖುಷಿ.

'ದಿ ಗರ್ಲ್‌ಫ್ರೆಂಡ್'ನ ಹಾಡು

ರಶ್ಮಿಕಾ ಮಂದಣ್ಣ ಮತ್ತು ನಟ ದೀಕ್ಷಿತ್ ಶೆಟ್ಟಿ ಜತೆಯಾಗಿ ನಟಿಸಿರುವ 'ದಿ ಗರ್ಲ್‌ಫ್ರೆಂಡ್' ಚಿತ್ರದ 'ಸ್ವರವೇ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಾಹುಲ್ ರವೀಂದ್ರನ್ ನಿರ್ದೇಶನದ ತೆಲುಗು ಚಿತ್ರವಿದು. ತಮಿಳು, ಹಿಂದಿ, ಕನ್ನಡ ಮತ್ತು ಮಲಯಾಳ ಭಾಷೆಗಳಲ್ಲಿಯೂ ಚಿತ್ರ ತೆರೆಗೆ ಬರಲಿದೆ. ಗೀತಾ ಆರ್ಟ್ಸ್ ಮತ್ತು ಧೀರಜ್ ಮೊಗಿಲಿನೇನಿ ಎಂಟರ್‌ಟೈನ್‌ಮೆಂಟ್ ಜಂಟಿಯಾಗಿ ನಿರ್ಮಿಸುತ್ತಿದ್ದು, ಖ್ಯಾತ ನಿರ್ಮಾಪಕ ಅಲ್ಲು ಅರವಿಂದ್ ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ.

ರಶ್ಮಿಕಾ ಸದ್ಯ ತೆಲುಗು, ಬಾಲಿವುಡ್‌ನಲ್ಲಿ ಬೇಡಿಕೆಯ ನಟಿ. 'ಛಾವಾ' ಮತ್ತು 'ಕುಬೇರ' ಚಿತ್ರಗಳ ಯಶಸ್ಸಿನ ನಂತರ ಅವರು ಕನ್ನಡದ ನಟನೊಬ್ಬನ ಜತೆ ತೆರೆ ಹಂಚಿಕೊಂಡಿರುವುದು ವಿಶೇಷವಾಗಿದೆ. 'ದಸರಾ' ಚಿತ್ರದ ಮೂಲಕ ತೆಲುಗಿನಲ್ಲಿ ಜನಪ್ರಿಯತೆ ಗಳಿಸಿರುವ ದೀಕ್ಷಿತ್ ಕೂಡ ಕನ್ನಡದ ಜತೆಗೆ ತೆಲುಗಿನಲ್ಲಿಯೂ ಹೆಚ್ಚು ಅವಕಾಶಗಳನ್ನು ಪಡೆಯುತ್ತಿದ್ದಾರೆ.

ಹೇಶಮ್ ಅಬ್ದುಲ್ ವಹಾಬ್ ಈ ಹಾಡಿಗೆ ಸಂಗೀತ ಸಂಯೋಜಿಸಿರುವುದರ ಜತೆಗೆ ಧ್ವನಿಯಾಗಿದ್ದಾರೆ. ಕನ್ನಡದಲ್ಲಿ ಈ ಹಾಡಿಗೆ ನಾಗಾರ್ಜುನ್ ಶರ್ಮಾ ಸಾಹಿತ್ಯವಿದೆ. ರಶ್ಮಿಕಾ ಮಂದಣ್ಣ ಮತ್ತು ದೀಕ್ಷಿತ್ ಶೆಟ್ಟಿ ಬಾಂಧವ್ಯದ ದೃಶ್ಯಗಳಿಂದಲೇ ಕೂಡಿರುವ ಈ ಹಾಡು ಅವರಿಬ್ಬರ ಪ್ರೇಮ ಪಯಣದ ಕಥೆ ಹೇಳುತ್ತಿದೆ.

ಕೃಷ್ಣನ್ ವಸಂತ್ ಛಾಯಾಚಿತ್ರಗ್ರಹಣ, ಹೇಶಮ್ ಅಬ್ದುಲ್ ವಹಾಬ್ ಸಂಗೀತ ಚಿತ್ರಕ್ಕಿದೆ.

'ಕಮಲ್ ಶ್ರೀದೇವಿ' ಸುತ್ತಾಟ

ಸಚಿನ್ ಚಲುವರಾಯ ಸ್ವಾಮಿ, ಸಂಗೀತಾ ಭಟ್ ಜೋಡಿಯಾಗಿ ನಟಿಸುತ್ತಿರುವ 'ಕಮಲ್ ಶ್ರೀದೇವಿ' ಚಿತ್ರ ಚಿತ್ರೀಕರಣ ಮುಗಿಸಿ ತೆರೆಗೆ ಬರಲು ಸಿದ್ಧವಾಗುತ್ತಿದೆ. ಇದರ ನಡುವೆ ಚಿತ್ರತಂಡ ಭಿನ್ನ ಬಗೆಯ ಪ್ರಚಾರಕ್ಕೆ ಚಾಲನೆ ನೀಡಿದೆ. ನಾಯಕ, ನಾಯಕಿ ಹಾಗೂ ನಟಿ ಅಕ್ಷಿತಾ ಬೋಪಯ್ಯ ಸಾರ್ವಜನಿಕ ಸ್ಥಳಗಳಲ್ಲಿ ಸುತ್ತಾಡಿ ಜನಸಾಮಾನ್ಯರ ಜತೆ ಫೋಟೊಶೂಟ್ ನಡೆಸುವ ಮೂಲಕ ಚಿತ್ರದ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ.

'ಕಮಲ್ ಶ್ರೀದೇವಿ' ಚಿತ್ರದಲ್ಲಿ ನಾನೇನು? ನನ್ನ ಪಾತ್ರವೇನು? ಅನ್ನೋದಕ್ಕೆ ಈ ಪೋಟೊಶೂಟ್ ಒಂದು ಸುಳಿವು. ಇದು ನಮ್ಮ ಚಿತ್ರದ ಕ್ರಿಯೇಟಿವ್ ಹೆಡ್ ರಾಜವರ್ಧನ್ ಅವರ ಆಲೋಚನೆ. ಈ ಪ್ರಚಾರಕ್ಕೂ ಚಿತ್ರದ ಕಥೆಗೂ ಸಂಬಂಧವಿದೆ. ಅದು ಚಿತ್ರ ನೋಡಿದಾಗ ತಿಳಿಯುತ್ತದೆ' ಎನ್ನುತ್ತಾರೆ ಸಂಗೀತಾ ಭಟ್.

ಈ ಚಿತ್ರವನ್ನು ವಿ.ಎ ಸುನೀಲ್ ಕುಮಾರ್ ನಿರ್ದೇಶಿಸುತ್ತಿದ್ದಾರೆ. ಕಿಶೋರ್,ರಮೇಶ್ ಇಂದಿರಾ ಸೇರಿದಂತೆ ಹಲವರು ಚಿತ್ರದಲ್ಲಿದ್ದಾರೆ. ಸ್ವರ್ಣಾಂಬಿಕ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಬಿ.ಕೆ.ಧನಲಕ್ಷ್ಮಿ ಚಿತ್ರ ನಿರ್ಮಾಣ ಮಾಡಿದ್ದು, ನಟ ರಾಜವರ್ಧನ್ ಸಹ ನಿರ್ಮಾಣದ ಜತೆಗೆ ಕ್ರಿಯೇಟಿವ್ ಹೆಡ್ ಆಗಿದ್ದಾರೆ. ಕೀರ್ತನ್ ಸಂಗೀತ, ನಾಗೇಶ್ ವಿ.ಆಚಾರ್ಯ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ ಮಠದ್ ಸಂಕಲನವಿದೆ.

ಚಿಟಿಕೆ ಸುದ್ದಿ

ರಾಜೀನಾಮೆ ಹಿಂಪಡೆದ ಶಾಸಕಿ

ಚಂಡೀಗಢ (ಪಿಟಿಐ): ವಿಧಾನಸಭೆಯ ಸದಸ್ಯತ್ವಕ್ಕೆ ಸ್ಥಾನಕ್ಕೆ ರಾಜೀನಾಮೆ ನೀಡಿ, ರಾಜಕೀಯದಿಂದ ದೂರ ಉಳಿಯುವುದಾಗಿ ಘೋಷಿಸಿದ್ದ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕಿ ಅನ್ಮೋಲ್ ಗಗನ್ ಮಾನ್ ಅವರು ತಮ್ಮ ನಿರ್ಧಾರವನ್ನು ಹಿಂಪಡೆದಿದ್ದಾರೆ.

ಪಂಜಾಬ್‌ನ ಎಎಪಿ ಘಟಕದ ಅಧ್ಯಕ್ಷರಾದ ಅಮನ್ ಅರೋರ ಅವರು ಅನ್ಮೋಲ್ ಅವರನ್ನು ಭೇಟಿಯಾಗಿ, ಪಕ್ಷ ಮತ್ತು ಕ್ಷೇತ್ರಕ್ಕಾಗಿ ತಮ್ಮ ಕೆಲಸವನ್ನು ಮುಂದುವರಿಸುವಂತೆ ಕೇಳಿಕೊಂಡರು. ಬಳಿಕ ತಮ್ಮ ಸ್ಥಾನದಲ್ಲಿ ಮುಂದುವರಿಯುವುದಾಗಿ ಅನ್ಮೋಲ್ ತಿಳಿಸಿದ್ದಾರೆ.

ಯುಪಿಎಸ್‌ಸಿ ಆಕಾಂಕ್ಷಿ ಆತ್ಮಹತ್ಯೆ

ನವದೆಹಲಿ (ಪಿಟಿಐ): ಸೆಂಟ್ರಲ್ ದೆಹಲಿಯ ಹಳೆ ರಾಜೇಂದರ್ ನಗರ ವ್ಯಾಪ್ತಿಯಲ್ಲಿ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷಾ ಆಕಾಂಕ್ಷಿಯೊಬ್ಬರು ಫ್ಯಾನಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜಮ್ಮುವಿನ ತರುಣ್ ಠಾಕೂರ್ (25) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ಇಲ್ಲಿ ಬಾಡಿಗೆ ಮನೆಯಲ್ಲಿದ್ದುಕೊಂಡು ಯುಪಿಎಸ್‌ಸಿ ಪರೀಕ್ಷೆಗಾಗಿ ಸಿದ್ಧತೆ ನಡೆಸಿದ್ದರು. 'ಸ್ಥಳದಲ್ಲಿ ಮರಣ ಪತ್ರ ಲಭಿಸಿದ್ದು, ನನ್ನ ಸಾವಿಗೆ ನಾನೇ ಕಾರಣ' ಎಂದು ಬರೆದಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಕೆಐನ ಮೂವರ ಬಂಧನ

ಚಂಡೀಗಢ (ಪಿಟಿಐ): ಪಂಜಾಬ್‌ನ ಪಟಿಯಾಲ ಮತ್ತು ಹರಿಯಾಣದಲ್ಲಿ ಪೊಲೀಸ್ ಠಾಣೆಗಳ ಮೇಲೆ ನಡೆದ ಗ್ರೆನೇಡ್ ದಾಳಿಗಳಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಭಯೋತ್ಪಾದಕ ಸಂಘಟನೆಯ ಮೂವರನ್ನು ಬಂಧಿಸಲಾಗಿದೆ ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

ಗಗನಸಖಿ ಮೇಲೆ ಅತ್ಯಾಚಾರ: ಸಹೋದ್ಯೋಗಿ ಸೆರೆ

ಠಾಣೆ (ಪಿಟಿಐ): ಗಗನಸಖಿ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ ಸಂತ್ರಸ್ತೆಯ ಸಹೋದ್ಯೋಗಿಯನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಜೂನ್ 29ರಂದು ಲಂಡನ್ ಪ್ರಯಾಣದಿಂದ ಮರಳಿದ ನಂತರ, ಗಗನಸಖಿಯನ್ನು (23) ಸಹೋದ್ಯೋಗಿ (25) ಬಲವಂತವಾಗಿ ಮಹಾರಾಷ್ಟ್ರದ ಠಾಣೆಯಲ್ಲಿರುವ ತನ್ನ ನಿವಾಸಕ್ಕೆ ಕರೆದುಕೊಂಡು ಹೋಗಿದ್ದ. ಅಲ್ಲಿ ಅತ್ಯಾಚಾರ ಎಸಗಿದ್ದ. ಘಟನೆಗೆ ಸಂಬಂಧಿಸಿದಂತೆ ನವಗ್ರಹ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 64, 351(2), 352ರ ಅಡಿ ಪ್ರಕರಣ ದಾಖಲಾಗಿದೆ.

'ರಾಜ್ಯ ಸ್ಥಾನಮಾನ ನೀಡಲೇಬೇಕು'

ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಸಂದರ್ಶನ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ನೀಡಲೇಬೇಕು. ಇದು ನಮ್ಮ ಹಕ್ಕು. ಇದನ್ನು ಪಡೆದುಕೊಳ್ಳಲು ಕಾನೂನು ಹೋರಾಟ ಸೇರಿ ಇದಕ್ಕೆ ಬೇಕಿರುವ ಎಲ್ಲ ಇತರೆ ದಾರಿಗಳ ಬಗ್ಗೆಯೂ ಚರ್ಚಿಸಲಾಗುತ್ತಿದೆ' ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದರು.

ಪಿಟಿಐ ಸಂದರ್ಶನದಲ್ಲಿ ಮಾತನಾಡಿದ ಅವರು 'ರಾಜ್ಯ ಸ್ಥಾನಮಾನ ನೀಡುತ್ತೇವೆ ಎಂದು ಸಂಸತ್ತಿನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ಹಲವು ಬಾರಿ ಭರವಸೆ ನೀಡಲಾಗಿದೆ. ಆದರೂ ಈವರೆಗೂ ಈ ಕೆಲಸ ಆಗಿಲ್ಲ. ನಾವು ಕೆಲಸಕ್ಕೆ ಬಾರದ್ದನ್ನು ಕೇಳುತ್ತಿಲ್ಲ. ರಾಜ್ಯ ಸ್ಥಾನಮಾನ ನಮ್ಮ ಹಕ್ಕು. ಇದನ್ನು ನೀಡುವುದಾಗಿ ಇಲ್ಲಿನ ಜನರಿಗೂ ಭರವಸೆ ನೀಡಲಾಗಿತ್ತು' ಎಂದರು.

'ಪ್ರಧಾನಿ, ಗೃಹ ಸಚಿವ ಮತ್ತು ಇತರರೊಂದಿಗೆ ನಾನು ನಡೆಸಿದ ಮಾತುಕತೆಯು ಖಾಸಗಿಯಾದದು. ಅದು ಬಹಿರಂಗಪಡಿಸುವಂಥದ್ದಲ್ಲ. ಆದರೆ, ರಾಜ್ಯ ಸ್ಥಾನಮಾನ ನೀಡುವ ಸಂಬಂಧ ಹಲವು ಬಾರಿ ಹಲವು ಸಂದರ್ಭಗಳಲ್ಲಿ ಒತ್ತಾಯ ಮಾಡಲಾಗಿದೆ. ಈ ಬಗ್ಗೆ ಇನ್ನು ಮುಂದೆಯೂ ಒತ್ತಡ ಹೇರುತ್ತೇವೆ' ಎಂದರು.

ಹೈಬ್ರಿಡ್ ಮಾದರಿ ಒಪ್ಪಲ್ಲ: ರಾಜ್ಯ ಸ್ಥಾನಮಾನ ದೊರೆತ ಬಳಿಕವೂ ಜಮ್ಮು ಮತ್ತು ಕಾಶ್ಮೀರದ ಕಾನೂನು ಮತ್ತು ಸುವ್ಯವಸ್ಥೆಯು ಕೇಂದ್ರ ಸರ್ಕಾರದ ಬಳಿಯೇ ಇರುವಂಥ 'ಹೈಬ್ರಿಡ್ ಮಾದರಿ' ಅನುಸರಿಸುವ ಕುರಿತು ಸಲಹೆ ನೀಡಲಾಗುತ್ತಿದೆ ಎಂಬ ವರದಿಗಳನ್ನು ಒಮರ್ ತಳ್ಳಿಹಾಕಿದರು.

'ದೇಶದಲ್ಲಿ ಎಲ್ಲಿಯೂ ಇಂಥ ಮಾದರಿ ಇಲ್ಲ. ಜನರು ಯಾಕೆ ಈ ರೀತಿ ಊಹಾಪೋಹ ಹರಡುತ್ತಿದ್ದಾರೆ? ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆಯನ್ನೇ ನಡೆಸುವುದಿಲ್ಲ ಅಥವಾ ಇಲ್ಲಿ ಚುನಾವಣೆಯೇ ನಡೆಯಬಾರದು ಅಂತೆಲ್ಲಾ ಹೇಳಿದವರೇ ಹೈಬ್ರಿಡ್ ಮಾದರಿ ಜಾರಿಯಾಗಲಿದೆ ಎಂಬ ವದಂತಿ ಹರಡುತ್ತಿದ್ದಾರೆ' ಎಂದರು.

'ಕೈ' ಕಾರ್ಯಕರ್ತರು ವಶಕ್ಕೆ: ರಾಜ್ಯ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಭಾನುವಾರ ಮೆರವಣಿಗೆ ನಡೆಸಿದರು. ಈ ವೇಳೆ ಪೊಲೀಸರು ಕಾರ್ಯಕರ್ತರನ್ನು ವಶಕ್ಕೆ ಪಡೆದರು. ಕಾಂಗ್ರೆಸ್ ಮೆರವಣಿಗೆಗೆ ಎರಡನೇ ಬಾರಿಗೆ ಪೊಲೀಸರು ತಡೆ ಒಡ್ಡಿದರು.

ಒಮರ್ ಹೇಳಿದ್ದು...

- 2021ರಿಂದ ಜಮ್ಮು ಮತ್ತು ಕಾಶ್ಮೀರದ ನಾಲ್ಕು ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ನಡೆದಿಲ್ಲ. ಜೊತೆಗೆ ಇಲ್ಲಿನ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಬೇಕು. ಚುನಾವಣಾ ಆಯೋಗವು ಯಾಕಾಗಿ ಚುನಾವಣೆ ನಡೆಸುವುದನ್ನು ವಿಳಂಬ ಮಾಡುತ್ತಿದೆ?
- ನಿಧಾನವಾಗಿ ಪ್ರವಾಸೋದ್ಯಮವು ಮರುಹುಟ್ಟು ಪಡೆದುಕೊಳ್ಳುತ್ತಿದೆ. ಪ್ರವಾಸೋದ್ಯಮವೇ ನಮ್ಮ ಆರ್ಥಿಕತೆ. ಅಮರನಾಥ ಯಾತ್ರೆಯ ಬಳಿಕ ಪ್ರವಾಸೋದ್ಯಮವು ಪೂರ್ಣ ಪ್ರಮಾಣದಲ್ಲಿ ಆರಂಭವಾಗಲಿದೆ

'ಕೇಂದ್ರಾಡಳಿತ ಪ್ರದೇಶವಾದ ಬಳಿಕವೇ ಉಗ್ರರ ದಾಳಿ ಹೆಚ್ಚಳ'



'ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶ ಮಾಡಿದ ಬಳಿಕವೇ ಭಯೋತ್ಪಾದಕ ದಾಳಿಗಳು ಹೆಚ್ಚಾಗಿವೆ. ಇಲ್ಲಿ ಚುನಾಯಿತ ಸರ್ಕಾರ ಇದ್ದ ಕಾಲದಲ್ಲಿ ಇಷ್ಟೊಂದು ದಾಳಿಗಳು ನಡೆದಿರಲಿಲ್ಲ' ಎಂದು ಒಮರ್ ಪ್ರತಿಪಾದಿಸಿದರು.

ಭದ್ರತೆ ವಿಚಾರದಲ್ಲಿ ಚುನಾಯಿತ ಸರ್ಕಾರವು ಅಸಮರ್ಥ ಎನ್ನುವ ವಾದವನ್ನು ತಳ್ಳಿಹಾಕಿದ ಅವರು, 'ನಾವು ಈ ಹಿಂದೆಯೂ ಇಂಥ ವಿಚಾರಗಳಲ್ಲಿ ಉತ್ತಮ ಕೆಲಸವನ್ನೇ ಮಾಡಿದ್ದೇವೆ. ಮುಂದೆಯೂ ಮಾಡುತ್ತೇವೆ. ಕೇಂದ್ರಾಡಳಿತ ಪ್ರದೇಶ ಎನ್ನುವುದು ಅಷ್ಟೊಂದು 'ಉತ್ತಮ' ವ್ಯವಸ್ಥೆಯಾಗಿದ್ದರೆ, ಸಣ್ಣ ಭೂಭಾಗದ ಪ್ರದೇಶವನ್ನು ಮಾತ್ರವೇ ಯಾಕೆ ಇದಕ್ಕಾಗಿ ಆಯ್ಕೆ ಮಾಡಲಾಗುತ್ತದೆ' ಎಂದು ಪ್ರಶ್ನಿಸಿದರು.

'ಈ ವ್ಯವಸ್ಥೆಯು ಅಷ್ಟೊಂದು ಉತ್ತಮವಾದರೆ, ಉತ್ತರ ಪ್ರದೇಶದಲ್ಲಿ ಜಾರಿ ಮಾಡಲಿ. ಮಹಾರಾಷ್ಟ್ರ, ಛತ್ತೀಸಗಢ, ಮಧ್ಯ ಪ್ರದೇಶ, ಈಶಾನ್ಯ ರಾಜ್ಯಗಳನ್ನೂ ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಿ' ಎಂದು ಆಗ್ರಹಿಸಿದರು.

'ಪಹಲ್ಗಾಮ್ ದಾಳಿ: ಹೊಣೆಗಾರಿಕೆ ನಿಗದಿ ಮಾಡಿ'

'ಪಹಲ್ಗಾಮ್ ದಾಳಿಗೆ ತಾನೇ ಜವಾಬ್ದಾರ ಎಂದು ಲೆಫ್ಟಿನೆಂಟ್ ಗವರ್ನರ್ ಹೇಳಿರುವುದು ಸ್ವಾಗತಾರ್ಹ. ಭದ್ರತೆ ಹಾಗೂ ಗುಪ್ತಚರದ ವೈಫಲ್ಯದ ಕಾರಣದಿಂದಲೇ ಈ ದಾಳಿ ನಡೆದಿದೆ ಎಂದು ನಮಗೆಲ್ಲಾ ತಿಳಿದಿದೆ. ಈಗ ನಮ್ಮ ಮುಂದಿನ ಹೆಜ್ಜೆ ಹೊಣೆಗಾರರು ಯಾರು ಎಂದು ನಿಗದಿ ಮಾಡುವುದು' ಎಂದು ಒಮರ್ ಹೇಳಿದರು.

ಭಯೋತ್ಪಾದನೆ ನಿಗ್ರಹಿಸಬೇಕು ಎಂದಾದರೆ, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ ರಾಜ್ಯ ಸ್ಥಾನಮಾನವನ್ನು ರದ್ದು ಮಾಡಲೇಬೇಕು ಎಂಬ ವಾದವನ್ನು ಒಮರ್ ತಿರಸ್ಕರಿಸಿದರು. ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯನ್ನು ಪ್ರಸ್ತಾಪಿಸಿದರು.

'ಸಂವಿಧಾನದ 370ನೇ ವಿಧಿ ಅಡಿಯಲ್ಲಿ ನಮಗೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಲು ಇಲ್ಲಿ ನಡೆಯುವ ಭಯೋತ್ಪಾದನಾ ಚಟುವಟಿಕೆಗಳೇ ಕಾರಣ ಎಂಬ ಸಂಕಥನವನ್ನು ಸೃಷ್ಟಿಸಲು ಬಿಜೆಪಿ ಬಹಳ ಶ್ರಮವಹಿಸಿತು. ಇದು ಸುಳ್ಳು ಎಂದು ನಮಗೆ ತಿಳಿದಿದೆ. ಇಲ್ಲಿ ನಡೆದ ಉಗ್ರ ಚಟುವಟಿಕೆಗಳಿಗೆ ಪಾಕಿಸ್ತಾನದ ದುರುದ್ದೇಶವೇ ಕಾರಣ. ರಾಜ್ಯ ಸ್ಥಾನಮಾನ ರದ್ದು ಮಾಡಿದ್ದರಿಂದ ಇಲ್ಲಿನ ಭಯೋತ್ಪಾದನಾ ಚಟುವಟಿಕೆ ನಿಂತಿಲ್ಲ' ಎಂದರು.

ಬ್ರಿಟನ್, ಮಾಲ್ದೀವ್ಸ್‌ಗೆ ಮೋದಿ

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರು ಬುಧವಾರದಿಂದ ನಾಲ್ಕು ದಿನ ಬ್ರಿಟನ್ ಹಾಗೂ ಮಾಲ್ದೀವ್ಸ್ ಪ್ರವಾಸ ಕೈಗೊಳ್ಳಲಿದ್ದಾರೆ.

ವ್ಯಾಪಾರ, ಹೂಡಿಕೆ ಮತ್ತು ರಕ್ಷಣಾ ವಿಷಯಗಳ ಕುರಿತು ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಈ ದೇಶಗಳಿಗೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಭಾನುವಾರ ತಿಳಿಸಿದೆ.

ಬುಧವಾರ ಪ್ರವಾಸ ಆರಂಭಿಸಲಿರುವ ಮೋದಿ, ಮೊದಲು ಲಂಡನ್‌ಗೆ ತೆರಳಲಿದ್ದು, ಅಲ್ಲಿ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವುದರ ಜೊತೆಗೆ, ಭಾರತ–ಬ್ರಿಟನ್ ದ್ವಿಪಕ್ಷೀಯ ಸಂಬಂಧಗಳ ಕುರಿತು ಚರ್ಚೆ ನಡೆಸಲಿದ್ದಾರೆ. ವ್ಯಾಪಾರ, ಆರ್ಥಿಕತೆ, ತಂತ್ರಜ್ಞಾನ, ಸಂಶೋಧನೆ, ಭದ್ರತೆ, ಹವಾಮಾನ, ಆರೋಗ್ಯ ಹಾಗೂ ಶಿಕ್ಷಣ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಪರಿಶೀಲನೆ ನಡೆಸಲಿದ್ದಾರೆ.

ಬ್ರಿಟನ್ನಿಗೆ ಮೋದಿಯವರ ನಾಲ್ಕನೇ ಭೇಟಿ ಇದಾಗಲಿದೆ. ಈ ವೇಳೆ ಅವರು ಕಿಂಗ್ ಚಾರ್ಲ್ಸ್ –3 ಅವರನ್ನೂ ಭೇಟಿಯಾಗುವ ನಿರೀಕ್ಷೆ ಇದೆ.

ಜು.26ರಂದು ಲಂಡನ್‌ನಿಂದ ಮಾಲ್ದೀವ್ಸ್‌ಗೆ ತೆರಳಲಿರುವ ಮೋದಿ, ಆ ದೇಶದ 60ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗಿಯಾಗಲಿದ್ದಾರೆ. ಮಾಲ್ದೀವ್ಸ್‌ಗೆ ಮೋದಿಯವರ ಮೂರನೇ ಭೇಟಿ ಇದಾಗಿದ್ದು, ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಮೋದಿ ಅವರಿಗೆ ಆಹ್ವಾನ ನೀಡಿದ್ದರು.

ಸಮಗ್ರ ಆರ್ಥಿಕತೆ ಹಾಗೂ ಕಡಲ ಭದ್ರತಾ ಪಾಲುದಾರಿಕೆಯಲ್ಲಿ ಉಭಯ ದೇಶಗಳ ದೃಷ್ಟಿಕೋನದ ಕುರಿತು ಮೋದಿ ಹಾಗೂ ಮುಯಿಜು ಮಾತುಕತೆ ನಡೆಸಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಆಂಧ್ರಪ್ರದೇಶ: ಅಬಕಾರಿ ಹಗರಣ ಆರೋಪಪಟ್ಟಿಯಲ್ಲಿ ಜಗನ್ ಹೆಸರು

ಅಮರಾವತಿ (ಪಿಟಿಐ): ವೈಎಸ್‌ಆರ್‌ಸಿಪಿ ಸರ್ಕಾರದ ಅವಧಿಯಲ್ಲಿ ನಡೆದ ₹3,500 ಕೋಟಿ ಮೊತ್ತದ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶ ಪೊಲೀಸರು ಶನಿವಾರ 305 ಪುಟಗಳ ಆರೋಪಪಟ್ಟಿ ಸಲ್ಲಿಸಿದ್ದಾರೆ.

ರಾಜಶೇಖರ ರೆಡ್ಡಿಯೇ ಈ ಪ್ರಕರಣದ ಸೂತ್ರಧಾರ ಮತ್ತು ಸಹ ಸಂಚುಕೋರ ಎಂದು ಆರೋಪಿಸಲಾಗಿದೆ. ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರೂ ಈ ಹಗರಣದ ಫಲಾನುಭವಿ ಆಗಿದ್ದು, ಪ್ರತಿ ತಿಂಗಳು ಸರಾಸರಿ ₹50 ಕೋಟಿಯಿಂದ ₹60 ಕೊಟಿಯಷ್ಟು ಲಂಚ ಪಡೆದಿದ್ದಾರೆ ಎಂದು ದೋಷಾರೋಪಣ ಪಟ್ಟಿಯಲ್ಲಿ ಆರೋಪಿಸಲಾಗಿದೆ. ಆದರೆ, ಅವರನ್ನು ಆರೋಪಿ ಎಂದು ಹೆಸರಿಸಿಲ್ಲ.

ಮೊದಲ ಬಾರಿ 10ನೇ ತರಗತಿ ಉತ್ತೀರ್ಣರಾದ ದೇಶದ ಪ್ರಾಚೀನ ಜನಾಂಗದ ಮಕ್ಕಳು

'ಒಂಗೆ' ಬುಡಕಟ್ಟಿನ 'ನವ'ತಾರೆಗಳು

ಪೋರ್ಟ್‌ಬ್ಲೇರ್ (ಪಿಟಿಐ): ವಿನಾಶದ ಅಂಚಿನಲ್ಲಿರುವ, ಭಾರತದ ಪ್ರಾಚೀನ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿರುವ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ 'ಒಂಗೆ' ಬುಡಕಟ್ಟಿನ 9 ಮಂದಿ ಮಕ್ಕಳು ಇದೇ ಮೊದಲ ಬಾರಿಗೆ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

'ಒಂಗೆ' ಬುಡಕಟ್ಟಿನ ಒಟ್ಟು ಜನಸಂಖ್ಯೆಯೇ 136ರ ಆಸುಪಾಸಿನಲ್ಲಿದೆ. ಈ ಸಮುದಾಯದಲ್ಲಿ ಪ್ರೌಢಶಾಲಾ ಹಂತದವರೆಗಿನ ಶಿಕ್ಷಣ ಪೂರೈಸಿರುವ ಮೊದಲ ತಲೆಮಾರು ಎಂಬ ಹೆಗ್ಗಳಿಕೆ ಈ 9 ಮಕ್ಕಳದ್ದು. ಇವರಲ್ಲಿ ಐವರು ಬಾಲಕಿಯರೂ ಇದ್ದಾರೆ ಎನ್ನುವುದು ವಿಶೇಷ.

ಅಲಗೆ, ಕೊಕೊಯಿ, ಮುಕೇಶ್, ಪಾಲಿತ್, ಸೋನಿಯಾ, ಬೋಲಿಂಗ್, ಗಿಟೆ, ಒಟಿಕಾಲ್ಯೆ ಮತ್ತು ಸುಮಾ ಎಂಬ ವಿದ್ಯಾರ್ಥಿಗಳು ಈಗ ಒಂಗೆ ಸಮುದಾಯದ ನವ ತಾರೆಗಳು. ಇವರೆಲ್ಲರೂ ಈಗಾಗಲೇ ಅಂಡಮಾನ್‌ನ ಡಗಾಂಗ್ ಕ್ರೀಕ್ ಪ್ರದೇಶದ ಆರ್.ಕೆ ಪುರದ ಪಿ.ಎಂ ಶ್ರೀ ಸರ್ಕಾರಿ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ 11ನೇ ತರಗತಿಗೆ ಪ್ರವೇಶ ಪಡೆದಿದ್ದಾರೆ.

'ಈ ಮಕ್ಕಳು ಬುದ್ಧಿವಂತರು ಮತ್ತು ಪರಿಶ್ರಮಿಗಳು. ಉನ್ನತ ಶಿಕ್ಷಣ ಪಡೆದು, ಉದ್ಯೋಗ ದಕ್ಕಿಸಿಕೊಳ್ಳುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರುವ ಅತೀವ ತುಡಿತವನ್ನು ಹೊಂದಿದ್ದಾರೆ' ಎನ್ನುತ್ತಾರೆ ಶಿಕ್ಷಕ ಪ್ರಕಾಶ್ ಟಿರ್ಕಿ.

> **ಅರಣ್ಯಾಧಿಕಾರಿಯಾಗಿ ನನ್ನ ನೆಲವನ್ನೂ, ವನವನ್ನೂ ರಕ್ಷಿಸುತ್ತೇನೆ. ಒತ್ತುವರಿ ತಡೆಯುತ್ತೇನೆ. ಕಾಡೇ ನಮ್ಮ ಉಸಿರು. ಅರಣ್ಯ ಸಂರಕ್ಷಣೆ ನನ್ನ ಕರ್ತವ್ಯವೆಂದೇ ಭಾವಿಸಿದ್ದೇನೆ**
> **ಅಲಗೆ,** ವಿದ್ಯಾರ್ಥಿನಿ

> **ಭವಿಷ್ಯದಲ್ಲಿ ಶಿಕ್ಷಕರಾಗಿ, ಬುಡಕಟ್ಟು ಸಬಲೀಕರಣ ಅಧಿಕಾರಿಗಳಾಗಿ 'ಒಂಗೆ' ಸಮುದಾಯದ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತೇವೆ**
> **ಒಟಿಕಾಲ್ಯೆ, ಮುಕೇಶ್,** ವಿದ್ಯಾರ್ಥಿಗಳು

ಪ್ರತ್ಯೇಕ ಕೊಠಡಿ ವ್ಯವಸ್ಥೆ

ಅಂಡಮಾನ್ ಆದಿಮ್ ಜನಹಿತ ವಿಕಾಸ್ ಸಮಿತಿಯ (ಎಎಜೆವಿಎಸ್) ಸಲಹೆಯಂತೆ, ಒಂಗೆ ಬುಡಕಟ್ಟು ಮಕ್ಕಳಿಗಾಗಿ ಶಾಲೆಯಲ್ಲಿ ಪ್ರತ್ಯೇಕ ತರಗತಿ ಕೋಣೆಯನ್ನು ನಿರ್ಮಿಸಲಾಗಿದೆ ಎಂದು ಪಿ.ಎಂ. ಶ್ರೀ ಜಿಎಸ್‌ಎಸ್ ಆರ್.ಕೆ. ಪುರ ಶಾಲೆಯ ಪ್ರಾಂಶುಪಾಲರು ಹೇಳಿದರು.

ಶಾಲೆಯ ಸಮೀಪವೇ ಈ ಮಕ್ಕಳಿಗಾಗಿ ಪ್ರತ್ಯೇಕ ವಸತಿ ನಿಲಯದ ವ್ಯವಸ್ಥೆಯನ್ನು ಶಿಕ್ಷಣ ಇಲಾಖೆ ಕಲ್ಪಿಸಿದೆ. ಮಕ್ಕಳಿಗೆ ಬೇಕಾಗುವ ಬಟ್ಟೆ, ಪಡಿತರ, ಕಲಿಕಾ ಸಾಮಗ್ರಿಗಳನ್ನು 'ಎಎಜೆವಿಎಸ್' ಪೂರೈಸಲಿದೆ.

'ಮಕ್ಕಳು ಸಾಂಪ್ರದಾಯಿಕ ಬುಡಕಟ್ಟು ಪರಿಸರದಿಂದ ಹೊರಬಂದು, ಶಾಲೆಯ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಅವರಲ್ಲಿ ಶಿಕ್ಷಣ ಪಡೆಯುವ ಅದಮ್ಯ ಬಯಕೆ ಇದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

> **ಇದೊಂದು ಐತಿಹಾಸಿಕ ಮೈಲಿಗಲ್ಲು. ಮಕ್ಕಳ ಸಾಧನೆಯ ಹಿಂದೆ ಲೆಫ್ಟಿನೆಂಟ್ ಗವರ್ನರ್ ಮತ್ತು ದ್ವೀಪಗಳ ಅಭಿವೃದ್ಧಿ ಸಮಿತಿಯ (ಐಡಿಎ) ಅಧ್ಯಕ್ಷ ಅಡ್ಮಿರಲ್ ಡಿ.ಕೆ.ಜೋಶಿ ಅವರ ದೂರದೃಷ್ಟಿಯೂ ಇದೆ**
> **ಸತ್ಯೇಂದ್ರ ಸಿಂಗ್ ದುರ್ಸಾವತ್,** ಅಂಡಮಾನ್ ಮತ್ತು ನಿಕೋಬಾರ್ ಬುಡಕಟ್ಟು ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ

ನಮೋ ಘಾಟ್ ಜಲಾವೃತ

ಪಿಟಿಐ ಚಿತ್ರ:

ಉತ್ತರಪ್ರದೇಶದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಗಂಗಾ ನದಿ ತುಂಬಿ ಹರಿಯುತ್ತಿದ್ದು, ವಾರಾಣಸಿಯ ನಮೋ ಘಾಟ್ ಭಾನುವಾರ ಜಲಾವೃತಗೊಂಡಿತ್ತು

100ಕ್ಕೂ ಹೆಚ್ಚು ಸಂಸದರಿಂದ ಸಹಿ: ರಿಜಿಜು

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಸಂಸತ್ತಿನಲ್ಲಿ ಮಂಡಿಸುವ ನೋಟಿಸ್‌ಗೆ 100ಕ್ಕೂ ಹೆಚ್ಚು ಸಂಸದರು ಸಹಿ ಹಾಕಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ಹೇಳಿದ್ದಾರೆ.

'ಸಹಿ ಸಂಗ್ರಹ ಪ್ರಕ್ರಿಯೆ ಮುಂದುವರಿದಿದ್ದು, ಈಗಾಗಲೇ 100ಕ್ಕೂ ಹೆಚ್ಚು ಸಂಸದರು ಸಹಿ ಹಾಕಿದ್ದಾರೆ' ಎಂದು ಸರ್ವಪಕ್ಷಗಳ ಸಭೆಯ ಬಳಿಕ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿ ಗಳನ್ನು ಪದಚ್ಯುತಗೊಳಿಸುವ ಅಧಿಕಾರ ಸಂಸತ್ತಿಗೆ ಇದೆ. ನ್ಯಾಯಮೂರ್ತಿಯೊಬ್ಬರ ಪದಚ್ಯುತಿ ನಿರ್ಣಯ ಮಂಡಿಸಲು ಲೋಕಸಭೆಯಲ್ಲಿ ಕನಿಷ್ಠ 100 ಮತ್ತು ರಾಜ್ಯಸಭೆಯಲ್ಲಿ 50 ಸದಸ್ಯರ ಬೆಂಬಲ ಬೇಕಿದೆ.

ಸೋಮವಾರ ಆರಂಭವಾಗಲಿರುವ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ನಿರ್ಣಯ ಮಂಡಿಸುವುದಾಗಿ ಸರ್ಕಾರ ಈಗಾಗಲೇ ಸ್ಪಷ್ಟಪಡಿಸಿದೆ. ನಿರ್ಣಯವನ್ನು ಲೋಕಸಭೆಯಲ್ಲಿ ಮಂಡಿಸುವ ಸಾಧ್ಯತೆಯಿದೆ.

ಇಂಗ್ಲೆಂಡ್‌ನಲ್ಲೇ ಡಬ್ಲ್ಯುಟಿಸಿ ಫೈನಲ್

ಮುಂದಿನ ಮೂರು ಡಬ್ಲ್ಯುಟಿಸಿ ಫೈನಲ್‌ಗಳಿಗೆ ಇ.ಸಿ.ಬಿ ಆತಿಥ್ಯ • ಐಸಿಸಿ ಸಭೆಯಲ್ಲಿ ನಿರ್ಣಯ

ಸಿಂಗಪುರ (ಪಿಟಿಐ): ಮುಂದಿನ ಮೂರು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯಗಳಿಗೆ ಇಂಗ್ಲೆಂಡ್ ಆತಿಥ್ಯ ವಹಿಸಲಿದೆ.

ಭಾನುವಾರ ಮುಕ್ತಾಯವಾದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ವಾರ್ಷಿಕ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. 2027, 2029 ಮತ್ತು 2031ರಲ್ಲಿ ಫೈನಲ್‌ಗಳು ನಡೆಯಲಿವೆ.

ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಇಲ್ಲಿಯವರೆಗೆ ನಡೆದ ಮೂರು ಡಬ್ಲ್ಯುಟಿಸಿ ಫೈನಲ್‌ಗಳ ಆತಿಥ್ಯವನ್ನು ವಹಿಸಿತ್ತು. 2021ರಲ್ಲಿ ಸೌತಾಂಪ್ಟನ್ (ಭಾರತ–ನ್ಯೂಜಿಲೆಂಡ್), 2023ರಲ್ಲಿ ಓವಲ್, ಲಂಡನ್ (ಭಾರತ –ಆಸ್ಟ್ರೇಲಿಯಾ) ಮತ್ತು 2025ರಲ್ಲಿ ಲಾರ್ಡ್ಸ್ (ದಕ್ಷಿಣ ಆಫ್ರಿಕಾ–ಆಸ್ಟ್ರೇಲಿಯಾ) ಕ್ರೀಡಾಂಗಣದಲ್ಲಿ ಫೈನಲ್‌ಗಳು ನಡೆದಿದ್ದವು.

‘ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಗೆ ಮುಂದಿನ ಮೂರು ಡಬ್ಲ್ಯುಟಿಸಿ ಫೈನಲ್‌ಗಳ ಆತಿಥ್ಯದ ಹಕ್ಕುಗಳನ್ನು ನೀಡಲಾಗಿದೆ. ಮೊದಲ ಮೂರು ಆವೃತ್ತಿಗಳ ಫೈನಲ್ ಗಳನ್ನು ಇಂಗ್ಲೆಂಡ್ ಯಶಸ್ವಿಯಾಗಿ ಆಯೋಜಿಸಿದೆ’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಡಬ್ಲ್ಯುಟಿಸಿ ಫೈನಲ್‌ಗಳು ಹೆಚ್ಚಾಗಿ ಜೂನ್ ತಿಂಗಳಲ್ಲಿಯೇ ಆಯೋಜನೆಗೊಳ್ಳುತ್ತವೆ. ಆ ಸಂದರ್ಭದಲ್ಲಿ ಇಂಗ್ಲೆಂಡ್‌ನಲ್ಲಿ ಮಾತ್ರ ಉತ್ತಮ ಹವಾಮಾನ ಇರುತ್ತದೆ. ಆಸ್ಟ್ರೇಲಿಯಾದಲ್ಲಿ ಕ್ರಿಕೆಟ್ ಋತುವು ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ ಇರುತ್ತದೆ. ಆದ್ದರಿಂದ ಫೈನಲ್ ಆಯೋಜನೆಗೆ ಇಂಗ್ಲೆಂಡ್ ಸೂಕ್ತ ಎಂದು ಸಭೆಯಲ್ಲಿ ಒಮ್ಮತದ ನಿರ್ಧಾರಕ್ಕೆ ಬರಲಾಯಿತು.

‘ಮುಂದಿನ ಮೂರು ಡಬ್ಲ್ಯುಟಿಸಿ ಫೈನಲ್ ಪಂದ್ಯಗಳ ಆಯೋಜನೆಯ ಅವಕಾಶ ಲಭಿಸಿರುವುದು ನಮಗೆ ತುಂಬ ಸಂತಸ ತಂದಿದೆ’ ಎಂದು ಇ.ಸಿ.ಬಿ. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಿಚರ್ಡ್ ಗೌಲ್ಡ್ ಹೇಳಿದ್ದಾರೆ.

‘ಚಾರಿತ್ರಿಕವಾದ ಟೆಸ್ಟ್ ಕ್ರಿಕೆಟ್ ಮಾದರಿಯೊಂದಿಗೆ ನಮ್ಮ ದೇಶದ ಜನರು ಹೊಂದಿರುವ ಅವಿನಾಭಾವ ನಂಟಿಗೆ ಲಭಿಸಿರುವ ಗೌರವ ಇದಾಗಿದೆ. ಡಬ್ಲ್ಯುಟಿಸಿ ಫೈನಲ್‌ಗಳನ್ನು ಆಯೋಜಿಸುವುದು ಹೆಮ್ಮೆಯ ಮತ್ತು ಗೌರವದ ಸಂಗತಿಯಾಗಿದೆ. ಐಸಿಸಿಯೊಂದಿಗೆ ಬೆರೆತು ಯಶಸ್ವಿ ಆಯೋಜನೆ ಮಾಡುತ್ತೇವೆ’ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಭಾರತದಲ್ಲಿ ಟೆಸ್ಟ್ ಮಾದರಿಯು ಹೆಚ್ಚು ಜನಪ್ರಿಯವಲ್ಲ. ಒಂದೊಮ್ಮೆ ಭಾರತದಲ್ಲಿ ಫೈನಲ್ ಆಯೋಜಿಸಿದರೆ ಆತಿಥೇಯ ದೇಶವು ಕ್ವಾಲಿಫೈ ಆಗಿಲ್ಲದೇ ಇದ್ದರೆ ಕ್ರೀಡಾಂಗಣಕ್ಕೆ ಜನ ಹೆಚ್ಚಿನ ಸಂಖ್ಯೆಯಲ್ಲಿ ಬರುವುದಿಲ್ಲ.

ನೂತನ ಸಹಸದಸ್ಯ ರಾಷ್ಟ್ರಗಳು: ಎರಡು ದೇಶಗಳಿಗೆ ಈ ಸಂದರ್ಭದಲ್ಲಿ ಐಸಿಸಿಯ ಸಹಸದಸ್ಯತ್ವ ನೀಡಲಾಯಿತು. ಟಿಮೋರ್ ಲೆಸ್ಟೆ ಕ್ರಿಕೆಟ್ ಫೆಡರೇಷನ್ ಮತ್ತು ಜಾಂಬಿಯಾ ಕ್ರಿಕೆಟ್ ಮಂಡಳಿಗಳಿಗೆ ಸದಸ್ಯತ್ವ ಮಂಜೂರು ಮಾಡಲಾಯಿತು. ಇದರೊಂದಿಗೆ ಐಸಿಸಿಯ ಸಹಸದಸ್ಯರ ಸಂಖ್ಯೆ 110ಕ್ಕೇರಿತು.

ಅಮೆರಿಕ ಕ್ರಿಕೆಟ್ ಮಂಡಳಿಗೆ ತನ್ನ ಆಡಳಿತದೊಳಗಿನ ಏರುಪೇರುಗಳನ್ನು ಸರಿಪಡಿಸಿಕೊಳ್ಳಲು ಮೂರು ತಿಂಗಳುಗಳ ಹೆಚ್ಚುವರಿ ಅವಧಿ ನೀಡಲಾಗಿದೆ. ಈ ಅವಧಿಯಲ್ಲಿ ಶಿಸ್ತು ಮತ್ತು ನಿಯಮಬದ್ಧ ಚುನಾವಣೆಯನ್ನು ನಡೆಸಿ ಆಡಳಿತವನ್ನು ಸುಸೂತ್ರಗೊಳಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಅಮೆರಿಕ ಕ್ರಿಕೆಟ್ ಮಂಡಳಿಯಲ್ಲಿ ಬಹಳ ಸಮಯದಿಂದಲೂ ಗೊಂದಲಗಳಿದ್ದು, ಶೀಘ್ರ ಸರಿಪಡಿಸಿಕೊಳ್ಳಲು ಸೂಚಿಸಲಾಗಿದೆ.

ಸಭೆಯಲ್ಲಿ ತೆಗೆದುಕೊಂಡ ಇನ್ನುಳಿದ ನಿರ್ಧಾರಗಳಲ್ಲಿ; ಗುರುಮೂರ್ತಿ ಪಳನಿ (ಫ್ರಾನ್ಸ್ ಕ್ರಿಕೆಟ್), ಅನುರಾಗ್ ಭಟ್ನಾಗರ್ (ಕ್ರಿಕೆಟ್ ಹಾಂಗ್‌ಕಾಂಗ್, ಚೀನಾ) ಮತ್ತು ಗುರುದೀಪ್ ಕ್ಲೇರ್ (ಕ್ರಿಕೆಟ್ ಕೆನಡಾ) ಅವರನ್ನು ಐಸಿಸಿ ಮುಖ್ಯ ಕಾರ್ಯನಿರ್ವಾಹಕರ ಸಮಿತಿ (ಸಿಇಸಿ)ಗೆ ಸಹಸದಸ್ಯ ಪ್ರತಿನಿಧಿಗಳಾಗಿ ಆಯ್ಕೆ ಮಾಡಲಾಗಿದೆ.



ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಗದೆ ಎಎಫ್‌ಪಿ ಚಿತ್ರ

ನೇಪಾಳ, ಭೂತಾನ್ ತಂಡಗಳಿಗೆ ಪ್ರಶಸ್ತಿ

ನೇಪಾಳ ಮತ್ತು ಭೂತಾನ್ ಕ್ರಿಕೆಟ್ ಮಂಡಳಿಗಳನ್ನು 2024ರ ಸಾಲಿನ ಐಸಿಸಿ ಅಭಿವೃದ್ಧಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಅಮೆರಿಕ ತಂಡವು ಸಹಸದಸ್ಯತ್ವ ರಾಷ್ಟ್ರದ ಪುರುಷರ ತಂಡ ವಿಭಾಗದಲ್ಲಿ ಶ್ರೇಷ್ಠ ಪ್ರಶಸ್ತಿಯನ್ನು ಗಳಿಸಿದೆ. ಹೋದ ವರ್ಷ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆತಿಥೇಯ ಅಮೆರಿಕ ತಂಡವು ಉತ್ತಮವಾಗಿ ಆಡಿತ್ತು. ಪಾಕಿಸ್ತಾನ ತಂಡದ ಎದುರು ಐತಿಹಾಸಿಕ ಜಯ ಸಾಧಿಸಿತ್ತು. ಕೆನಡಾ ವಿರುದ್ಧ ಗೆದ್ದಿತ್ತು.

ಇಂಡೊನೇಷ್ಯಾ, ನಮಿಬಿಯಾ, ಸ್ಕಾಟ್ಲೆಂಡ್, ತಾಂಜಾನಿಯಾ ಮತ್ತು ವನೌಟು ದೇಶಗಳೂ ಪ್ರಶಸ್ತಿ ಗೌರವಕ್ಕೆ ಪಾತ್ರವಾಗಿದೆ.

ಮಹಿಳಾ ಕ್ರಿಕೆಟ್ ಪ್ರೋತ್ಸಾಹ ಯೋಜನೆಯಲ್ಲಿ ಭೂತಾನ್ ಕ್ರಿಕೆಟ್ ಕೌನ್ಸಿಲ್ ಬೋರ್ಡ್ ಮತ್ತು ವನೌಟು ಕ್ರಿಕೆಟ್ ಸಂಸ್ಥೆಗಳು ಇದೇ ಮೊದಲ ಸಲ ಗೌರವಕ್ಕೆ ಪಾತ್ರವಾಗಿದೆ. ಐಸಿಸಿ ವರ್ಷದ ಡಿಜಿಟಲ್ ಅಭಿಮಾನಿಗಳ ಆಕರ್ಷಣೆ ಪುರಸ್ಕಾರ ನೇಪಾಳಕ್ಕೆ ಲಭಿಸಿದೆ.

‘ಐಸಿಸಿ ಅಭಿವೃದ್ಧಿ ಪ್ರಶಸ್ತಿಯ ಜಾಗತಿಕ ವಿಜೇತರನ್ನು ಪ್ರಕಟಿಸಲು ಸಂತಸವಾಗುತ್ತಿದೆ. ಇದು ಸಂಭ್ರಮಿಸುವ ಹೊತ್ತು’ ಎಂದು ಐಸಿಸಿಯ ಮುಖ್ಯಸ್ಥ ಜಯ್ ಶಾ ಹೇಳಿದ್ದಾರೆ.

ಅಫ್ಗಾನಿಸ್ತಾನ ಮಹಿಳಾ ತಂಡಕ್ಕೆ ಐಸಿಸಿ ನೆರವು

ತಾಲಿಬಾನ್ ಆಡಳಿತಕ್ಕೆ ಬೆದರಿ ದೇಶ ತೊರೆದಿರುವ ಅಫ್ಗಾನಿಸ್ತಾನ ಮಹಿಳಾ ಕ್ರಿಕೆಟ್ ಆಟಗಾರ್ತಿಯರಿಗೆ ಐಸಿಸಿಯು ಸಂತಸದ ಸುದ್ದಿ ಪ್ರಕಟಿಸಿದೆ.

ಇದೇ ವರ್ಷ ಭಾರತ ಮತ್ತು ಶ್ರೀಲಂಕಾದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ ಮತ್ತು ಮುಂದಿನ ವರ್ಷ ಇಂಗ್ಲೆಂಡ್‌ನಲ್ಲಿ ನಡೆಯುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಫ್ಗಾನಿಸ್ತಾನ ಮಹಿಳಾ ತಂಡವನ್ನು ಒಳಗೊಳ್ಳಲು ಭಾನುವಾರ ನಡೆದ ವಾರ್ಷಿಕ ಸಭೆಯಲ್ಲಿ ನಿರ್ಣಯಿಸಲಾಯಿತು.

ಮೂರು ಶ್ರೀಮಂತ ಕ್ರಿಕೆಟ್ ಮಂಡಳಿಗಳಾದ ಭಾರತ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಜಂಟಿಯಾಗಿ ಅಫ್ಗನ್ ಮಹಿಳಾ ಕ್ರಿಕೆಟಿಗರಿಗೆ ನೆರವು ನೀಡಲು ಈ ಹಿಂದೆ ಹರಾರೆಯಲ್ಲಿ ನಡೆದಿದ್ದ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಯುವ ಕ್ರಿಕೆಟ್: ಇಂಗ್ಲೆಂಡ್ ಎದುರು ಭಾರತ ಮೇಲುಗೈ

ಚೆಮ್ಸ್‌ಫೋರ್ಡ್ (ಬ್ರಿಟನ್) (ಪಿಟಿಐ): ಭಾರತ ಯುವ ತಂಡದ (19 ವರ್ಷದೊಳಗಿನವರು) ಬೌಲರ್‌ಗಳು, ಭಾನುವಾರ ಆರಂಭಗೊಂಡ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ವಿರುದ್ಧ ಮೇಲುಗೈ ಸಾಧಿಸಿದರು.

ಮಳೆಯಿಂದಾಗಿ ಪಂದ್ಯ ತಡವಾಗಿ ಆರಂಭವಾಯಿತು. ಟಾಸ್ ಗೆದ್ದ ಭಾರತ ತಂಡದ ನಾಯಕ ಆಯುಷ್ ಮ್ಹಾತ್ರೆ ಆತಿಥೇಯರನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ಆದಿತ್ಯ ರಾವತ್ ಹಾಗೂ ಆರ್.ಎಸ್. ಅಂಬರೀಷ್ ಅವರ ದಾಳಿಗೆ ತತ್ತರಿಸಿದ ಇಂಗ್ಲೆಂಡ್, 80 ರನ್‌ಗಳಾಗು ವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡಿತ್ತು. ಈ ವೇಳೆ, ನಾಯಕ ಥಾಮಸ್, ಏಕನಾಥ್ ಸಿಂಗ್ ಅವರೊಂದಿಗೆ 90 ರನ್ ಜೊತೆಯಾಟ ಆಡಿದರು.

ಆತಿಥೇಯರು ದಿನದ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 177 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ 19 ವರ್ಷದೊಳಗಿನವರ ತಂಡ: 44 ಓವರ್‌ಗಳಲ್ಲಿ 6 ವಿಕೆಟ್‌ಗೆ 177 (ಥಾಮಸ್ ರ್‍ಯೂ 59, ಏಕನಾಥ್ ಔಟಾಗದೇ 66; ಆದಿತ್ಯ 2ಕ್ಕೆ 42, ಆರ್.ಎಸ್. ಅಂಬರೀಶ್ 2ಕ್ಕೆ 39)

ಲಾಂಗ್ ಜಂಪ್: ಶ್ರೀಶಂಕರ್‌ಗೆ ಪ್ರಶಸ್ತಿ


ಮುರಳಿ ಶ್ರೀಶಂಕರ್ ‘ಎಕ್ಸ್’ ಚಿತ್ರ

ನವದೆಹಲಿ (ಪಿಟಿಐ): ಭಾರತದ ಮುರಳಿ ಶ್ರೀಶಂಕರ್ ಅವರು ಪೋರ್ಚುಗಲ್‌ನಲ್ಲಿ ನಡೆದ ಮಯಾ ಸಿಡೇಡ್ ಡು ಡೆಸ್ಪೋರ್ಟೊ ಇನ ಮಯಾ ಕೂಟದಲ್ಲಿ ಪ್ರಶಸ್ತಿ ಗಳಿಸಿದರು.

ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟರ್ ಟೂರ್ ಕಂಚಿನ ಪದಕ ಮಟ್ಟದ ಕೂಟ ಇದಾಗಿದೆ. ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಶ್ರೀಶಂಕರ್ ಅವರು ಶನಿವಾರ ತಡರಾತ್ರಿ ನಡೆದ ಪುರುಷರ ವಿಭಾಗದ ಲಾಂಗ್ ಜಂಪ್‌ನಲ್ಲಿ 7.75 ಮೀಟರ್ಸ್ ದೂರ ಜಿಗಿದು ಪ್ರಶಸ್ತಿ ಗಳಿಸಿದರು.

ಶ್ರೀಶಂಕರ್ ಅವರು ತಮ್ಮ ಮೊದಲ ಜಂಪ್‌ನಲ್ಲಿ 7.63 ಮೀ ದೂರ ಜಿಗಿದರು. ತಮ್ಮ ಎರಡನೇ ಪ್ರಯತ್ನದಲ್ಲಿಯೇ ಅವರು ಗೆಲುವನ್ನು (7.75ಮೀ) ಖಚಿತ ಪಡಿಸಿಕೊಂಡರು ಮತ್ತು ನಂತರದಲ್ಲಿ (ಟೈ ಬ್ರೇಕರ್) 7.69 ಮೀ ಸಾಧನೆ ಮಾಡಿದರು. ನಂತರದ ಸುತ್ತಿನಲ್ಲಿ ಫೌಲ್ ಆಯಿತು. ಕೊನೆಯ ಎರಡು ಜಿಗಿತಗಳಲ್ಲಿ ಅವರು ಕ್ರಮವಾಗಿ 6.12 ಮೀ ಮತ್ತು 7.58 ಮೀ ಸಾಧನೆ ಮಾಡಿದರು.

ಪೋಲೆಂಡ್‌ನ ಪಿಯೊಟರ್ ತರ್ಕೋವಸ್ಕಿ ಅವರು ಕೂಡ 7.75 ಮೀ ಜಿಗಿತ ದಾಖಲಿಸಿ ಶ್ರೀಶಂಕರ್ ದಾಖಲೆ ಸಮ ಮಾಡಿದರು. ಆದರೆ, ಅವರ ಶ್ರೇಷ್ಠ ಜಂಪ್ 7.58 ಮೀ ಆಗಿತ್ತು. ಅದೇ ಭಾರತದ ಶ್ರೀಶಂಕರ್ ಅವರದ್ದು 7.69 ಮೀ. ಆಯಿತು.

ಇಬ್ಬರು ಅಥ್ಲೀಟ್‌ಗಳ ಫಲಿತಾಂಶವು ಟೈ ಆದ ಸಂದರ್ಭದಲ್ಲಿ ಅವರಿಬ್ಬರೂ ಸಾಧಿಸಿದ ಜಿಗಿತಗಳ ಫಲಿತಾಂಶದಲ್ಲಿ ಎರಡನೇಯ ಶ್ರೇಷ್ಠ ಸಾಧನೆಯನ್ನು ಟೈಬ್ರೇಕರ್‌ಗೆ ಪರಿಗಣಿಸಲಾಗುತ್ತದೆ.

ಕೇರಳದ ಶ್ರೀಶಂಕರ್ ಅವರು ಮುಂಬರುವ ಯುರೋಪ್ ಮತ್ತು ಸೆಂಟ್ರಲ್ ಏಷ್ಯಾ ಕೂಟಗಳಲ್ಲಿ ಭಾಗವಹಿಸುವ ಅವಕಾಶ ನೀಡಲಾಗುತ್ತದೆ.

ಸೆಮಿಫೈನಲ್‌ಗೆ ಕೋನೇರು ಹಂಪಿ

ಮಹಿಳೆಯರ ಚೆಸ್ ವಿಶ್ವಕಪ್: ಆರ್. ವೈಶಾಲಿಗೆ ಸೋಲು

ಬಟುಮಿ, ಜಾರ್ಜಿಯಾ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಫಿಡೆ ಮಹಿಳೆಯರ ಚೆಸ್ ವಿಶ್ವಕಪ್ ಸೆಮಿಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಕ್ವಾರ್ಟರ್‌ಫೈನಲ್ ಎರಡನೇ ಸುತ್ತಿನಲ್ಲಿ ಅವರು ಚೀನಾದ ಯುಕ್ಸಿನ್ ಸಾಂಗ್ ವಿರುದ್ಧ ಡ್ರಾ ಮಾಡಿಕೊಂಡರು. ಶನಿವಾರ ನಡೆದಿದ್ದ ಮೊದಲ ಸುತ್ತಿನಲ್ಲಿ ಹಂಪಿ ಜಯಿಸಿದ್ದರು. ಅದರಿಂದಾಗಿ ಸೆಮಿಫೈನಲ್ ಹಾದಿ ಸುಗಮವಾಯಿತು. ಇದರೊಂದಿಗೆ ಅವರು ನಾಲ್ಕನೇ ಸ್ಥಾನ ಪಡೆಯುವುದು ಖಚಿತವಾಗಿದೆ.

ಒಂದೊಮ್ಮೆ ಅವರು ಅಗ್ರ ಮೂರರಲ್ಲಿ ಸ್ಥಾನ ಗಳಿಸಿದರೆ ಮುಂಬರುವ ಮಹಿಳೆಯರ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಗೆ ಅರ್ಹತೆ ಪಡೆಯಲಿದ್ದಾರೆ.

ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ. ಹಾರಿಕಾ ಮತ್ತು ಇಂಟರ್‌ನ್ಯಾಷನಲ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ಮುಖಾಮುಖಿಯಾಗಿದ್ದ ಇನ್ನೊಂದು ಹಣಾಹಣಿಯು ಡ್ರಾ ಆಯಿತು. ಸೋಮವಾರ ನಡೆಯಲಿರುವ ಟೈಬ್ರೇಕರ್‌ನಲ್ಲಿ ಅವರಿಬ್ಬರೂ ಪೈಪೋಟಿ ನಡೆಸುವರು.

ಕೋನೇರು ಹಂಪಿ

ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರಿಗೆ ಅದೃಷ್ಟ ಜೊತೆ ನೀಡಲಿಲ್ಲ. ಅಲ್ಪ ಅಂತರದಲ್ಲಿ ಅವರು ಮಾಜಿ ವಿಶ್ವ ಚಾಂಪಿಯನ್ ಝೂಂಗ್ಯೆ ಟ್ಯಾನ್ ವಿರುದ್ಧ ಸೋತರು.

ಮೂರನೇ ಸ್ಥಾನಕ್ಕೆ ಕಾರ್ಲ್‌ಸನ್ ಪೈಪೋಟಿ

ಲಾಸ್ ವೇಗಸ್ (ಅಮೆರಿಕ), (ಪಿಟಿಐ): ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್ ಟೂರ್ನಿಯು ಅಂತಿಮ ಹಂತ ತಲುಪುತ್ತಿರುವಂತೆ, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮರಳಿ ಲಯ ಕಂಡುಕೊಳ್ಳುತ್ತಿದ್ದಾರೆ. ಶನಿವಾರ ನಡೆದ ಪಂದ್ಯಗಳಲ್ಲಿ ಅವರು ಭಾರತದ ಅರ್ಜುನ್ ಇರಿಗೇಶಿ ಅವರನ್ನು 2–0 ಯಿಂದ ಮತ್ತು ಆರ್.ಪ್ರಜ್ಞಾನಂದ ಅವರನ್ನು 3–1 ರಿಂದ ಸೋಲಿಸಿದರು.

ಅಮೆರಿಕದ ಹ್ಯಾನ್ಸ್ ನೀಮನ್ ಮತ್ತು ಸ್ವದೇಶದ ಲೆವೋನ್ ಅರೋನಿಯನ್ ಅವರು ಈ ಮೊದಲೇ ಫೈನಲ್ ತಲುಪಿದ್ದರು. ಈಗ, ಕಾರ್ಲ್‌ಸನ್ ಅವರು ಮೂರು ಮತ್ತು ನಾಲ್ಕನೇ ಸ್ಥಾನ ನಿರ್ಧಾರಕ್ಕೆ ನಡೆಯುವ ಪಂದ್ಯದಲ್ಲಿ ಅಮೆರಿಕದ ಹಿಕಾರು ನಕಾಮುರ ಅವರನ್ನು ಎದುರಿಸಲಿದ್ದಾರೆ.

6.50 ಕೋಟಿ ಬಹುಮಾನ ಮೊತ್ತದ ಟೂರ್ನಿಯಲ್ಲಿ ವಿಜೇತ ಆಟಗಾರ ₹1.72 ಕೋಟಿ ಬಹುಮಾನ ಪಡೆಯಲಿದ್ದಾರೆ.

ಪ್ರಜ್ಞಾನಂದ ಅವರು ಈ ಮೊದಲು ಗುಂಪು ಹಂತದಲ್ಲಿ ಕಾರ್ಲ್‌ಸನ್ ಮೇಲೆ ಜಯಗಳಿಸಿದ್ದರಿಂದ ಅವರಿಗೆ ಫೈನಲ್ ಹಾದಿ ತಪ್ಪಿತ್ತು. ಕ್ಲಾಸಿಫಿಕೇಷನ್ ಪಂದ್ಯದಲ್ಲಿ ಮೊದಲ ಆಟದಲ್ಲಿ ಪ್ರಜ್ಞಾನಂದ ಜಯಗಳಿಸಿದರು. ಆದರೆ ಎರಡನೇ ಪಂದ್ಯದಲ್ಲಿ ಕಾರ್ಲ್‌ಸನ್ ಗೆದ್ದ ಕಾರಣ ಸ್ಕೋರ್ ಸಮನಾಯಿತು. ಟೈಬ್ರೇಕ್ ಬ್ಲಿಟ್ಝ್ ಪಂದ್ಯಗಳಲ್ಲಿ ನಾರ್ವೆಯ ಆಟಗಾರ ಜಯಗಳಿಸಿದರು.

ಮುಂದಿನ ಪಂದ್ಯದಲ್ಲಿ ಕಾರ್ಲ್‌ಸನ್ ಅವರು ಅರ್ಜುನ್ ಇರಿಗೇಶಿ ಅವರನ್ನು ಸೋಲಿಸಿ ಮೂರನೇ ಸ್ಥಾನಕ್ಕಾಗಿ ಆಡುವ ಅವಕಾಶ ಪಡೆದುಕೊಂಡರು.

ಅಂತಿಮ ದಿನ ಐದು– ಆರನೇ ಸ್ಥಾನ ನಿರ್ಧಾರಕ್ಕಾಗಿ ನಡೆಯುವ ಪಂದ್ಯದಲ್ಲಿ ಅರ್ಜುನ್, ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು, ಏಳು– ಎಂಟನೇ ಸ್ಥಾನಕ್ಕಾಗಿ ನಡೆಯುವ ಸೆಣಸಾಟದಲ್ಲಿ ಪ್ರಜ್ಞಾನಂದ ಅವರು ಅಮೆರಿಕದ ಇನ್ನೊಬ್ಬ ಆಟಗಾರ ವೆಸ್ಲಿ ಸೊ ಅವರನ್ನು ಎದುರಿಸಲಿದ್ದಾರೆ.

ಬ್ಯಾಸ್ಕೆಟ್‌ಬಾಲ್: ರಾಜ್‌ಕುಮಾರ್ ಬಿ.ಸಿ ತಂಡಕ್ಕೆ ಜಯ

ಬೆಂಗಳೂರು: ರಾಜ್‌ಕುಮಾರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಸಿ’ ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 62–51ರಿಂದ ಮೌಂಟ್ಸ್ ಕ್ಲಬ್ ತಂಡದ ಎದುರು ಜಯಸಾಧಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಲೀಗ್ ಪಂದ್ಯದಲ್ಲಿ, ರಾಜ್‌ಕುಮಾರ್ ಬಿ.ಸಿ ಪರ ಧನೀಷ್ 19 ಅಂಕ ಗಳಿಸಿದರೆ, ದೇವಿಪ್ರಸಾದ್ 13 ಪಾಯಿಂಟ್ಸ್ ಕಲೆಹಾಕಿದರು. ಮೌಂಟ್ಸ್ ಕ್ಲಬ್ ತಂಡದ ಬಿನು 15 ಅಂಕ ಸಂಪಾದಿಸಿದರು.

ಇನ್ನೊಂದು ಪಂದ್ಯದಲ್ಲಿ ಎಚ್‌ಬಿಆರ್ ಬಿ.ಸಿ ತಂಡವು ಸಾಯಿ ಸಂಕೇತ್ (23 ಅಂಕ) ಹಾಗೂ ಶಶಿಧರ್ (19 ಅಂಕ) ಆಟದ ಬಲದಿಂದ 75–65ರಿಂದ ಹೂಪ್ಸ್ 7 ಬಿ.ಸಿ ತಂಡವನ್ನು ಸೋಲಿಸಿತು. ಹೂಪ್ಸ್ ಬಿ.ಸಿ ತಂಡದ ಪ್ರಾಣೇಶ್ (30 ಅಂಕ) ಹಾಗೂ ಸಮರ್ಥ್ (21 ಅಂಕ) ಪ್ರಬಲ ಪೈಪೋಟಿ ನೀಡಿದರು.

ಎಮ್‌ಇಜಿ & ಸೆಂಟರ್‌ಗೆ ಜಯ: ಲೀಗ್‌ನ ಮತ್ತೊಂದು ಪಂದ್ಯದಲ್ಲಿ ಎಮ್‌ಇಜಿ & ಸೆಂಟರ್ ತಂಡವು 85–62ರಿಂದ ಡಿಆರ್‌ಡಿಒ ತಂಡವನ್ನು ಮಣಿಸಿತು. ಎಮ್‌ಇಜಿ & ಸೆಂಟರ್ ತಂಡದ ಅಮಲ್ ಎಸ್. 23 ಅಂಕ ಹಾಗೂ ಜಿನು ಥಾಮಸ್ 19 ಅಂಕ ಗಳಿಸಿದರು. ಡಿಆರ್‌ಡಿಒ ಪರ ರಾಕೇಶ್ 14 ಪಾಯಿಂಟ್ಸ್ ಕಲೆಹಾಕಿದರು.

ಗಿಲ್ ಪಡೆ– ಮ್ಯಾಂಚೆಸ್ಟರ್ ಮಿಲನ

ಯುನೈಟೆಡ್ ಫುಟ್‌ಬಾಲ್ ಆಟಗಾರರ ಭೇಟಿ ಮಾಡಿದ ಭಾರತ ಕ್ರಿಕೆಟ್ ತಂಡ

ಮ್ಯಾಂಚೆಸ್ಟರ್ (ಪಿಟಿಐ): ಶುಭಮನ್ ಗಿಲ್ ನಾಯಕತ್ವದ ಭಾರತ ಬಳಗವು ಭಾನುವಾರ ಸುಪ್ರಸಿದ್ಧ ಮ್ಯಾಂಚೆಸ್ಟರ್ ಫುಟ್‌ಬಾಲ್ ಕ್ಲಬ್ ತಂಡವನ್ನು ಭೇಟಿ ಮಾಡಿತು.

ಉಭಯ ತಂಡಗಳ ಆಟಗಾರರು ಪರಸ್ಪರ ತಮ್ಮ ಪೋಷಾಕುಗಳನ್ನು ವಿನಿಮಯ ಮಾಡಿಕೊಂಡರು. ಕುಶಲೋಪರಿ ನಡೆಸಿದರು ಮತ್ತು ಕೆಲವು ಲಘು ವ್ಯಾಯಾಮಗಳನ್ನು ಮಾಡಿದರು.

‘ಯುನೈಟೆಡ್ ಇನ್ ಮ್ಯಾಂಚೆಸ್ಟರ್’ ಎಂಬ ಒಕ್ಕಣೆಯೊಂದಿಗೆ ಬಿಸಿಸಿಐ ತನ್ನ ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರಗಳನ್ನು ಹಂಚಿಕೊಂಡಿದೆ.

ರೆಡ್ ಡೆವಿಲ್ಸ್ ತಂಡದ ತರಬೇತಿ ಮೈದಾನವಾದ ಕೇರಿಂಗ್‌ಟನ್‌ನಲ್ಲಿ ಶುಭಮನ್ ಗಿಲ್ ಮತ್ತು ರಿಷಭ್ ಪಂತ್ ಅವರು ಫುಟ್‌ಬಾಲ್ ಆಡುತ್ತಿರುವ ಚಿತ್ರಗಳಿವೆ. ‘ಅಡಿದಾಸ್’ ಹಂಚಿಕೊಂಡಿರುವ ಚಿತ್ರದಲ್ಲಿ ಭಾರತದ ವೇಗಿ ಮೊಹಮ್ಮದ್ ಸಿರಾಜ್ ಅವರು ಯುನೈಟೆಡ್ ತಂಡದ ಖ್ಯಾತನಾಮ ಡಿಫೆಂಡರ್ ಹ್ಯಾರಿ ಮೆಗ್ವೈರ್ ಅವರಿಗೆ ಬೌಲಿಂಗ್ ಮಾಡುತ್ತಿರುವ ದೃಶ್ಯವಿದೆ.

ಉಭಯ ತಂಡಗಳ ಮುಖ್ಯ ಕೋಚ್‌ಗಳಾದ ರುಬೇನ್ ಅಮೊರಿಮ್ ಮತ್ತು ಗೌತಮ್ ಗಂಭೀರ್ ಅವರು ಜೊತೆಗೂಡಿ ನಿಂತಿರುವ ಚಿತ್ರವು ಕೂಡ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಗಿಲ್ ಅವರು ಬ್ರುನೊ ಫರ್ನಾಂಡಿಸ್, ಸಿರಾಜ್ ಅವರು ಅಮದ್ ಡಿಯಾಲೊ, ಜಸ್‌ಪ್ರೀತ್ ಬೂಮ್ರಾ ಅವರು ಮೆಸನ್ ಮೌಂಟ್ ಮತ್ತು ಹ್ಯಾರಿ ಅವರೊಂದಿಗೆ ಮಾತನಾಡುತ್ತ ನಿಂತಿರುವ ಚಿತ್ರಗಳೂ ಇವೆ.

ಯುನೈಟೆಡ್ ತಂಡದ ಅಧಿಕಾರಿಗಳು ಸ್ವಾಗತ ಕೋರುವುದರೊಂದಿಗೆ ಕಾರ್ಯಕ್ರಮ ಶುರುವಾಯಿತು. ಉಭಯ ತಂಡಗಳ ಆಟಗಾರರು ಸಾಂಕೇತಿಕವಾಗಿ ತಮ್ಮ ಜೆರ್ಸಿಗಳನ್ನು ವಿನಿಮಯ ಮಾಡಿಕೊಂಡರು. ಉಭಯ ತಂಡಗಳ ಕೋಚ್‌ಗಳು ನಾಯಕತ್ವ, ತಂಡದ ಡೈನಾಮಿಕ್ಸ್ ಮತ್ತು ಉನ್ನತ ದರ್ಜೆಯ ಅಥ್ಲೀಟ್‌ಗಳನ್ನು ನಿರ್ವಹಿಸುವ ಕುರಿತ ಸಂವಾದ ನಡೆಸಿದರು.

‘ಎರಡು ವಿಭಿನ್ನ ಕ್ರೀಡೆಗಳ ತಂಡಗಳ ಈ ಮಿಲನವು ಕ್ರೀಡಾ ಕ್ಷೇತ್ರದಲ್ಲಿ ಹೊಸ ಹೆಜ್ಜೆಗುರುತು ಮೂಡಿಸಿದೆ. ಅಡಿದಾಸ್ ಬ್ರ್ಯಾಂಡ್ ಎರಡು ಮಹಾನ್ ತಂಡಗಳನ್ನು ಒಂದು ವೇದಿಕೆಗೆ ಕರೆತಂದಿದೆ’ ಎಂದು ಕ್ರೀಡಾಪೋಷಾಕು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತ ಕ್ರಿಕೆಟ್ ತಂಡ ಮತ್ತು ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ಆಟಗಾರರು ಭೇಟಿಯಾದಾಗ ಚಿತ್ರ: ಬಿಸಿಸಿಐ ‘ಎಕ್ಸ್’ ಖಾತೆ

ಅನ್ಷುಲ್ ಕಾಂಭೋಜ್ ಆಯ್ಕೆ

ಮ್ಯಾಂಚೆಸ್ಟರ್ (ಪಿಟಿಐ): ಹರಿಯಾಣ ಕ್ರಿಕೆಟ್ ತಂಡದ ವೇಗಿ ಅನ್ಷುಲ್ ಕಾಂಭೋಜ್ ಅವರನ್ನು ಭಾರತ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ.

ಎಡಗೈ ವೇಗಿ ಅರ್ಷದೀಪ್ ಸಿಂಗ್ ಮತ್ತು ವೇಗಿ ಆಕಾಶ್ ದೀಪ್ ಅವರು ಗಾಯಗೊಂಡಿದ್ದು ನಾಲ್ಕನೇ ಟೆಸ್ಟ್‌ನಲ್ಲಿ ಆಡುವುದು ಖಚಿತವಿಲ್ಲ. ಆದ್ದರಿಂದ ಅನ್ಷುಲ್ ಅವರನ್ನು ಆಯ್ಕೆ ಮಾಡಲಾಗಿದೆ. ಇದೇ 23ರಿಂದ ಟೆಸ್ಟ್ ಆರಂಭವಾಗಲಿದೆ.

ಆಕಾಶ್ ದೀಪ್ ಅವರು ತೊಡೆಸಂಧು ನೋವಿನಿಂದ ಚೇತರಿಸಿಕೊಂಡಿಲ್ಲ. ಅವರು ಈ ಸರಣಿಯ ಎರಡು ಟೆಸ್ಟ್‌ಗಳಲ್ಲಿ ಆಡಿದ್ದರು.

ಕುಸ್ತಿ: ಭಾರತ ಮಹಿಳಾ ತಂಡಕ್ಕೆ ಪ್ರಶಸ್ತಿ

ಬುಡಾಪೆಸ್ಟ್ (ಪಿಟಿಐ): ಭಾರತದ ಮಹಿಳಾ ಕುಸ್ತಿಪಟುಗಳು ಇಲ್ಲಿ ನಡೆದ ಯುನೈಟೆಡ್ ವಿಶ್ವ ಕುಸ್ತಿ ರ್‍ಯಾಂಕಿಂಗ್ ಚಾಂಪಿಯನ್‌ಷಿಪ್‌ನಲ್ಲಿ ತಂಡ ಪ್ರಶಸ್ತಿ ಜಯಿಸಿದರು.

ಉದಯೋನ್ಮುಖ ಕುಸ್ತಿಪಟುಗಳಾದ ಪ್ರಿಯಾ ಮಲಿಕ್ ಹಾಗೂ ಮನೀಷಾ ಭಾನ್‌ವಾಲಾ ಅವರು ಶನಿವಾರ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದುಕೊಂಡರು. ಈ ಮೂಲಕ, ಟೂರ್ನಿಯಲ್ಲಿ ಆರು ಪದಕಗಳೊಂದಿಗೆ (ತಲಾ ಎರಡು ಚಿನ್ನ, ಬೆಳ್ಳಿ ಹಾಗೂ ಕಂಚು) ಭಾರತದ ಮಹಿಳಾ ಕುಸ್ತಿಪಟುಗಳು ಪಾರಮ್ಯ ಮೆರೆದರು.

ಮಹಿಳೆಯರ 76 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಪ್ರಿಯಾ ಅವರು ಫೈನಲ್‌ನಲ್ಲಿ ಬ್ರೆಜಿಲ್‌ನ ಥಮೈರಸ್ ಮಾರ್ಟಿನ್ಸ್ ಮಶಾಡೊ ಎದುರು 3–4ರಿಂದ ಪರಾಭವಗೊಂಡರು. ಏಷ್ಯನ್ ಚಾಂಪಿಯನ್ ಮನೀಷಾ ಅವರು 62 ಕೆ.ಜಿ. ವಿಭಾಗದಲ್ಲಿ, ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಬೆಲಾರಸ್‌ನ ಕ್ರಿಸ್ಟಿನಾ ಸಜಿಕಿನಾ ಅವರನ್ನು ಮಣಿಸಿದರು.

ಇದಕ್ಕೂ ಮೊದಲು, ಒಲಿಂಪಿಯನ್ ಅಂತಿಮ್ ಪಂಘಲ್ ಅವರು 53 ಕೆ.ಜಿ. ವಿಭಾಗದಲ್ಲಿ ಹಾಗೂ ಹರ್ಷಿತಾ ಅವರು 72 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. 57 ಕೆ.ಜಿ. ವಿಭಾಗದಲ್ಲಿ ನೇಹಾ ಸಂಗ್ವಾನ್ ಬೆಳ್ಳಿ ಹಾಗೂ 50 ಕೆ.ಜಿ. ವಿಭಾಗದಲ್ಲಿ ನೀಲಂ ಅವರು ಕಂಚಿನ ಪದಕ ಗೆದ್ದಿದ್ದರು.

ಸುಮಿತ್‌ಗೆ ಬೆಳ್ಳಿ: ಕುಸ್ತಿಪಟುಗಳಾದ ಸುಮಿತ್ ಹಾಗೂ ಅನಿಲ್ ಮೋರ್ ಅವರು ಗ್ರೀಕೊ ರೋಮನ್ ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರು.

ಸುಮಿತ್ ಅವರು ಪುರುಷರ 60 ಕೆ.ಜಿ. ಸ್ಪರ್ಧೆಯ ಫೈನಲ್ ಪಂದ್ಯದಲ್ಲಿ ಅಜರ್‌ಬೈಜಾನ್‌ನ ನಿಹಾತ್ ಮಮ್ಮಾದ್ಲಿ ಎದುರು 0–5ರಿಂದ ಪರಾಭವಗೊಂಡರು.

ವಿಶ್ವ ನಂ.1 ಅನಿಲ್, 55 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಇಕ್ತಿಯೊರ್ ಬೊಟಿರೊವ್ ವಿರುದ್ಧ 7–4ರಿಂದ ಗೆಲುವು ಸಾಧಿಸಿದರು.

ಜಾಗತಿಕ ವಿವಿ ಕೂಟ: ಶ್ರೀಹರಿ ದಾಖಲೆ

ಬರ್ಲಿನ್ (ಪಿಟಿಐ): ಬೆಂಗಳೂರಿನ ಶ್ರೀಹರಿ ನಟರಾಜ್ ಜಾಗತಿಕ ವಿಶ್ವವಿದ್ಯಾಲಯ ಕ್ರೀಡಾಕೂಟದ ಈಜು ವಿಭಾಗದಲ್ಲಿ ದಾಖಲೆಗಳನ್ನು ಬರೆಯುವುದನ್ನು ಮುಂದುವರಿಸಿದ್ದಾರೆ.

ಭಾನುವಾರ ನಡೆದ ಪುರುಷರ 100 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅವರು 49.46 ಸೆಕೆಂಡುಗಳಲ್ಲಿ ಗುರಿ ಮುಟ್ಟಿ, ಸೆಮಿಫೈನಲ್‌ಗೆ ಅರ್ಹತೆ ಗಳಿಸಿದರು. ಇದರೊಂದಿಗೆ ಭಾರತೀಯ ಈಜುಪಟುವೊಬ್ಬರು ದಾಖಲಿಸಿದ ಶ್ರೇಷ್ಠ ಸಮಯವೆಂಬ ಹೆಗ್ಗಳಿಕೆ ಅವರದ್ದಾಯಿತು.

ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಶ್ರೀಹರಿ ಅವರು ಇಲ್ಲಿ 2008ರಲ್ಲಿ ವೀರಧವಳ್ ಖಾಡೆ (49.47ಸೆ) ಅವರ ದಾಖಲೆಯನ್ನು ಮೀರಿ ನಿಂತರು. ಸ್ಪರ್ಧೆಯ 6ನೇ ಹೀಟ್ಸ್‌ನಲ್ಲಿ ಅವರು ಈಜಿದರು. ಒಟ್ಟಾರೆ 12ನೇ ಸ್ಥಾನ ಗಳಿಸಿ, ಸೆಮಿಫೈನಲ್ ಪ್ರವೇಶಿಸಿದರು. ಹೋದ ಶುಕ್ರವಾರ ಅವರು 200 ಮೀ ಫ್ರೀಸ್ಟೈಲ್ ನಲ್ಲಿಯೂ ತಮ್ಮ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದರು.

ಈಜು ಕ್ರೀಡೆಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಮಾಡಿದ ದಾಖಲೆಗಳನ್ನು ‘ನ್ಯಾಷನಲ್ ರೆಕಾರ್ಡ್’ ಎಂದು ಪರಿಗಣಿಸಲಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದ ಕೂಟಗಳಲ್ಲಿ ದಾಖಲಾದ ಸಮಯಗಳನ್ನು ‘ಶ್ರೇಷ್ಠ ಭಾರತೀಯ ದಾಖಲೆ’ ಎಂದೇ ಉಲ್ಲೇಖಿಸಲಾಗುತ್ತದೆ.

‘ಡಿ’ ಗುಂಪಿನಲ್ಲಿ ಅಗ್ರಸ್ಥಾನಕ್ಕೆ ಭಾರತ

ಸೊಲೊ (ಇಂಡೊನೇಷ್ಯಾ) (ಪಿಟಿಐ): ಗೆಲುವಿನ ಓಟ ಮುಂದುವರಿಸಿರುವ ಭಾರತ ತಂಡ, ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ ಡಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಭಾನುವಾರ ನಡೆದ ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತ 110–100 ರಿಂದ ಹಾಂಗ್ ಕಾಂಗ್ ತಂಡವನ್ನು ಸೋಲಿಸಿತು.

ಈ ಎರಡೂ ತಂಡಗಳು ಈ ಮೊದಲೇ ನಾಕೌಟ್‌ಗೆ ಸ್ಥಾನ ಕಾದಿರಿಸಿದ್ದವು. ಭಾರತ ತಂಡವು ಸೋಮವಾರ ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಮೊದಲ ಬಾರಿ ಈ ಟೂರ್ನಿಯಲ್ಲಿ ಆಡುತ್ತಿರುವ ಕನ್ನಡಿಗ ಆಟಗಾರ್ತಿ ರುಜುಲಾ ರಾಮು 11–8 ರಿಂದ ಐಪಿ ಸುಮ್ ಯಾವು ಅವರನ್ನು ಸೋಲಿಸಿ ಭಾರತಕ್ಕೆ ಮುನ್ನಡೆ ಒದಗಿಸಿದರು. ಭಾರ್ಗವ್ ರಾಮ್ ಅರಿಗೆಲಾ ಮತ್ತು ವಿಶ್ವ ತೇಜ್ ಗೊಬ್ಬುರು 22–13 ರಿಂದ ಚೆಯುಂಗ್ ಸಾಯಿ ಶಿಂಗ್ ಮತ್ತು ಡೆಂಗ್ ಚಿ ಫೈ ಅವರನ್ನು ಸೋಲಿಸಿ ಭಾರತದ ಮುನ್ನಡೆ ಹೆಚ್ಚಿಸಿದರು.

ಹಾಂಗ್ ಕಾಂಗ್‌ನ ಲಾಮ್ ಕಾ ತೊ ಅವರು ಭಾರತದ ರೌನಕ್ ಚೌಹಾನ್ ಎದುರು ಸೋತರೂ ಹಿನ್ನಡೆ ತಗ್ಗಿಸಿದರು. ಐದು ಪಂದ್ಯಗಳ ನಂತರ ಎರಡು ತಂಡಗಳ ಅಂತರ 55–49ಕ್ಕೆ ತಗ್ಗಿತ್ತು.

ವಿಶ್ವದ ಅಗ್ರ ಜೂನಿಯರ್ ಆಟಗಾರ್ತಿ ತನ್ವಿ ಶರ್ಮಾ ಅವರು ಲಿಯು ಹೊಯ್ ಕಿಯು ಆ್ಯನಾ ಅವರನ್ನು ಸೋಲಿಸಿ ಭಾರತಕ್ಕೆ ಹಿಡಿತ ಒದಗಿಸಿದರು. ಮುಂದಿನ ನಾಲ್ಕು ಪಂದ್ಯಗಳು ಹೋರಾಟದಿಂದ ಕೂಡಿದ್ದರೂ ಭಾರತದ ಗೆಲುವಿಗೆ ಸಮಸ್ಯೆಯಾಗಲಿಲ್ಲ.